ಶನಿವಾರ, ಜುಲೈ 1, 2023 | ₹ 7.00

www.prajavani.net

prajavani.net prajavani prajavani prajavani

# ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ರೈತರ ಸಂತಸ**

ರಾಷ್ಟ್ರೀಯ ಭತ್ತದ ದಿನದ ಅಂಗವಾಗಿ ನೇಪಾಳದ ಕಠ್ಮಂಡುವಿನಲ್ಲಿ ರೈತ ಮಹಿಳೆ ಗದ್ದೆಯಲ್ಲಿ ಸಸಿಗಳನ್ನು ನೆಟ್ಟು ಸಂತಸ ಪಟ್ಟರು



ಬಹಿರಂಗವಾಗಿ ಮಾತನಾಡದಂತೆ ಮುಖಂಡರಿಗೆ ತಾಕೀತು • ಬಿ.ಎಸ್. ಯಡಿಯೂರಪ್ಪ ಅವರಿಗೆ ಮಾತುಕತೆ ಹೊಣೆ

# ಅತೃಪ್ತಿ ಶಮನಕ್ಕೆ ಬಿಜೆಪಿ ನಾಯಕರ ಕಸರತ್ತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಕ್ಷದೊಳಗೆ ಭುಗಿಲೆದ್ದ ಅಸಮಾಧಾನದಿಂದ ಕಂಗೆಟ್ಟ ಬಿಜೆಪಿ ನಾಯಕರು, ಅತೃಪ್ತಿಯ ಕಿಡಿಯನ್ನು ಹೊರಚೆಲ್ಲುತ್ತಿದ್ದ ಪ್ರಮುಖರ ಸಭೆ ಕರೆದು, ಅಂತರ್ಯುದ್ಧವನ್ನು ಶಮನ ಮಾಡುವ ಯತ್ನ ನಡೆಸಿದ್ದಾರೆ.

ವಿಧಾನಸಭೆ ಚುನಾವಣೆ ಸೋಲಿನ ಬಳಿಕ, ಆತ್ಮವಿಮರ್ಶೆಯ ಬದಲು ಪರಸ್ಪರ ಆರೋಪದ ಹಾದಿಯನ್ನು ಪ್ರಮುಖರು ಹಿಡಿದಿದ್ದರು. ಪಕ್ಷದೊಳಗಿನ ಭಿನ್ನಮತವನ್ನು ಗಂಭೀರವಾಗಿ ಪರಿಗಣಿಸಿದ್ದ ವರಿಷ್ಠರು, ಎಲ್ಲರನ್ನೂ ಕರೆದು ಮಾತುಕತೆ ನಡೆಸಿ, ಸ್ಪಷ್ಟ ಸೂಚನೆಯನ್ನು ನೀಡಿ ಎಂಬ ಸಂದೇಶ ರವಾನಿಸಿದ್ದರು.

ಪಕ್ಷದ ಕಚೇರಿಯಲ್ಲಿ ಶುಕ್ರವಾರ ಸಭೆ ನಡೆದ ಸಭೆಯಲ್ಲಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಬಸವರಾಜ ಬೊಮ್ಮಾಯಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜು ಪಾಟೀಲ್, ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಮತ್ತಿತರರು ಭಾಗವಹಿಸಿದ್ದರು.

ಪಕ್ಷಕ್ಕೆ ಮುಜುಗರ ತರುವಂತೆ ಹೇಳಿಕೆ ನೀಡುವವರನ್ನು ಕರೆದು ಮಾತನಾಡುವ ಜವಾಬ್ದಾರಿಯನ್ನು ಬಿ.ಎಸ್.ಯಡಿಯೂರಪ್ಪ ಅವರಿಗೆ ನೀಡುವ ನಿರ್ಣಯವನ್ನು ಸಭೆ ಕೈಗೊಂಡಿತು. ಅಸಮಾಧಾನವಿದ್ದರೆ ಪಕ್ಷದ ವೇದಿಕೆಯಲ್ಲಿ ಚರ್ಚಿಸಬೇಕೇ ವಿನಃ ಮಾಧ್ಯಮಗಳೆದುರು ಹೇಳಿಕೆ ನೀಡಬಾರದು ಎಂದು ಎಲ್ಲರಿಗೂ ತಾಕೀತು ಮಾಡಲಾಯಿತು ಎಂದು ಮೂಲಗಳು ಹೇಳಿವೆ.

ಚುನಾವಣಾ ಫಲಿತಾಂಶದ ಬಳಿಕ ಬಹಿರಂಗವಾಗಿ ಆರೋಪ–ಪ್ರತ್ಯಾರೋಪ, ನೀಡಿದವರು ಪಕ್ಷದ ಕಚೇರಿಗೆ ಬರುವಂತೆ ತಿಳಿಸಲಾಗಿತ್ತು. ಬಸನಗೌಡ ಪಾಟೀಲ ಯತ್ನಾಳ, ವೀರಣ್ಣ ಚರಂತಿಮಠ, ದಾಸರಹಳ್ಳಿ ಮುನಿರಾಜು, ರಮೇಶ್ ಗೌಡ, ಎ.ಎಸ್. ಪಾಟೀಲ ನಡಹಳ್ಳಿ, ಸಂಸದ ಪ್ರತಾಪ ಸಿಂಹ ಬಂದು ಸ್ಪಷ್ಟನೆ ನೀಡಿದ್ದಾರೆ. ಪ್ರಭು ಚವ್ಹಾಣ್, ಮುರುಗೇಶ ನಿರಾಣಿ, ಈಶ್ವರ್ ಸಿಂಗ್ ಠಾಕೂರ್, ರಮೇಶ್ ಜಿಗಜಿಣಗಿ, ರೇಣುಕಾಚಾರ್ಯ ಸಭೆಗೆ ಬಂದಿರಲಿಲ್ಲ.

ಯಾವುದೇ ಹೇಳಿಕೆ ನೀಡುವುದಿಲ್ಲ ಎಂದು ಸಭೆಯಿಂದ ಹೊರಬಂದವರ ಪೈಕಿ ಶಾಸಕ ಬಸನಗೌಡ ಪಾಟೀಲ ಯತ್ನಾಳ, ತಮ್ಮನ್ನು ಸೋಲಿಸಲು ಯತ್ನಿಸಿದವರ ವಿರುದ್ಧ ಕಿಡಿಕಾರಿದರು.

‘ನಾನು ಸತ್ಯವನ್ನೇ ಹೇಳಿದ್ದೇನೆ. ಸಭೆಗೆ ಬರುವಾಗ ಮತ್ತೊಮ್ಮೆ ನಾನು ಮಾತನಾಡಿದ್ದ ವಿಡಿಯೊ ತುಣುಕುಗಳನ್ನು ವೀಕ್ಷಿಸಿದೆ. ಯಾವ ಸುಳ್ಳನ್ನೂ ಹೇಳಿಲ್ಲ. ಪಕ್ಷದ ಅಭ್ಯರ್ಥಿಯಾದ ನನ್ನನ್ನೇ ಸೋಲಿಸಲು ಕೆಲವರು ಹಣ ಖರ್ಚು ಮಾಡಿದರು. ಅದನ್ನು ನೋಡಿಕೊಂಡು ಸುಮ್ಮನಿರಬೇಕಿತ್ತಾ? ಎಂದು ಪ್ರಶ್ನಿಸಿದೆ. ಸೋಲಿಸಲು ನಡೆಸಿದವರರ ಕುತಂತ್ರದ ನಡುವೆಯೂ ಜನಬಲದಿಂದ ಆರಿಸಿಬಂದಿದ್ದೇನೆ’ ಎಂದು ಹೇಳಿದರು.

ಸಭೆಯಲ್ಲಿ ಮಾತನಾಡಿದ ಬಸವರಾಜ ಬೊಮ್ಮಾಯಿ, ಯಾರಿಗೆಲ್ಲ ಅಸಮಾಧಾನ ವಿದೆಯೋ ಅವರನ್ನೆಲ್ಲ ಕರೆದು ಮಾತನಾಡಿ ಎಂದು ಹಿಂದಿನ ಸಭೆಯಲ್ಲಿಯೇ ಹೇಳಿದ್ದೆ. ಈಗಲಾದರೂ ಆ ಕೆಲಸ ಮಾಡಿರುವುದು ಸರಿಯಾದ ಕ್ರಮ ಎಂದು ಹೇಳಿದರು.

## ರೇಣುಕಾಚಾರ್ಯಗೆ ಮಾತ್ರ ನೋಟಿಸ್

‘ಸಭೆಯಲ್ಲಿ ಪಾಲ್ಗೊಂಡ ಎಲ್ಲರೂ ಇನ್ನುಮುಂದೆ ಬಹಿರಂಗ ಹೇಳಿಕೆ ನೀಡುವುದಿಲ್ಲ ಎಂದು ಹೇಳಿದ್ದಾರೆ. ಹೀಗಾಗಿ, ಅವರು ಯಾರಿಗೂ ನೋಟಿಸ್ ನೀಡಿಲ್ಲ. ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರಿಗೆ ಮಾತ್ರ ನೋಟಿಸ್ ನೀಡಲಾಗಿದೆ’ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಸ್ಪಷ್ಟಪಡಿಸಿದ್ದಾರೆ.


‘11 ಜನರಿಗೆ ನೋಟಿಸ್ ನೀಡಲಾಗಿದೆ’ ಎಂದು ನಳಿನ್ ಕುಮಾರ್ ಕಟೀಲ್ ಹೇಳಿದ್ದರು. ಪಕ್ಷಕ್ಕೆ ಮುಜುಗರ ತರುವ ಕೆಲಸ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರಿಂದ ನೋಟಿಸ್ ನೀಡಲಿಲ್ಲ ಎಂದು ರವಿಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

### ಶಾ, ನಡ್ಡಾಗೆ ಪತ್ರ; ರೇಣುಕಾಚಾರ್ಯ

‘ಎಲ್ಲರೂ ಮಾತನಾಡಿದ್ದಾರೆ. ಅವರೆಲ್ಲರನ್ನೂ ಬಿಟ್ಟು ನನಗೊಬ್ಬನಿಗೆ ಏಕೆ ನೋಟಿಸ್’ ಎಂದು ಪ್ರಶ್ನಿಸಿರುವ ರೇಣುಕಾಚಾರ್ಯ, ‘ಪಕ್ಷದ ಸೋಲಿಗೆ ಏನೇನು ಕಾರಣ ಎಂಬುದನ್ನು ವಿವರಿಸಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾಗೆ ಪತ್ರ ಬರೆಯುವೆ’ ಎಂದು ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯಡಿಯೂರಪ್ಪನವರನ್ನು ಇಳಿಸಲು ಯಾರ್‍ಯಾರು ಒತ್ತಡ ಹಾಕಿದ್ದರು ಎಂಬುದು ಗೊತ್ತಿದೆ. ಯಡಿಯೂರಪ್ಪನವರ ಕಣ್ಣೀರಿನಿಂದ ಪಕ್ಷ ಕೊಚ್ಚಿಹೋಯಿತು. ಬೊಮ್ಮಾಯಿವರ ಕೈಯನ್ನು ಕಟ್ಟಿಹಾಕಲಾಯಿತು. ಒಳಮೀಸಲಾತಿ ಜಾರಿಯಿಂದ 45 ಕ್ಷೇತ್ರಗಳಲ್ಲಿ ಸೋತೆವು. ಅಕ್ಕಿ ಕಡಿಮೆ ಮಾಡಿದರು, ಹೊಸ ಪಿಂಚಣಿ ಪದ್ಧತಿ ರದ್ದು ಮಾಡಲಿಲ್ಲ ಇವೆಲ್ಲ ಸೋಲಿಗೆ ಕಾರಣ. ಸತ್ಯ ಹೇಳಿದರೆ ನೋಟಿಸ್ ಕೊಡುತ್ತೀರಾ’ ಎಂದು ಪ್ರಶ್ನಿಸಿದ್ದಾರೆ.

## ಬೊಮ್ಮಾಯಿಗೆ ವಿಪಕ್ಷ ನಾಯಕ ಸ್ಥಾನದ ಹೊಣೆ?



ವಿರೋಧ ಪಕ್ಷದ ನಾಯಕನ ಆಯ್ಕೆಗಾಗಿ ಜುಲೈ 2ರ ಭಾನುವಾರ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಬಸವರಾಜ ಬೊಮ್ಮಾಯಿಯವರೇ ಆಯ್ಕೆಯಾಗುವ ಸಾಧ್ಯತೆ ಇದೆ.


‘ವಿಧಾನಸಭಾ ಚುನಾವಣಾ ಉಸ್ತುವಾರಿಯಾಗಿದ್ದ ಧರ್ಮೇಂದ್ರ ಪ್ರಧಾನ್ ಅವರು ನಾಯಕನ ಆಯ್ಕೆಯ ಬಗ್ಗೆ ಈಗಾಗಲೇ ಅಭಿಪ್ರಾಯ ಸಂಗ್ರಹಿಸಿದ್ದಾರೆ. ವರಿಷ್ಠರೇ ಹೆಸರನ್ನು ಸೂಚಿಸುವ ಸಂಭವ ಇದೆ. ಅದಾದ ಬಳಿಕ, ಶಾಸಕಾಂಗ ಪಕ್ಷದ ಸಭೆಯಲ್ಲಿ ಅಧಿಕೃತ ಆಯ್ಕೆ ನಡೆಯಲಿದೆ’ ಎಂದು ಮೂಲಗಳು ಹೇಳಿವೆ.

## ಸುದ್ದಿ 2 ನಿಮಿಷ

### ಕಂದಾಯ ಪ್ರಕರಣ 90 ದಿನಗಳಲ್ಲಿ ಇತ್ಯರ್ಥ: ಸಚಿವ ಕೃಷ್ಣ ಬೈರೇಗೌಡ

**ಬೆಳಗಾವಿ:** ‘ಕಂದಾಯ ಇಲಾಖೆಗೆ ಹೈಟೆಕ್ ಸ್ಪರ್ಶ ನೀಡಿ, ಸಂಬಂಧಿಸಿದ ಪ್ರಕರಣಗಳನ್ನು 90 ದಿನಗಳಲ್ಲಿ ಇತ್ಯರ್ಥ ಮಾಡಲಾಗುವುದು. ಈ ಬಗ್ಗೆ ಪ್ರತಿ ತಿಂಗಳು ಪರಿಶೀಲನಾ ಸಭೆ ನಡೆಸಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

‘ಇಲಾಖೆಯಲ್ಲಿ ಈಗಲೂ ಹಳೆಯ ಪದ್ಧತಿ ಅನುಸರಿಸುತ್ತಿರುವ ಕಾರಣ ಲಕ್ಷ ಸಂಖ್ಯೆಯ ಪ್ರಕರಣಗಳು ಬಾಕಿ ಇವೆ. ಕಂದಾಯ ಇಲಾಖೆ ಇಡೀ ವ್ಯವಸ್ಥೆಗೆ ಕೊಂಡಿ. ಇದರ ಆಡಳಿತದಲ್ಲಿ ಸರಳೀಕರಣ ಅಗತ್ಯ. ಜನರಿಗೆ ಆಗುತ್ತಿರುವ ತೊಂದರೆ ನೀಗಿಸಲು ಕ್ರಮ ವಹಿಸಲಾಗುವುದು’ ಎಂದು ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



**ಬೇಕಾಬಿಟ್ಟಿ ನಿರ್ವಹಣೆ:** ‘ರಾಜ್ಯದ ಜಲಾಶಯಗಳ ನೀರನ್ನು ಬೇಕಾಬಿಟ್ಟಿ ನಿರ್ವಹಣೆ ಮಾಡಲಾಗಿದೆ. ಈ ಅಶಿಸ್ತಿನಿಂದ ಎಲ್ಲ ಜಲಾಶಯಗಳೂ ಬರಿದಾಗಿವೆ. ಭೀಕರ ಬರ ಇದ್ದಾಗಲೂ ಜಲಾಶಯಗಳ ನೀರಿನ ಮಟ್ಟ ಈಗಿನಷ್ಟು ಕುಸಿದಿರಲಿಲ್ಲ. ಈಗ ಒದಗಿದ ಜಲಕ್ಷಾಮಕ್ಕೆ ಕಾರಣ ಕಂಡುಕೊಂಡು, ವರದಿ ನೀಡುವಂತೆ ಎಲ್ಲ ಪ್ರಾದೇಶಿಕ ಆಯುಕ್ತರಿಗೂ ಸೂಚಿಲಾಗಿದೆ’ ಎಂದರು.

‘ಸದ್ಯ ಆಲಮಟ್ಟಿ ಅಣೆಕಟ್ಟೆಯಲ್ಲಿ 1.92 ಟಿಎಂಸಿ ಅಡಿ ನೀರಿದೆ. ಇದೇ ದಿನ ಕಳೆದ ವರ್ಷ 30 ಟಿಎಂಸಿ ಅಡಿ ಇತ್ತು. ಆಗ ಮಳೆ ಸುರಿದ ಕಾರಣ ನೀರು ಹೆಚ್ಚು ಸಂಗ್ರಹವಿತ್ತು ಎನ್ನಬಹುದು. ಅದಾಗಿಯೂ ಈ ದಿನಕ್ಕೆ ಕನಿಷ್ಠ 25 ಟಿಎಂಸಿ ಅಡಿಯಷ್ಟು ಕಳೆದ ಬಾರಿಯ ನೀರೇ ಇರಬೇಕಿತ್ತು’ ಎಂದೂ ಹೇಳಿದರು.

‘ಚುನಾವಣೆಯಲ್ಲಿ ಮತ ಸೆಳೆಯಲು ಹೆಚ್ಚಿನ ನೀರು ಹರಿಸಲಾಗಿದೆಯೆ’ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಆ ಸಾಧ್ಯತೆ ಇರಬಹುದು. ವರದಿ ನೋಡಿಕೊಂಡು ಜನರ ಮುಂದೆ ಸತ್ಯ ಬಿಚ್ಚಿಡುತ್ತೇನೆ’ ಎಂದರು.

### ಆ್ಯಸಿಡ್ ದಾಳಿ ಸಂತ್ರಸ್ತೆಗೆ ನೌಕರಿ

**ಬೆಂಗಳೂರು:** 2022ರ ಏಪ್ರಿಲ್ 28ರಂದು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆ್ಯಸಿಡ್ ದಾಳಿಗೊಳಗಾಗಿದ್ದ ಸಂತ್ರಸ್ತ ಯುವತಿಗೆ ತಮ್ಮ ಸಚಿವಾಲಯದಲ್ಲಿ ಗುತ್ತಿಗೆ ನೌಕರಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸಂತ್ರಸ್ತೆ ಎಂ.ಕಾಂ. ಪದವೀಧರೆಯಾಗಿದ್ದಾರೆ.

ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಸಿದ್ದರಾಮಯ್ಯ ಅವರು ಶುಕ್ರವಾರ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಆಗ ತಂದೆ ಮತ್ತು ತಾಯಿಯ ಜತೆ ಅಲ್ಲಿಗೆ ಬಂದ ಯುವತಿ, ತನಗೆ ಉದ್ಯೋಗ ನೀಡುವಂತೆ ಮನವಿ ಸಲ್ಲಿಸಿದರು.

‘ಹಿಂದಿನ ಸರ್ಕಾರದ ಅವಧಿಯಲ್ಲೇ ನೌಕರಿ ನೀಡುವುದಾಗಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದರು. ಆದರೆ, ಆದೇಶ ನೀಡಲಿಲ್ಲ. ಜೀವನ ನಿರ್ವಹಣೆಗೆ ತೀವ್ರ ಸಂಕಷ್ಟ ಎದುರಾಗಿದೆ’ ಎಂದು ಯುವತಿ ಸಿದ್ದರಾಮಯ್ಯ ಅವರಿಗೆ ತಿಳಿಸಿದರು. ತಮ್ಮ ಸಚಿವಾಲಯದಲ್ಲೇ ಗುತ್ತಿಗೆ ಆಧಾರದಲ್ಲಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿದ ಮುಖ್ಯಮಂತ್ರಿ, ಈ ಸಂಬಂಧ ನೇಮಕದ ಆದೇಶ ಹೊರಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಬರಿದಾದ ತುಂಗಭದ್ರೆ

ಮುಂಗಾರು ಶುರುವಾದರೂ ವಾಡಿಕೆಗಿಂತಲೂ ಕಡಿಮೆ ಮಳೆಯಾದ ಕಾರಣ ತುಂಗಭದ್ರಾ ಜಲಾಶಯದಲ್ಲಿ ನೀರು ಕಡಿಮೆ ಪ್ರಮಾಣದಲ್ಲಿರುವ ದೃಶ್ಯ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನಲ್ಲಿ ಕಂಡುಬಂದಿದ್ದು ಹೀಗೆ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

## ‘ನೈಸ್’ ಟೋಲ್: ಇಂದಿನಿಂದ ದುಬಾರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನೈಸ್ ಕಂಪನಿ ಪೆರಿಫೆರಲ್ ಮತ್ತು ಲಿಂಕ್ ರಸ್ತೆ ಬಳಕೆ ಶುಲ್ಕವನ್ನು (ಟೋಲ್) ಶೇ 11ರಿಂದ 25ರಷ್ಟು ಹೆಚ್ಚಿಸಿದೆ. ಜುಲೈ 1ರಿಂದ ಇದು ಜಾರಿಗೆ ಬರಲಿದೆ.

ಕಾರುಗಳಿಗೆ ಶೇ 11.11, ಬಸ್‌ಗಳಿಗೆ ಶೇ 16, ಲಾರಿಗಳಿಗೆ ಶೇ 17.64, ಲಘು ವಾಣಿಜ್ಯ ವಾಹನಗಳಿಗೆ ಶೇ 22.22, ಎಂಎವಿಗೆ ಶೇ 16.66 ಹಾಗೂ ದ್ವಿಚಕ್ರ ವಾಹನಗಳಿಗೆ ಶೇ 25ರಷ್ಟು ದರ ಹೆಚ್ಚಾಗಿದೆ. ರಾಜ್ಯ ಸರ್ಕಾರದೊಂದಿಗಿನ ಒಪ್ಪಂದದಂತೆ ಪ್ರತಿ ವರ್ಷವೂ ಟೋಲ್ ಹೆಚ್ಚಿಸಬೇಕು. ಅದರಂತೆ ಟೋಲ್ ಹೆಚ್ಚಿಸಲಾಗಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ನೈಸ್ ರಸ್ತೆ ಟೋಲ್ (ಜುಲೈ 1ರಿಂದ ಜಾರಿಗೆ) ₹ಗಳಲ್ಲಿ

| ಮಾರ್ಗ | ಕಾರು | ಬಸ್ | ಟ್ರಕ್ | ಎಲ್‌ಸಿವಿ | ಎಂಎವಿ (ಪ್ರತಿ ಆಕ್ಸಲ್‌ಗೆ) | ದ್ವಿಚಕ್ರ ವಾಹನ |
|---|---|---|---|---|---|---|
| ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ | 50 | 145 | 100 | 55 | 105 | 25 |
| ಬನ್ನೇರುಘಟ್ಟ ರಸ್ತೆಯಿಂದ ಕನಕಪುರ ರಸ್ತೆ | 40 | 115 | 75 | 40 | 80 | 15 |
| ಕನಕಪುರ ರಸ್ತೆಯಿಂದ ಕ್ಲೋವರ್‌ಲೀಫ್ ಜಂಕ್ಷನ್ | 30 | 75 | 45 | 30 | 45 | 10 |
| ಕ್ಲೋವರ್‌ಲೀಫ್ ಜಂಕ್ಷನ್‌ನಿಂದ ಮೈಸೂರು ರಸ್ತೆ | 25 | 65 | 40 | 30 | 45 | 10 |
| ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ | 55 | 155 | 105 | 65 | 110 | 25 |
| ಮಾಗಡಿ ರಸ್ತೆಯಿಂದ ತುಮಕೂರು ರಸ್ತೆ | 45 | 120 | 80 | 45 | 85 | 15 |

## ರಾಜ್ಯದ ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಮಂಗಳೂರು, ಉಡುಪಿಯಲ್ಲಿ ಶುಕ್ರವಾರ ರಭಸದ ಮಳೆ ಸುರಿದರೆ, ಕಾರವಾರ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬಸ್ರೂರಿನಲ್ಲಿ ಎರಡು ಮನೆ ಹಾಗೂ ಕುಂಜಿಬೆಟ್ಟುವಿನ ಸಗ್ರಿಬೈಲಿನಲ್ಲಿರುವ ಕಾಲುಸಂಕ ಭಾಗಶಃ ಹಾನಿಯಾಗಿದೆ.

ವಡ್ಡರ್ಸೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾವಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗ್ರಂಥಾಲಯ ಕಟ್ಟಡ ಗುರುವಾರ ರಾತ್ರಿ ಕುಸಿದಿದೆ. ಶಾಲೆಯ ಒಂದು ಭಾಗದ ಕೊಠಡಿ ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದ್ದು, ಮಳೆಯ ರಭಸಕ್ಕೆ ಚಾವಣಿ ಮುರಿದು ಬಿದ್ದು, ಗೋಡೆ ಕೂಡ ಬಿರುಕು ಬಿಟ್ಟಿದೆ.

ಜಿಲ್ಲೆಯಾದ್ಯಂತ ಇದುವರೆಗೂ 59 ಮನೆಗಳಿಗೆ ಭಾಗಶಃ ಹಾನಿಯಾಗಿದ್ದು ಒಂದು ಮನೆ ಸಂಪೂರ್ಣ ಕುಸಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ಮಂಗಳೂರು ನಗರದಲ್ಲಿ ಸಂಜೆ ವೇಳೆಗೆ ತಾಸಿಗೂ ಹೆಚ್ಚುಕಾಲ ಗಾಳಿ ಸಹಿತ ರಭಸದ ಮಳೆ ಸುರಿಯಿತು. ಚರಂಡಿಗಳು ಉಕ್ಕಿ ಹರಿದು, ಮಲ್ಲಿಕಟ್ಟೆ, ಸುಭಾಷ್ ನಗರ, ಬಳ್ಳಾಲ್ ಭಾಗದಲ್ಲಿ ರಸ್ತೆಗಳಲ್ಲಿ ನೀರು ತುಂಬಿ ಹರಿಯಿತು.

ಕರಾವಳಿ ಜಿಲ್ಲೆಗಳಲ್ಲಿ ಜುಲೈ 5ರ ವರೆಗೆ ಭಾರಿ ಮಳೆ ಸುರಿಯಲಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ 1 ರಿಂದ 3ರವರೆಗೆ ಯಲ್ಲೋ ಅಲರ್ಟ್, ಜುಲೈ 4 ಹಾಗೂ 5ರಂದು ಆರೆಂಜ್ ಅಲರ್ಟ್ ಘೋಷಿಸಿದೆ.

ಕಾರವಾರ ತಾಲ್ಲೂಕಿನಲ್ಲಿ ಮಧ್ಯಾಹ್ನದ ಬಳಿಕ ನಿರಂತರವಾಗಿ ಜಿಟಿ ಜಿಟಿ ಮಳೆ ಸುರಿಯಿತು. ಭಟ್ಕಳ, ಕುಮಟಾ, ಅಂಕೋಲಾ, ಹೊನ್ನಾವರ, ಶಿರಸಿ, ಜೊಯಿಡಾ, ಯಲ್ಲಾಪುರದಲ್ಲಿ ಉತ್ತಮ ಮಳೆಯಾಗಿದೆ.

ಬೆಳಗಾವಿ, ಧಾರವಾಡ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾದರೆ, ಮಡಿಕೇರಿ ನಗರದಲ್ಲಿ ಉತ್ತಮ ಮಳೆ ಸುರಿಯಿತು.

**ಮುನ್ಸೂಚನೆ:** ಜುಲೈ 1ರಂದು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗೆ ಹಾಗೂ ಜುಲೈ 2ರಂದು ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.



ಶುಕ್ರವಾರ ಮಂಗಳೂರಿನಲ್ಲಿ ಸುರಿದ ಮಳೆಯಲ್ಲಿ ಬಾಲಕಿಯರು ಖುಷಿಯಿಂದ ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್

ಕರಾವಳಿ ಸ್ವಾಮೀಜಿಗಳ ಸಮಾವೇಶದಲ್ಲಿ ರಾಜ್ಯ ಸರ್ಕಾರಕ್ಕೆ ಒಕ್ಕೊರಲ ಆಗ್ರಹ

## ‘ಗೋಹತ್ಯೆ ನಿಷೇಧ ಕಾಯ್ದೆ ವಾಪಸ್ ಬೇಡ’

ಪ್ರಜಾವಾಣಿ ವಾರ್ತೆ

**ಮಂಗಳೂರು:** ಗೋಹತ್ಯೆ ನಿಷೇಧ ಮತ್ತು ಮತಾಂತರ ನಿಷೇಧ ಕಾಯ್ದೆಯನ್ನು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ರದ್ದುಗೊಳಿಸಬಾರದು ಎಂದು ಕರಾವಳಿಯ ಸ್ವಾಮೀಜಿಗಳ ಸಮಾವೇಶ ಒತ್ತಾಯಿಸಿದೆ.

ಶುಕ್ರವಾರ ಇಲ್ಲಿ ನಡೆದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಸ್ವಾಮೀಜಿಗಳು, ‘ಸರ್ಕಾರ ಇವೆರಡು ಕಾಯ್ದೆಗಳನ್ನು ರದ್ದುಗೊಳಿಸಿದರೆ, ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆಯಾಗುತ್ತದೆ. ಸಾಧು–ಸಂತರು ರಾಜ್ಯವ್ಯಾಪಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ’ ಎಂದು ಎಚ್ಚರಿಸಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಡಿಯೂರು ಸಂಸ್ಥಾನದ ಮಠಾಧೀಶ ಗುರುದೇವಾನಂದ ಸ್ವಾಮೀಜಿ, ‘ಮತಾಂತರ ನಿಷೇಧ ಕಾಯ್ದೆಯನ್ನು ರದ್ದುಗೊಳಿಸುವ ಬಗ್ಗೆ ರಾಜ್ಯ ಸರ್ಕಾರವು ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡಿದೆ. ಜತೆಗೆ, ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾಕಾಯ್ದೆ 2020 ಅನ್ನು ರದ್ದುಗೊಳಿಸುವ ಪ್ರಸ್ತಾಪವನ್ನೂ ಮಾಡಿದ್ದು, ಇದನ್ನು ಸ್ವಾಮೀಜಿಗಳು ಸಾಮೂಹಿಕವಾಗಿ ವಿರೋಧಿಸುತ್ತೇವೆ’ ಎಂದರು.



ಮಂಗಳೂರಿನಲ್ಲಿ ನಡೆದ ಕರಾವಳಿಯ ಸ್ವಾಮೀಜಿಗಳ ಸಮಾವೇಶದಲ್ಲಿ ಒಡಿಯೂರು ಮಠದ ಗುರುದೇವಾನಂದ ಸ್ವಾಮೀಜಿ ಮಾತನಾಡಿದರು. ಸಾಧು ಸಂತರು ಇದ್ದರು

‘ಎಷ್ಟೇ ವಯಸ್ಸಾಗಿದ್ದರೂ ಗೋವಂಶ ಹತ್ಯೆಗೆ ಅವಕಾಶ ನೀಡಬಾರದು. ಹಾಲಿ ಇರುವ ಗೋಶಾಲೆಗಳನ್ನು ಮುಂದುವರಿಸಿಕೊಂಡು ಹೋಗಬೇಕು. ಅದಕ್ಕೆ ಅವಶ್ಯವಿರುವ ಅನುದಾನ ಬಿಡುಗಡೆ ಮಾಡಬೇಕು. ಖಾಸಗಿ ಗೋಶಾಲೆಗಳಿಗೂ ಅನುದಾನ ನೀಡಬೇಕು. ಗೋಮಾಳಗಳನ್ನು ದೇವಸ್ಥಾನ, ಮಠ, ಮಂದಿರಗಳಿಗೆ, ಖಾಸಗಿ ಗೋಶಾಲೆಗಳಿಗೆ ನೀಡಿ ಸಂರಕ್ಷಣೆ ಕೆಲಸ ಮಾಡಬೇಕು’ ಎಂದು ಆಗ್ರಹಿಸಿದರು.

‘ಸಮಾಜದ ಸಾಮರಸ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಸರ್ಕಾರ ಆಡಳಿತ ನಡೆಸಬೇಕು. ಇದಕ್ಕೆ ತೊಂದರೆಯಾದರೆ ಉಪವಾಸ ಸತ್ಯಾಗ್ರಹ ನಡೆಸಿ, ರಾಜ್ಯವ್ಯಾಪಿ ಹೋರಾಟ ಕೈಗೆತ್ತಿಕೊಳ್ಳಲಾಗುವುದು’ ಎಂದು ಎಚ್ಚರಿಸಿದರು.

‘ಸಮಾನ ನಾಗರಿಕ ಸಂಹಿತೆ ಜಾರಿ ಕುರಿತಂತೆ ಎಲ್ಲ ಸ್ವಾಮೀಜಿಗಳು ಸಭೆ ಸೇರಿ ಸೂಕ್ತ ತೀರ್ಮಾನ ಕೈಗೊಳ್ಳಲಿದ್ದೇವೆ. ಈ ಬಗ್ಗೆ ಎಲ್ಲ ಸ್ವಾಮೀಜಿಗಳು ಮನೆ ಮನೆಗೆ ತೆರಳಿ ಮನವರಿಕೆ ಮಾಡುವ ಪ್ರಯತ್ನ ನಡೆಸಲಿದ್ದಾರೆ’ ಎಂದು ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಹೇಳಿದರು.

ಮಾಣಿಲ ಮಹಾಲಕ್ಷ್ಮಿ ಕ್ಷೇತ್ರದ ಮೋಹನದಾಸ ಪರಮಹಂಸ ಸ್ವಾಮೀಜಿ, ಕೇಮಾರಿನ ಈಶ ವಿಠಲದಾಸ ಸ್ವಾಮೀಜಿ, ಕೊಂಡೆವೂರು ನಿತ್ಯಾನಂದ ಯೋಗಾಶ್ರಮದ ಯೋಗಾನಂದ ಸರಸ್ವತಿ ಸ್ವಾಮೀಜಿ, ಚಿತ್ರಾಪುರ ಮಠದ ವಿದ್ಯೇಂದ್ರ ತೀರ್ಥ ಶ್ರೀಪಾದ ಸ್ವಾಮೀಜಿ, ಚಿಲಿಂಬಿ ಓಂಶ್ರೀ ಮಠದ ವಿದ್ಯಾನಂದ ಸರಸ್ವತಿ ಸ್ವಾಮೀಜಿ, ಚಿಲಿಂಬಿ ಮಠದ ಮಾತಾಶ್ರೀ ಶಿವಜ್ಞಾನಮಯಿ ಸರಸ್ವತಿ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ನೇಹ ಮಾತಾಜಿ, ಕನ್ಯಾನ ಚಾಮುಂಡೇಶ್ವರಿ ದೇವಿ ಕ್ಷೇತ್ರದ ಮಹಾಬಲೇಶ್ವರ ಸ್ವಾಮೀಜಿ, ವಿಶ್ವಹಿಂದೂ ಪರಿಷತ್ ಮುಖಂಡ ಪ್ರೊ. ಎಂ.ಬಿ.ಪುರಾಣಿಕ್, ಆರ್‌ಎಸ್‌ಎಸ್ ಮುಖಂಡ ಪ್ರಕಾಶ್ ಪಿ.ಎಸ್. ಇದ್ದರು.

## ‘ಕಲ್ಲಿದ್ದಲು ಸಾಗಣೆಗೆ ಕ್ರಮ’

**ಬೆಂಗಳೂರು:** ಕಲ್ಲಿದ್ದಲು ಗಣಿಗಳಿಂದ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲನ್ನು ಯಾವುದೇ ಅಡೆತಡೆ ಇಲ್ಲದೆ ಸಾಗಿಸಲು ಹಲವು ಹಂತದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಕಲ್ಲಿದ್ದಲು ಸಚಿವಾಲಯವು ಹೇಳಿದೆ.

ಕಲ್ಲಿದ್ದಲು ಸಾಗಣೆ ಸಾಮರ್ಥ್ಯವನ್ನು ನೂರು ಕೋಟಿ ಟನ್‌ಗಳಿಗೆ ಹೆಚ್ಚಿಸಲು 67 ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಧಾನಮಂತ್ರಿ ಗತಿಶಕ್ತಿ ಯೋಜನೆ ಅಡಿಯಲ್ಲಿ ₹26,000 ಕೋಟಿ ವೆಚ್ಚದಲ್ಲಿ 15 ರೈಲ್ವೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ರಾಷ್ಟ್ರೀಯ ಕಲ್ಲಿದ್ದಲು ಸಾಗಣೆ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಸಚಿವಾಲಯವು ಹೇಳಿದೆ.

## ಸಿದ್ದಾಪುರ: 35 ಜನರಿಗೆ ವಾಂತಿ, ಭೇದಿ

ಪ್ರಜಾವಾಣಿ ವಾರ್ತೆ

**ಸಂಡೂರು (ಬಳ್ಳಾರಿ ಜಿಲ್ಲೆ):** ತಾಲ್ಲೂಕಿನ ಸುಶೀಲಾನಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದಾಪುರ ಗ್ರಾಮದಲ್ಲಿ 35ಕ್ಕೂ ಹೆಚ್ಚು ಜನರಲ್ಲಿ ಶುಕ್ರವಾರ ವಾಂತಿ ಭೇದಿ ಕಾಣಿಸಿಕೊಂಡಿದ್ದು, ಕಲುಷಿತ ನೀರು ಕುಡಿದಿರುವುದೇ ಇದಕ್ಕೆ ಕಾರಣ ಎಂದು ಶಂಕಿಸಲಾಗಿದೆ.

ಬಳ್ಳಾರಿಯ ವಿಮ್ಸ್ ಮತ್ತು ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ತಲಾ ಇಬ್ಬರು ಮತ್ತು ನಾಲ್ವರು ಸಂಡೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಉಳಿದವರು ಗ್ರಾಮದ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಗ್ರಾಮದ ಏಳು ಕುಡಿಯುವ ನೀರಿನ ಮೂಲಗಳನ್ನು ಪರೀಕ್ಷಿಸಲಾಗಿದ್ದು, ಅವುಗಳಲ್ಲಿ ಮೂರು ಕಡೆ ಕುಡಿಯಲು ಯೋಗ್ಯವಾಗಿಲ್ಲ. ಇನ್ನೂ ನಾಲ್ಕು ಕಡೆಯ ನೀರಿನ ಶುದ್ಧತೆ ಬಗ್ಗೆ ಮಾಹಿತಿ ಬರಬೇಕಿದೆ. ಮುಂಜಾಗ್ರತಾ ಕ್ರಮವಾಗಿ ಶುದ್ಧ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಭರತ್ ತಿಳಿಸಿದ್ದಾರೆ.

## ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆಯಲ್ಲಿ 46,270 ವಿದ್ಯಾರ್ಥಿಗಳು ತೇರ್ಗಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯ ಫಲಿತಾಂಶ ಶುಕ್ರವಾರ ಪ್ರಕಟವಾಗಿದ್ದು, ಪರೀಕ್ಷೆ ಬರೆದಿದ್ದ1.11 ಲಕ್ಷ ವಿದ್ಯಾರ್ಥಿಗಳಲ್ಲಿ 46,270 ಮಂದಿ (ಶೇ 41.39) ಉತ್ತೀರ್ಣರಾಗಿದ್ದಾರೆ.

ಮುಖ್ಯ ಪರೀಕ್ಷೆಯಂತೆ ಪೂರಕ ಪರೀಕ್ಷೆಯಲ್ಲೂ ಗ್ರಾಮೀಣರೇ (42.66) ಮೇಲುಗೈ ಸಾಧಿಸಿದ್ದಾರೆ. ನಗರ ಪ್ರದೇಶದ ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣ ಶೇ 40.3ರಷ್ಟಿದೆ. ಈ ಬಾರಿಯೂ ಬಾಲಕಿಯರೇ (ಶೇ 45.67) ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆಯಾಗಿದ್ದಾರೆ. ಶೇ 38.95ರಷ್ಟು ಬಾಲಕರು ಮರುಪ್ರಯತ್ನದಲ್ಲಿ ಯಶ ಕಂಡಿದ್ದಾರೆ. ಕನ್ನಡ ಮಾಧ್ಯಮದವರಿಗಿಂತ (ಶೇ 40.78), ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳು (ಶೇ 41.15) ತುಸು ಹೆಚ್ಚಿನ ಸಾಧನೆ ತೋರಿದ್ದಾರೆ.

ಅನುದಾನಿತ ಶಾಲೆಯ ವಿದ್ಯಾರ್ಥಿಗಳು (ಶೇ 43.16) ಖಾಸಗಿ (42.34) ಮತ್ತು ಸರ್ಕಾರಿ (39.78) ಶಾಲೆಯ ವಿದ್ಯಾರ್ಥಿಗಳಿಗಿಂತ ಮುಂದಿದ್ದಾರೆ. ಶೇ 75ರಷ್ಟು ಹಾಜರಾತಿ ಕೊರತೆಯಿಂದ ಖಾಸಗಿಯಾಗಿ ಪರೀಕ್ಷೆ ತೆಗೆದುಕೊಂಡಿದ್ದ 2020 ವಿದ್ಯಾರ್ಥಿಗಳಲ್ಲಿ 108 (ಶೇ 5.35) ಮಂದಿ ತೇರ್ಗಡೆಯಾಗಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಜೂನ್ 12ರಿಂದ 19ರವರೆಗೆ ಪೂರಕ ಪರೀಕ್ಷೆ ನಡೆಸಿತ್ತು. 9 ಕೇಂದ್ರಗಳಲ್ಲಿ ಮೌಲ್ಯ ಮಾಪನ ಕಾರ್ಯ ನಡೆದಿತ್ತು. ಸುಮಾರು 10 ಸಾವಿರ ಶಿಕ್ಷಕರು ಮೌಲ್ಯ ಮಾಪನದಲ್ಲಿ ಭಾಗವಹಿಸಿದ್ದರು. ಫಲಿತಾಂಶವನ್ನು ಮಂಡಳಿಯ ಜಾಲತಾಣ https://karresults.nic.in ನಲ್ಲಿ ವೀಕ್ಷಿಸಬಹುದು.

## ಮುರ್ಮುಗೆ ಮುಕ್ತ ವಿ.ವಿ ಗೌರವ



**ಮೈಸೂರು:** ‘ರಾಷ್ಟ್ರಪತಿ ದ್ರೌಪದಿ ಮುರ್ಮು, ಶಿಕ್ಷಣ ತಜ್ಞರಾದ ಬೆಂಗಳೂರಿನ ಎನ್.ರಾಮಚಂದ್ರಯ್ಯ ಹಾಗೂ ಎಸ್.ಎನ್. ವೆಂಕಟ ಲಕ್ಷ್ಮಿನರಸಿಂಹರಾಜು ಅವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ (ಡಿ.ಲಿಟ್) ಪ್ರದಾನ ಮಾಡಲು ನಿರ್ಧರಸಲಾಗಿದೆ’ ಎಂದು ಕುಲಪತಿ ಪ್ರೊ.ಶರಣಪ್ಪ ಹಲಸೆ ತಿಳಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ಸ್ವೀಕರಿಸಲು ರಾಷ್ಟ್ರಪತಿ ಅವರು ಸಮ್ಮತಿಸಿದ್ದಾರೆ. 18ನೇ ವಾರ್ಷಿಕ ಘಟಿಕೋತ್ಸವ ಜುಲೈ 2ರಂದು ಬೆಳಿಗ್ಗೆ 11ಕ್ಕೆ ಮೈಸೂರಿನಲ್ಲಿ ನಡೆಯಲಿದ್ದು, ಪಾಲ್ಗೊಳ್ಳುವಂತೆ ಆಹ್ವಾನಿಸಲಾಗಿದೆ. ಆಗ ಬಾರದಿದ್ದರೆ, ಜುಲೈ 3ರಂದು ರಾಜ್ಯ ಪ್ರವಾಸದ ವೇಳೆ ರಾಜಭವನದಲ್ಲಿ ಪ್ರದಾನ ಮಾಡಲಾಗುವುದು’ ಎಂದು ಹೇಳಿದರು.

## ರಥೋತ್ಸವ: ಕಳಚಿ ಬಿದ್ದ ಕಳಸ

ಪ್ರಜಾವಾಣಿ ವಾರ್ತೆ

**ಅರಸೀಕೆರೆ (ಹಾಸನ):** ಪಟ್ಟಣದ ಹೊರವಲಯದ ಮಾಲೇಕಲ್ ತಿರುಪತಿಯ ಲಕ್ಷ್ಮೀವೆಂಕಟರಮಣ ಸ್ವಾಮಿ ದೇವರ ರಥೋತ್ಸವದ ವೇಳೆ ರಥದ ಕಳಸ ಕಳಚಿ ಬಿದ್ದು, ಗುಪ್ತಚರ ಇಲಾಖೆ ಕಾನ್‌ಸ್ಟೆಬಲ್ ಚಂದ್ರಮೌಳಿ ಗಾಯಗೊಂಡಿದ್ದಾರೆ.

ರಥೋತ್ಸವಕ್ಕೆ ಚಾಲನೆ ಸಿಕ್ಕ ತಕ್ಷಣ ಭಕ್ತರು ಗೋವಿಂದ ಗೋವಿಂದ ಎಂದು ರಥ ಎಳೆಯಲು ಆರಂಭಿಸಿದರು. ಸ್ವಲ್ಪ ದೂರ ಸಾಗಿದ ತಕ್ಷಣ, ರಥದ ಮೇಲೆ ಪ್ರತಿಷ್ಠಾಪಿಸಿದ್ದ ಕಳಸ ಕಳಚಿ ಬಿದ್ದಿದೆ.

## ಪ್ರತ್ಯೇಕ ಅಪಘಾತ: 13 ಸಾವು

ಹೊಸಪೇಟೆ– ಆಳಂದ ಬಳಿ ಅವಘಡ • 22 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

**ಆಳಂದ/ಹೊಸಪೇಟೆ:** ಮಹಾರಾಷ್ಟ್ರದ ಅಕ್ಕಲಕೋಟೆ ಜಿಲ್ಲೆಯಲ್ಲಿ ಶಿರವಾಳ ವಾಡಿ ಹಾಗೂ ಹೊಸಪೇಟೆ ಹೊರವಲಯದ ವಡ್ಡರಹಳ್ಳಿ ಬಳಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಒಟ್ಟು 13 ಮಂದಿ ಮೃತಪಟ್ಟಿದ್ದಾರೆ.

ಹೊಸಪೇಟೆ ಹೊರವಲಯದ ವಡ್ಡರಹಳ್ಳಿ ರೈಲ್ವೆ ಸೇತುವೆ ಸಮೀಪ ಮಧ್ಯಾಹ್ನ ಟ್ರಕ್ ಮತ್ತು ಎರಡು ಆಟೊಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಬಳ್ಳಾರಿಯ ಒಂದೇ ಕುಟುಂಬದ ಐವರು ಸಹಿತ ಏಳು ಮಂದಿ ಮೃತಪಟ್ಟಿದ್ದಾರೆ. 12 ಮಂದಿ ಗಾಯಗೊಂಡಿದ್ದಾರೆ.

ಬಳ್ಳಾರಿಯ ಕೌಲ್ ಬಜಾರ್ ನಗರದ ನಿವಾಸಿಗಳಾದ ಸಫ್ರಾಬೀ (55), ಕೌಸರ್ ಬಾನು (35), ಇಬ್ರಾಹಿಂ (33), ಯಾಸ್ಮೀನ್ (45), ಜಹೀರ್ (16), ಆಟೊ ಚಾಲಕ ಬಳ್ಳಾರಿ ಬಂಡಿಹಟ್ಟಿಯ ಉಮೇಶ್ (27) ಮತ್ತು ಇನ್ನೊಂದು ಆಟೊದಲ್ಲಿದ್ದ ಬಳ್ಳಾರಿ ಅಂದ್ರಾಳ್ ಡಿ.ಸಿ. ಕ್ಯಾಂಪ್‌ನ ಸಲೀಮಾ ಯಾನೆ ಶ್ಯಾಮ್ (40) ಮೃತರು.

‘ಗಾಯಗೊಂಡವರ ಪೈಕಿ ನಾಲ್ವರನ್ನು ಬಳ್ಳಾರಿಯ ವಿಮ್ಸ್‌ಗೆ ದಾಖಲಿಸಲಾಗಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಟ್ರಕ್ ಚಾಲಕ ಓದೇಶ (24) ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಬಳ್ಳಾರಿ ವಲಯದ ಐಜಿಪಿ ಬಿ.ಎಸ್. ಲೋಕೇಶ್ ಕುಮಾರ್ ತಿಳಿಸಿದರು.

ಮಹಾರಾಷ್ಟ್ರದ ಅಕ್ಕಲಕೋಟೆ ಜಿಲ್ಲೆಯ ಶಿರವಾಳ ವಾಡಿ ಸಮೀಪ ಕ್ರೂಸರ್‌ಮತ್ತುಕಂಟೇನರ್‌ನಡುವೆಡಿಕ್ಕಿ ಸಂಭವಿಸಿ ಬಾಲಕ ಸೇರಿ ಆರು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಳಂದ ತಾಲ್ಲೂಕಿನ ಅಣ್ಣೂರು ಗ್ರಾಮದ ನಿವಾಸಿಗಳಾದ ಲಲಿತಾ ಮಹಾದೇವ ಬುಗ್ಗೆ(50), ರೋಹಿಣಿ ಗೋಪಾಲ್ ಪೂಜಾರಿ(40), ಸುಂದರಬಾಯಿ ಭರತ್ ಸಿಂಗ್ ರಜಪೂತ್(55), ಡಿಗ್ಗಿ ನಿವಾಸಿ ಸಾಯಿನಾಥ್ ಗೋವಿಂದ ಪೂಜಾರಿ(10) ಹಾಗೂ ಮಹಾರಾಷ್ಟ್ರದ ಬೇಡ್ಗ ಗ್ರಾಮದ ಸಂಗೀತಾ ಮದನ್ ಮನೆ(35), ಇಂದಾಪುರ ನಿವಾಸಿ ಛಾಯಾ ಹನುಮಾನ್(38) ಮೃತರು.

ಬೇರೆ ಬೇರೆ ಊರಿನ ಸಂಬಂಧಿಗಳು ಸೇರಿ ಅಫಜಲಪುರ ತಾಲ್ಲೂಕಿನ ಘತ್ತರಗಿ ಭಾಗವಂತಿ ದೇವಿಯ ದರ್ಶನ ಮಾಡಿದರು. ಬಳಿಕ ಅಕ್ಕಲಕೋಟೆಯ ಸ್ವಾಮಿ ಸಮರ್ಥ ಮಹಾರಾಜರ ದೇವಸ್ಥಾನಕ್ಕೆ ತೆರಳಿದ್ದರು. ವಾಪಸ್ ಬರುವಾಗ ಶಿರವಾಳ ವಾಡಿ ಸಮೀಪ ಕ್ರೂಸರ್ ಮತ್ತು ಕಂಟೇನರ್ ನಡುವೆ ಡಿಕ್ಕಿ ಸಂಭವಿಸಿದೆ. ಕ್ರೂಸರ್‌ನಲ್ಲಿದ್ದ 16 ಮಂದಿ ಪೈಕಿ ಆರು ಮಂದಿ ಸ್ಥಳದಲ್ಲೇ ಮೃತಪಟ್ಟರು. 10 ಮಂದಿ ಗಾಯಾಳುಗಳನ್ನು ಸೋಲಾಪುರ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊಬೈಲ್ ಸಂಖ್ಯೆಯಲ್ಲೂ ಸಂಖ್ಯಾಶಾಸ್ತ್ರದ ಹಿಂದೆ ಬಿದ್ದಿದ್ದ ಅಜಿತ್ ರೈ

## 15 ಸಿಮ್ ಬಳಸುತ್ತಿದ್ದ ಬಂಧಿತ ತಹಶೀಲ್ದಾರ್!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ₹500 ಕೋಟಿಗೂ ಅಧಿಕ ಮೌಲ್ಯದ ಬೇನಾಮಿ ಆಸ್ತಿಗಳನ್ನು ಹೊಂದಿರುವ ಆರೋಪದ ಮೇಲೆ ಲೋಕಾಯುಕ್ತ ಪೊಲೀಸರಿಂದ ಬಂಧಿತರಾಗಿರುವ ಕೆ.ಆರ್.ಪುರ ತಾಲ್ಲೂಕಿನ ಹಿಂದಿನ ತಹಶೀಲ್ದಾರ್ ಅಜಿತ್ ಕುಮಾರ್ ರೈ 15 ಮೊಬೈಲ್ ಸಿಮ್ ಕಾರ್ಡ್‌ಗಳನ್ನು ಬಳಸುತ್ತಿದ್ದರು. ಅವುಗಳಲ್ಲಿ ಹತ್ತಕ್ಕಿಂತ ಹೆಚ್ಚು ಸಿಮ್‌ಗಳ ಕೊನೆಯ ಸಂಖ್ಯೆ 1368!

‘ಬುಧವಾರ ಮತ್ತು ಗುರುವಾರ ಅಜಿತ್ ರೈ ಅವರ ಮನೆ ಶೋಧದ ವೇಳೆ 15ಕ್ಕೂ ಹೆಚ್ಚು ಸಿಮ್ ಕಾರ್ಡ್‌ಗಳು ಪತ್ತೆಯಾಗಿವೆ. ಈ ಎಲ್ಲ ಮೊಬೈಲ್ ಸಂಖ್ಯೆಗಳೂ ಚಾಲ್ತಿಯಲ್ಲೇ ಇವೆ’ ಎಂದು ಲೋಕಾಯುಕ್ತದ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಎಲ್ಲ ಸಿಮ್ ಕಾರ್ಡ್‌ಗಳನ್ನೂ ಆರೋಪಿ ತಮ್ಮ ಬಳಿಯೇ ಇರಿಸಿಕೊಂಡಿದ್ದರು. ಬೇರೆ ಬೇರೆ ವ್ಯಕ್ತಿಗಳ ಜತೆ ಮಾತನಾಡಲು ಬೇರೆ ಬೇರೆ ಸಿಮ್‌ಗಳನ್ನು ಬಳಸುತ್ತಿದ್ದ ಶಂಕೆ ಇದೆ. ಎಲ್ಲ ನಂಬರ್‌ಗಳ ಕರೆ ವಿವರಗಳನ್ನು ಪಡೆಯಲು ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳಿಗೆ ಕೋರಿಕೆ ಸಲ್ಲಿಸಿದ್ದು, ಅವರಿಂದ ಮಾಹಿತಿ ಲಭ್ಯವಾದ ಬಳಿಕ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಮೂಲಗಳು ಹೇಳಿವೆ.

**ಸಂಖ್ಯಾಶಾಸ್ತ್ರ ಹಿಂದೆ:** ಅಜಿತ್ ರೈ 11 ದುಬಾರಿ ಬೆಲೆಯ ಕಾರುಗಳು ಹಾಗೂ ಹಲವು ದ್ವಿಚಕ್ರ ವಾಹನಗಳನ್ನು ಹೊಂದಿರುವುದು ಶೋಧ ಕಾರ್ಯಾಚರಣೆ ವೇಳೆ ಪತ್ತೆಯಾಗಿತ್ತು. ಅವುಗಳಲ್ಲಿ ಹೆಚ್ಚಿನ ವಾಹನಗಳ ನೋಂದಣಿ ಸಂಖ್ಯೆ ‘1368’ ಆಗಿದೆ. ಅದೇ ಮಾದರಿಯನ್ನು ಮೊಬೈಲ್ ಸಂಖ್ಯೆಗಳ ಆಯ್ಕೆಯಲ್ಲೂ ಅನುಸರಿಸಿದ್ದಾರೆ.

ಈ ಎಲ್ಲ ಸಂಖ್ಯೆಗಳನ್ನೂ ಒಟ್ಟುಗೂಡಿಸಿದರೆ ಕೊನೆಯದಾಗಿ ‘9’ ಸಿಗುತ್ತದೆ. ಆರೋಪಿಯು ವಾಹನ ನೋಂದಣಿ ಹಾಗೂ ಮೊಬೈಲ್ ಸಂಖ್ಯೆಗಳ ಆಯ್ಕೆಯಲ್ಲಿ ‘1368’ ಆಯ್ಕೆ ಮಾಡಿಕೊಂಡಿರಬಹುದು. ಈ ನಾಲ್ಕು ಅಂಕಿಗಳನ್ನು ಕೂಡಿಸಿದರೆ 18 ಬರಲಿದ್ದು, ಅದನ್ನು ಮತ್ತೆ ಕೂಡಿಸಿದರೆ 9 ಬರಲಿದೆ. ಜ್ಯೋತಿಷಿಗಳ ಸಲಹೆ ಮತ್ತು ಸಂಖ್ಯಾಶಾಸ್ತ್ರದ ಆಧಾರದಲ್ಲಿ ಈ ಸಂಖ್ಯೆಗಳನ್ನು ಆಯ್ಕೆ ಮಾಡಿಕೊಂಡಿರಬಹುದೆ ಎಂಬ ಚರ್ಚೆ ತನಿಖಾ ತಂಡದೊಳಗೆ ನಡೆಯುತ್ತಿದೆ.

**ಹಳೆಯ ದೂರುಗಳಿಗೆ ಜೀವ:** ಅಜಿತ್ ರೈ ವಿರುದ್ಧ ಹಿಂದಿನ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಹಾಗೂ ಲೋಕಾಯುಕ್ತದಲ್ಲಿ ದಾಖಲಾಗಿದ್ದ ದೂರುಗಳನ್ನು ಮರು ಪರಿಶೀಲಿಸಲು ಲೋಕಾಯುಕ್ತ ಪೊಲೀಸರು ಮುಂದಾಗಿದ್ದಾರೆ. ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ಕೆ.ಆರ್.ಪುರ ತಾಲ್ಲೂಕುಗಳಲ್ಲಿ ಆರೋಪಿಯು ಕಾರ್ಯನಿರ್ವಹಿಸಿದ್ದ ಅವಧಿಗೆ ಸಂಬಂಧಿಸಿದ ದೂರುಗಳ ಮರು ಪರಿಶೀಲನೆಗೆ ಸಿದ್ಧತೆ ನಡೆದಿದೆ.

‘ಆರೋಪಿಯು ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ಪಕ್ಷಪಾತ ಎಸಗಿರುವ ದೂರುಗಳಿವೆ. ಭ್ರಷ್ಟಾಚಾರ, ದುರಾಡಳಿತ, ಕರ್ತವ್ಯಲೋಪಕ್ಕೆ ಸಂಬಂಧಿಸಿದ ದೂರುಗಳೂ ಇವೆ. ಈ ಎಲ್ಲವನ್ನೂ ಈಗ ದಾಖಲಾಗಿರುವ ಪ್ರಕರಣದ ತನಿಖೆಗೆ ಪೂರಕವಾಗಿ ಪರಿಶೀಲನೆ ಮಾಡಲಾಗುವುದು’ ಎಂದು ಮೂಲಗಳು ತಿಳಿಸಿವೆ.

### ಅಮಾನತಿಗೆ ಶಿಫಾರಸು

ಅಕ್ರಮ ಆಸ್ತಿ ಹೊಂದಿರುವ ಆರೋಪದಡಿ ಬಂಧಿತರಾಗಿರುವ ತಹಶೀಲ್ದಾರ್ ಅಜಿತ್ ಕುಮಾರ್ ರೈ ಅವರನ್ನು ಸೇವೆಯಿಂದ ಅಮಾನತು ಮಾಡುವಂತೆ ಶಿಫಾರಸು ಮಾಡಿ ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಗೆ ಶುಕ್ರವಾರ ವರದಿ ಸಲ್ಲಿಸಿದ್ದಾರೆ.

ಲೋಕಾಯುಕ್ತ ದಾಳಿಗೂ ಎರಡು ದಿನಗಳ ಹಿಂದಷ್ಟೇ ಕೆ.ಆರ್. ಪುರ ತಹಶೀಲ್ದಾರ್ ಹುದ್ದೆಯಿಂದ ಅಜಿತ್ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಅವರು ಯಾವುದೇ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರಲಿಲ್ಲ.

ಶನಿವಾರ, ಜುಲೈ 1, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 181 | ಪುಟ 22

● www.prajavani.net

prajavani.net | prajavani | prajavani | prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಹಲವು ಪ್ರಯಾಸಗಳ ನಡುವೆ ಖುಷಿಯಲ್ಲಿ ಪ್ರವಾಸ ಹೊರಡುವ ಹೆಣ್ಣುಮಕ್ಕಳ ಕಥನ





| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 64,718 ▲ | 19,189 ▲ | ₹60,040 (ಬೆಂಗಳೂರು) ▼ | ₹71,200 (ಬೆಂಗಳೂರು) ▼ | 82.10 ▼ |

ಹಗರಣದ ಸ್ವರೂಪ ಪಡೆದ ಭ್ರಷ್ಟಾಚಾರ ಪ್ರಕರಣ ● ಆರು ಪೊಲೀಸ್ ಅಧಿಕಾರಿಗಳ ತಂಡ ರಚನೆ

# ಅಜಿತ್ ರೈ ಆಸ್ತಿ ತನಿಖೆಗೆ ಎಸ್ಐಟಿ

● ವಿ.ಎಸ್. ಸುಬ್ರಹ್ಮಣ್ಯ



ಅಜಿತ್ ಕುಮಾರ್ ರೈ

**ಬೆಂಗಳೂರು:** ₹500 ಕೋಟಿಗೂ ಹೆಚ್ಚು ಮೌಲ್ಯದ ಬೇನಾಮಿ ಆಸ್ತಿಗಳನ್ನು ಹೊಂದಿರುವ ಆರೋಪದಡಿ ಕೆ.ಆರ್.ಪುರ ತಾಲ್ಲೂಕಿನ ಹಿಂದಿನ ತಹಶೀಲ್ದಾರ್ ಅಜಿತ್ ಕುಮಾರ್ ರೈ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ದಾಖಲಿಸಿರುವ ಪ್ರಕರಣದ ತನಿಖೆಗೆ ಲೋಕಾಯುಕ್ತ ಪೊಲೀಸ್ ವಿಭಾಗದಲ್ಲಿ ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸಲಾಗಿದೆ.

ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಡಿವೈಎಸ್ಪಿ ಪ್ರಮೋದ್ ಕುಮಾರ್ ಎಸ್ಐಟಿಯ ನೇತೃತ್ವ ವಹಿಸಿದ್ದು, ಅವರೂ ಸೇರಿದಂತೆ ಇಬ್ಬರು ಡಿವೈಎಸ್ಪಿ, ನಾಲ್ವರು ಇನ್ಸ್ಪೆಕ್ಟರ್‌ಗಳು ತಂಡದಲ್ಲಿದ್ದಾರೆ. ಹಲವು ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಈ ತಂಡಕ್ಕೆ ನಿಯೋಜಿಸಲಾಗಿದೆ. ಒಬ್ಬ ವ್ಯಕ್ತಿಯ ಅಕ್ರಮ ಆಸ್ತಿ ಪ್ರಕರಣದ ತನಿಖೆಗೆ ಲೋಕಾಯುಕ್ತದಲ್ಲಿ ಇದೇ ಮೊದಲ ಬಾರಿಗೆ ಎಸ್ಐಟಿ ರಚಿಸಲಾಗಿದೆ.

ಅಜಿತ್ ರೈ ಮನೆ ಹಾಗೂ ಅವರ ಬೇನಾಮಿಗಳೆಂದು ಶಂಕಿಸಲಾದ ಹಲವರ ಮನೆಗಳು ಸೇರಿದಂತೆ 11 ಸ್ಥಳಗಳ ಮೇಲೆ ಬುಧವಾರ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದರು. ಇನ್ನೂ ಶೋಧ ಕಾರ್ಯಾಚರಣೆ ಅಂತಿಮ ಹಂತಕ್ಕೆ ಬಂದಿಲ್ಲ. 150 ಎಕರೆಗೂ ಹೆಚ್ಚು ಜಮೀನು, ದುಬಾರಿ ಬೆಲೆಯ 11 ಐಷಾರಾಮಿ ಕಾರುಗಳು ಸೇರಿದಂತೆ ಸದ್ಯದ ಮಾರುಕಟ್ಟೆ ಬೆಲೆಯಲ್ಲಿ ₹500 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಪತ್ತೆಮಾಡಲಾಗಿದೆ. ಆರೋಪಿ ಅಧಿಕಾರಿಯು ಇನ್ನಷ್ಟು ಆಸ್ತಿಗಳನ್ನು ಹೊಂದಿರುವ ಕುರಿತು ಸಾರ್ವಜನಿಕರು ಮಾಹಿತಿ ನೀಡಿದ್ದು, ಆ ಬಗ್ಗೆಯೂ ಪರಿಶೀಲನೆಗೆ ತನಿಖಾ ತಂಡ ಮುಂದಾಗಿದೆ.

'ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಅಜಿತ್ ರೈ ವಿರುದ್ಧ ಎಫ್ಐಆರ್ ದಾಖಲಿಸಲಾಗಿತ್ತು. ಆದರೆ, ಈಗ ಪ್ರಕರಣವು ಒಂದು ಹಗರಣದ ಸ್ವರೂಪಕ್ಕೆ ತಲುಪಿದೆ. ಬಹು ಆಯಾಮದಲ್ಲಿ ತನಿಖೆ ನಡೆಸುವುದು ಅಗತ್ಯವಿದೆ. ಈ ಕಾರಣದಿಂದ ಎಸ್ಐಟಿ ರಚಿಸಲಾಗಿದೆ. ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಎಸ್ಪಿ ಕೆ.ವಿ. ಅಶೋಕ್ ಮೇಲುಸ್ತುವಾರಿಯಲ್ಲಿ ಎಸ್ಐಟಿ ತನಿಖೆ ನಡೆಸಲಿದೆ' ಎಂದು ಲೋಕಾಯುಕ್ತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ

5ನೇ ಪುಟ ನೋಡಿ

## ಏಳು ದಿನ ತನಿಖಾ ತಂಡದ ವಶಕ್ಕೆ

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಕುರಿತು ಹೆಚ್ಚಿನ ವಿಚಾರಣೆಗಾಗಿ ತಹಶೀಲ್ದಾರ್ ಅಜಿತ್ ಕುಮಾರ್ ರೈ ಅವರನ್ನು ಏಳು ದಿನಗಳ ಕಾಲ ಲೋಕಾಯುಕ್ತ ಪೊಲೀಸರ ವಶಕ್ಕೆ ಒಪ್ಪಿಸಿ ವಿಶೇಷ ನ್ಯಾಯಾಲಯ ಶುಕ್ರವಾರ ಆದೇಶ ಹೊರಡಿಸಿದೆ.

ಗುರುವಾರ ಅಜಿತ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ವಿಶೇಷ ನ್ಯಾಯಾಲಯಕ್ಕೆ (ಸಿಸಿಎಚ್–78) ಆರೋಪಿಯನ್ನು ಶುಕ್ರವಾರ ಹಾಜರುಪಡಿಸಿದರು. ಹೆಚ್ಚಿನ ವಿಚಾರಣೆ ಅಗತ್ಯವಿರುವುದರಿಂದ ಏಳು ದಿನಗಳ ಕಾಲ ತಮ್ಮ ವಶಕ್ಕೆ ನೀಡುವಂತೆ ಲೋಕಾಯುಕ್ತ ಪೊಲೀಸರು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರು. ಅದನ್ನು ಮಾನ್ಯ ಮಾಡಿದ ನ್ಯಾಯಾಧೀಶ ಎಸ್.ವಿ. ಶ್ರೀಕಾಂತ್, ಆರೋಪಿಯನ್ನು ತನಿಖಾ ತಂಡದ ವಶಕ್ಕೆ ನೀಡಿ ಆದೇಶ ಹೊರಡಿಸಿದರು.

**ನಗುತ್ತಲೇ ಇದ್ದ ರೈ:** ಶುಕ್ರವಾರ ಬೆಳಿಗ್ಗೆ ಅಜಿತ್ ರೈ ಅವರನ್ನು ಲೋಕಾಯುಕ್ತ ಕಚೇರಿಗೆ ಕರೆತಂದು, ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಲೋಕಾಯುಕ್ತ ಕಚೇರಿಗೆ ಬರುವಾಗ, ನ್ಯಾಯಾಲಯಕ್ಕೆ ಹಾಜರಾಗುವಾಗ, ಹಿಂತಿರುಗುವಾಗ ಅಧಿಕಾರಿ ನಗುಮೊಗದಲ್ಲೇ ಇದ್ದರು.

### ಒಂದು ಕಾರಿನ ಮೌಲ್ಯವೇ ವೇತನಕ್ಕಿಂತ ದುಬಾರಿ!

ಅಜಿತ್ ಕುಮಾರ್ ರೈ ತಮ್ಮ ಸೇವಾವಧಿಯಲ್ಲಿ ವೇತನ ಮತ್ತು ಭತ್ಯೆ ರೂಪದಲ್ಲಿ ಒಟ್ಟು ₹1.20 ಕೋಟಿಯಷ್ಟು ಪಡೆದಿದ್ದಾರೆ. ಅವರ ಬಳಿ 11 ದುಬಾರಿ ಬೆಲೆಯ ಕಾರುಗಳು ಪತ್ತೆಯಾಗಿವೆ. ಅವುಗಳಲ್ಲಿ ಲ್ಯಾಂಡ್ ಕ್ರೂಸರ್ (₹2.5 ಕೋಟಿ) ಒಂದರ ಬೆಲೆಯೇ ಆರೋಪಿಯ ಒಟ್ಟು ವೇತನ ಭತ್ಯೆಯ ಎರಡು ಪಟ್ಟಿಗಿಂತ ಹೆಚ್ಚಾಗಿದೆ ಎಂದು ತನಿಖಾ ಸಂಸ್ಥೆಯ ಮೂಲಗಳು ಹೇಳಿವೆ.



ಬಾರೋ ಮಳೆರಾಯ...

ಹುಬ್ಬಳ್ಳಿ ತಾಲ್ಲೂಕಿನ ಹಳ್ಯಾಳ ಗ್ರಾಮದ ರೈತ ಬಾಷಾಸಾಬ್ ಜಮಾಲಸಾಬ್ ಅವರು ತಮ್ಮ ಜಮೀನಿಗೆ ಟ್ಯಾಂಕರ್ ಮೂಲಕ ನೀರುಣಿಸಿದರು. ಮಳೆ ಕೈಕೊಟ್ಟಿದ್ದರಿಂದ ಅವರು ಈ ಕ್ರಮಕ್ಕೆ ಮುಂದಾದರು

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

## ಚಿನಕುರಳಿ

ಪ್ರಕಾಶ್ ಶೆಟ್ಟಿ




# ಅನ್ನಭಾಗ್ಯ, ಗೃಹಜ್ಯೋತಿ ಇಂದಿನಿಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾಂಗ್ರೆಸ್ ಸರ್ಕಾರದ 'ಗ್ಯಾರಂಟಿ' ಯೋಜನೆಗಳಾದ ಗೃಹ ಜ್ಯೋತಿ ಮತ್ತು ಅನ್ನಭಾಗ್ಯಕ್ಕೆ ಜುಲೈ 1ರಿಂದ ಚಾಲನೆ ದೊರೆಯಲಿದೆ.

ಬಿಪಿಎಲ್ ಪಡಿತರ ಚೀಟಿ ಹೊಂದಿದ ಕುಟುಂಬದ ಪ್ರತಿ ಸದಸ್ಯರಿಗೆ 'ಅನ್ನಭಾಗ್ಯ' ಯೋಜನೆ ಅಡಿ ತಲಾ 10 ಕೆ.ಜಿ. ಅಕ್ಕಿ ವಿತರಿಸುವುದಾಗಿ ಸರ್ಕಾರ ಘೋಷಿಸಿತ್ತು. ಆದರೆ, ಅಕ್ಕಿ ಹೊಂದಿಸಲು ಸಾಧ್ಯವಾಗಿಲ್ಲ. ಹೀಗಾಗಿ, ಬಿಪಿಎಲ್ ಕುಟುಂಬದ ಒಬ್ಬೊಬ್ಬರಿಗೂ ತಲಾ 5 ಕೆ.ಜಿ ಅಕ್ಕಿ ಹಾಗೂ ಬಾಕಿ 5 ಕೆ.ಜಿ ಅಕ್ಕಿ ಬದಲು ₹170 ಅನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲು ಸರ್ಕಾರ ತೀರ್ಮಾನಿಸಿದೆ. 85 ಲಕ್ಷ ಬಿಪಿಎಲ್ ಕುಟುಂಬಗಳ ಫಲಾನುಭವಿಗಳಿಗೆ ಪ್ರಯೋಜನವಾಗಲಿದೆ.

ಜತೆಗೆ, ಗೃಹಬಳಕೆಗೆ ಗರಿಷ್ಠ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆ ಸಹ ಶನಿವಾರದಿಂದ ಆರಂಭವಾಗಲಿದೆ.

ಈ ಯೋಜನೆಗೆ ರಾಜ್ಯದ ಆರು ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ ಶುಕ್ರವಾರ ಸಂಜೆ 7ರವರೆಗೆ 86.24 ಲಕ್ಷಕ್ಕೂ ಅಧಿಕ ಗ್ರಾಹಕರು ನೋಂದಣಿ ಮಾಡಿಕೊಂಡಿದ್ದಾರೆ. ನೋಂದಣಿಗೆ ಗಡುವು ವಿಧಿಸಿಲ್ಲ. ರಾಜ್ಯದಲ್ಲಿನ 2.14 ಕೋಟಿ ಕುಟುಂಬಗಳು ಈ ಯೋಜನೆ ವ್ಯಾಪ್ತಿಗೆ ಒಳಪಡಲಿವೆ. ಜುಲೈ ತಿಂಗಳಲ್ಲಿ ಬಳಸಿದ ವಿದ್ಯುತ್ ಆಗಸ್ಟ್ 1ರಿಂದ ನೀಡುವ ಬಿಲ್‌ಗೆ ಸೇರ್ಪಡೆಯಾಗುವ ರೀತಿಯಲ್ಲಿ ಯೋಜನೆ ಜಾರಿಯಾಗಲಿದೆ.

ಗೃಹ ಜ್ಯೋತಿ ಯೋಜನೆಗೆ ವಾರ್ಷಿಕ ₹12 ಸಾವಿರ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಮತ್ತು ಅಮೃತ ಜ್ಯೋತಿ ಅಡಿಯಲ್ಲಿ ಪ್ರಯೋಜನ ಪಡೆಯುತ್ತಿರುವ ಗ್ರಾಹಕರು ಈ ಯೋಜನೆಯ ಅನುಕೂಲ ಪಡೆಯಲು ಬಯಸಿದರೆ ಮತ್ತೊಮ್ಮೆ ನೋಂದಾಯಿಸಿಕೊಳ್ಳಬೇಕು.

ಗೃಹ ಜ್ಯೋತಿ ಯೋಜನೆಗೆ https://sevasindhugs.karnataka.gov.in ಮೂಲಕ ನೋಂದಣಿ ಮಾಡಿಕೊಳ್ಳಬಹುದು.

## ಟ್ವಿಟರ್‌ಗೆ ₹50 ಲಕ್ಷ ದಂಡ ವಿಧಿಸಿದ ಹೈಕೋರ್ಟ್



**ಬೆಂಗಳೂರು:** 'ಅನಿಯಂತ್ರಿತ ಸಾಮಾಜಿಕ ಜಾಲತಾಣಗಳ ಬಳಕೆ ಪ್ರಜಾ ಪ್ರಭುತ್ವದ ಅಪಾಯಕ್ಕೆ ಕಾರಣ' ಎಂಬ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಕೆಲವು ವೈಯಕ್ತಿಕ ಖಾತೆಗಳನ್ನು ನಿರ್ಬಂಧಿಸಿ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ಪ್ರಶ್ನಿಸಿ ಟ್ವಿಟರ್ ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿದ್ದು, ಸಂಸ್ಥೆಗೆ ₹50 ಲಕ್ಷ ದಂಡ ವಿಧಿಸಿದೆ.

5ನೇ ಪುಟ ನೋಡಿ

ಮಣಿಪುರ: ನಾಟಕೀಯ ಬೆಳವಣಿಗೆ ನಂತರ ನಿರ್ಧಾರ

# ರಾಜೀನಾಮೆಯಿಂದ ಹಿಂದೆ ಸರಿದ ಸಿ.ಎಂ ಬಿರೆನ್ ಸಿಂಗ್

ಪ್ರಜಾವಾಣಿ ವಾರ್ತೆ

**ಗುವಾಹಟಿ:** ಮಣಿಪುರ ಮುಖ್ಯಮಂತ್ರಿ ಬಿರೆನ್ ಸಿಂಗ್ ಅವರು ರಾಜೀನಾಮೆ ನಿರ್ಧಾರದಿಂದ ಶುಕ್ರವಾರ ಹಿಂದೆ ಸರಿದರು. ರಾಜೀನಾಮೆ ನೀಡಬಾರದು ಎಂದು ಮಹಿಳೆಯರು ಸೇರಿದಂತೆ ಸಾವಿರಾರು ಮಂದಿ ಬೆಂಬಲಿಗರು ಒತ್ತಾಯ ಮಾಡಿದರು. ರಾಜಭವನಕ್ಕೆ ತೆರಳುವಾಗ ವಾಹನ ಅಡ್ಡಗಟ್ಟಿ, ರಾಜೀನಾಮೆ ಪತ್ರವನ್ನು ಹರಿದು ಹಾಕಿದರು. ಹೀಗಾಗಿ ಬಿರೆನ್ ಅವರು ರಾಜೀನಾಮೆ ನಿರ್ಧಾರ ಬದಲಿಸಿದರು.

ಪ್ರತಿಭಟನೆಗೆ ಮಣಿದು ರಾಜಭವನಕ್ಕೆ ತೆರಳದೇ ವಾಪಸಾದ ಬಿರೆನ್ ಸಿಂಗ್, 'ರಾಜ್ಯದಲ್ಲಿನ ಸಂದಿಗ್ಧ ಪರಿಸ್ಥಿತಿ ಕಾರಣದಿಂದ ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ' ಎಂದು ಟ್ವೀಟ್ ಮಾಡಿದ್ದಾರೆ.

ಇದಕ್ಕೂ ಮುನ್ನ, ರಾಜ್ಯಪಾಲರಾದ ಅನಸೂಯಾ ಉಯಿಕೆ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸುವ ಸಲುವಾಗಿ ಬಿರೆನ್ ಸಿಂಗ್ ರಾಜಭವನಕ್ಕೆ ತೆರಳುತ್ತಿದ್ದಾರೆ ಎಂಬ ಸುದ್ದಿ ಹಬ್ಬುತ್ತಿದ್ದಂತೆಯೇ, ಸಾವಿರಾರು ಬೆಂಬಲಿಗರು ಅವರ ನಿವಾಸದ ಮುಂದೆ ಜಮಾಯಿಸಿದರು.

ಕೆಲ ಬಿಜೆಪಿ ಶಾಸಕರೊಂದಿಗೆ ಅವರು ರಾಜಭವನಕ್ಕೆ ತೆರಳುತ್ತಿದ್ದಾಗ, ಬೆಂಬಲಿಗರು ವಾಹನಗಳನ್ನು ತಡೆದು ರಾಜೀನಾಮೆ ನೀಡಬಾರದು ಎಂದು ಪಟ್ಟು ಹಿಡಿದರು. ವಾಹನದಿಂದ ಇಳಿದ ಸಿಂಗ್ ಅವರು, ಬೆಂಬಲಿಗರ ಮನವೊಲಿಸಲು ಮಾಡಿದ ಪ್ರಯತ್ನ ಫಲನೀಡಲಿಲ್ಲ. ಕೆಲ ಗಂಟೆಗಳ ನಂತರ, ಗುಂಪನ್ನು ಉದ್ದೇಶಿಸಿ ಮಾತನಾಡಿದ ಸಚಿವರಾದ ಸುಸಿಂದ್ರೊ ಮೈತೇಯಿ ಹಾಗೂ ಗೋವಿಂದಾಸ್ ಕೊಂಥೌಜಮ್, 'ಬೆಂಬಲಿಗರ ಭಾವನೆಗಳನ್ನು ಗೌರವಿಸಿ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡದಿರಲು ಮುಖ್ಯಮಂತ್ರಿ ನಿರ್ಧರಿಸಿದ್ದಾರೆ' ಎಂದು ಘೋಷಿಸಿದರು. ಅದೇ ವೇಳೆ, ಗುಂಪಿನಲ್ಲಿದ್ದ ಕೆಲವರು ಸಚಿವರ ಕೈಲಿದ್ದ ಸಿಂಗ್ ಅವರ ರಾಜೀನಾಮೆ ಪತ್ರವನ್ನು ಕಸಿದುಕೊಂಡು ಹರಿದುಹಾಕಿದರು ಎಂದು ಮೂಲಗಳು ಹೇಳಿವೆ.

**ಮೃತರ ಸಂಖ್ಯೆ ಏರಿಕೆ:** ಕಂಗ್‌ಪೋಕ್ಪಿ ಜಿಲ್ಲೆಯ ಹರವೋಥೇಲ್ ಗ್ರಾಮದಲ್ಲಿ ಗುರುವಾರ ಬಂಡುಕೋರರು ನಡೆಸಿದ ಅಪ್ರಚೋದಿತ ಗುಂಡಿನ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದವರ ಪೈಕಿ ಮತ್ತೊಬ್ಬರು ಶುಕ್ರವಾರ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೊಂದು ಸುದ್ದಿ 08

## ಭೂಮಿಕಾ ಕ್ಲಬ್: ಇಂದು 6ನೇ ಆವೃತ್ತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ 'ಭೂಮಿಕಾ ಕ್ಲಬ್' ವೇದಿಕೆಯು ಜುಲೈ 1ರಂದು ಆರನೇ ಆವೃತ್ತಿಯ ಕಾರ್ಯಕ್ರಮ ಹಮ್ಮಿಕೊಂಡಿದೆ.

ಮಧ್ಯಾಹ್ನ 2.30ಕ್ಕೆ, ಪಿ.ಸಿ.ಚಂದ್ರ ಜ್ಯುವೆಲರ್ಸ್ ಸಹಯೋಗದಲ್ಲಿ ನಗರದ ಕೋರಮಂಗಲದ 6ನೇ ಬ್ಲಾಕ್‌ನ 6ನೇ ಅಡ್ಡ ರಸ್ತೆಯಲ್ಲಿರುವ ಕೋರಮಂಗಲ ಕ್ಲಬ್‌ನಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಹಟ್ಟಿ ಕಾಫಿ ಹಾಗೂ ಐಎಫ್‌ಎಂ (ಫ್ಯಾಷನ್ ಶೋ ಪಾರ್ಟನರ್) ಪ್ರಾಯೋಜಕತ್ವ ವಹಿಸಿದೆ.

ಗಾಯಕಿ ಚೈತ್ರಾ ಜೆ. ಆಚಾರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿನ್ಯಾಸಕಿ ಶೈನಿ ಅಲೆಕ್ಸಾಂಡರ್ ಅವರು ಆಭರಣ ವಿನ್ಯಾಸ ಕುರಿತು ಮಾತನಾಡಲಿದ್ದಾರೆ.

ಜೆ.ಎನ್. ರವಿ ಅವರ ನಿರ್ದೇಶನ ಹಾಗೂ ಸಿರಿ ರಮೇಶ್ ಅವರ ನೃತ್ಯ ಸಂಯೋಜನೆಯಲ್ಲಿ ಐಎಫ್‌ಎಂ ಸಿನಿಮಾ ಸಂಸ್ಥೆಯ ಜ್ಯುವೆಲರ್ಸ್ ಫ್ಯಾಷನ್ ಶೋ ಮೂಡಿಬರಲಿದೆ. ತಾರಕ್ ನೃತ್ಯ ಅಕಾಡೆಮಿಯಿಂದ ನೃತ್ಯ ಕಾರ್ಯಕ್ರಮವು ಪ್ರೇಕ್ಷಕರನ್ನು ರಂಜಿಸಲಿದೆ.

ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಣಿ ಮಾಡಿಕೊಳ್ಳಬಹುದು.

ನೋಂದಣಿಗೆ bit.ly/bhumikaclubjuly1 ಪರಿಶೀಲಿಸಬಹುದು.

ಭೂಮಿಕಾ ಕ್ಲಬ್ presented by SINCE 1939 P. C. CHANDRA JEWELLERS A jewel of jewels

ಪಿ.ಸಿ.ಚಂದ್ರ ಜ್ಯುವೆಲರ್ಸ್ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಲಿದೆ.

## ವಿಧಾನಸೌಧ ಸುತ್ತಮುತ್ತ ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜುಲೈ 3ರಿಂದ 14ರವರೆಗೆ ವಿಧಾನಮಂಡಲದ ಅಧಿವೇಶನ ನಡೆಯಲಿದ್ದು, ಮುಂಜಾಗ್ರತಾ ಕ್ರಮವಾಗಿ ವಿಧಾನಸೌಧ ಸುತ್ತಮುತ್ತಲಿನ 2 ಕಿ.ಮೀ ವ್ಯಾಪ್ತಿಯ ಪ್ರದೇಶಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಈ ಬಗ್ಗೆ ಆದೇಶ ಹೊರಡಿಸಿರುವ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್, 'ಜುಲೈ 3ರಿಂದ 14ರವರೆಗೆ ನಿತ್ಯವೂ ಬೆಳಿಗ್ಗೆ 6 ಗಂಟೆಯಿಂದ ತಡರಾತ್ರಿ 12 ಗಂಟೆವರೆಗೂ ನಿಷೇಧಾಜ್ಞೆ ಜಾರಿಯಲ್ಲಿರಲಿದೆ' ಎಂದು ಹೇಳಿದ್ದಾರೆ.

'ಐದು ಹಾಗೂ ಅದಕ್ಕಿಂತ ಹೆಚ್ಚು ಜನರು ಗುಂಪು ಸೇರಬಾರದು. ಪ್ರತಿಭಟನೆ, ಮೆರವಣಿಗೆ, ರ‍್ಯಾಲಿ, ಸಭೆ ನಡೆಸಬಾರದು. ಶಸ್ತ್ರಾಸ್ತ್ರ, ದೊಣ್ಣೆ, ಕತ್ತಿ, ಈಟಿ, ಗದೆ, ಕಲ್ಲು, ಚಾಕು ಹಾಗೂ ಇತರ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಓಡಾಡಬಾರದು. ವ್ಯಕ್ತಿಗಳ ಪ್ರತಿಕೃತಿ ದಹನ, ಭಿತ್ತಿಪತ್ರ ಪ್ರದರ್ಶನ ಮಾಡಬಾರದು' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

# ₹ 1.5 ಲಕ್ಷ ಲಂಚ: ಕಾನ್‌ಸ್ಟೆಬಲ್ ಬಂಧನ

### ಲಂಚ ಪಡೆಯುವಾಗಲೇ ಲೋಕಾಯುಕ್ತರಿಂದ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ನಿರ್ಮಾಣ ಕಾಮಗಾರಿಗೆ ಪ್ರತಿವಾದಿಗಳು ಅಡ್ಡಿಪಡಿಸದಂತೆ ನ್ಯಾಯಾಲಯ ನೀಡಿದ್ದ ಪ್ರತಿಬಂಧಕಾಜ್ಞೆಯನ್ನು ಅನುಷ್ಠಾನಕ್ಕೆ ತರಲು ₹ 1.5 ಲಕ್ಷ ಲಂಚ ಪಡೆಯುತ್ತಿದ್ದ ಪೀಣ್ಯ ಪೊಲೀಸ್ ಠಾಣೆಯ ವಿಶೇಷ ಘಟಕದ ಕಾನ್‌ಸ್ಟೆಬಲ್ ಮಾರೇಗೌಡ ಎನ್. ಅವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಸಂಜೆ ಬಂಧಿಸಿದ್ದಾರೆ.

ನಾಗಸಂದ್ರ ಬಳಿಯ ನೆಲಗೆದರನಹಳ್ಳಿ ನಿವಾಸಿ ಗವಿರಾಜ್ ಗೌಡ ಎಂಬುವವರು ಬಿಬಿಎಂಪಿ ವಾರ್ಡ್ ಸಂಖ್ಯೆ 40ರ ವ್ಯಾಪ್ತಿಯ ಕರಿವೋಬನಹಳ್ಳಿಯಲ್ಲಿದ್ದ ತಮ್ಮ ನಿವೇಶನವೊಂದರ 20X40 ಭಾಗವನ್ನು ಟಿ.ದಾಸರಹಳ್ಳಿಯ ವಿದ್ಯಾನಗರ ನಿವಾಸಿ ದಿನೇಶ್ ಕೆ.ಎಲ್. ಅಲಿಯಾಸ್ ಅಭಿನವ್ ಎಂಬುವವರಿಗೆ ಮಾರಾಟ ಮಾಡಿದ್ದರು. ಅದರಲ್ಲಿ ದಿನೇಶ್ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭಿಸಿದ್ದರು.



ಮಾರೇಗೌಡ ಎನ್

ಕೋಕಿಲಾ ಮತ್ತು ಲಕ್ಷ್ಮಣ್ ರೆಡ್ಡಿ ಎಂಬುವವರು ಸದರಿ ನಿವೇಶನ ತಮ್ಮದೆಂದು ತಗಾದೆ ತೆಗೆದಿದ್ದರು. ಕಟ್ಟಡ ನಿರ್ಮಾಣಕ್ಕೆ ಸ್ಥಗಿತಗೊಳಿಸುವಂತೆ ಒತ್ತಡ ಹೇರುತ್ತಿದ್ದರು. ದಿನೇಶ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಪ್ರತಿವಾದಿಗಳಾದ ಕೋಕಿಲಾ ಮತ್ತು ಲಕ್ಷ್ಮಣ್ ರೆಡ್ಡಿ ನಿವೇಶನದ ಒಳಕ್ಕೆ ಪ್ರವೇಶಿಸದಂತೆ ನ್ಯಾಯಾಲಯ ತಾತ್ಕಾಲಿಕ ಪ್ರತಿಬಂಧಕಾಜ್ಞೆ ನೀಡಿತ್ತು.

'ನ್ಯಾಯಾಲಯದ ಆದೇಶದೊಂದಿಗೆ ಪೀಣ್ಯ ಪೊಲೀಸ್ ಠಾಣೆಗೆ ದೂರು ನೀಡಿದ್ದ ಗವಿರಾಜ್, ಕಟ್ಟಡ ನಿರ್ಮಾಣ ಮುಂದುವರಿಸಲು ದಿನೇಶ್ ಅವರಿಗೆ ರಕ್ಷಣೆ ಒದಗಿಸುವಂತೆ ಮನವಿ ಮಾಡಿದ್ದರು. ರಕ್ಷಣೆ ಒದಗಿಸಲು ₹ 3 ಲಕ್ಷ ಲಂಚ ನೀಡುವಂತೆ ಮಾರೇಗೌಡ ಬೇಡಿಕೆ ಇಟ್ಟಿದ್ದರು. ಆ ಬಳಿಕ ಚೌಕಾಸಿ ನಡೆಸಿದ್ದು, ₹ 1.5 ಲಕ್ಷ ನೀಡಿದರೆ ರಕ್ಷಣೆ ಒದಗಿಸುವ ಭರವಸೆ ನೀಡಿದ್ದರು. ಈ ಕುರಿತು ಗವಿರಾಜ್ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು' ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಯ ಸೂಚನೆಯಂತೆ ಗವಿರಾಜ್ ಲಂಚದ ಹಣದೊಂದಿಗೆ ಹೋಗಿದ್ದರು. ಶುಕ್ರವಾರ ಸಂಜೆ ಪೀಣ್ಯ ಠಾಣೆ ಬಳಿಯ ಕೆಫೆ ಒಂದರಲ್ಲಿ ಭೇಟಿಯಾದ ಮಾರೇಗೌಡ ₹ 1.5 ಲಕ್ಷ ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಲೋಕಾಯುಕ್ತದ ಪೊಲೀಸ್ ಇನ್‌ಸ್ಪೆಕ್ಟರ್ ಬಾಲಾಜಿ ಬಾಬು ಮತ್ತು ತಂಡ ಮಾರೇಗೌಡ ಅವರನ್ನು ಬಂಧಿಸಿದರು ಎಂದು ಮಾಹಿತಿ ನೀಡಿದ್ದಾರೆ.

**ಮುಖ್ಯಾಂಶಗಳು**

- ನಿವೇಶನ ಪ್ರವೇಶಿಸದಂತೆ ಕೋರ್ಟ್ ಆದೇಶ
- ಆದೇಶ ಅನುಷ್ಠಾನಕ್ಕೆ ತರಲು ಲಂಚಕ್ಕೆ ಬೇಡಿಕೆ
- ₹ 3 ಲಕ್ಷದಿಂದ ₹ 1.5ಲಕ್ಷಕ್ಕೆ ನಡೆದಿದ್ದ ಚೌಕಾಸಿ

## ಸುದ್ದಿ 2 ನಿಮಿಷ

### ಮೆಟ್ರೊ: ನಾಳೆ ಭಾಗಶಃ ಸ್ಥಗಿತ

ಬೆಂಗಳೂರು: ಮೆಟ್ರೊ ರೈಲು ನಿಗಮವು ಜುಲೈ 2ರಂದು ಬೆಳಿಗ್ಗೆ 7ರಿಂದ 9ರವರೆಗೆ ಟ್ರಿನಿಟಿ ಮತ್ತು ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣಗಳ ನಡುವಣ ನೇರಳೆ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಳ್ಳಲಿದೆ.

ಈ ಕಾಮಗಾರಿಯಿಂದಾಗಿ ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದಿಂದ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದವರೆಗೆ ಅಂದು ಎರಡು ತಾಸು ವಾಣಿಜ್ಯ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಕೆಂಗೇರಿ, ಎಂ.ಜಿ. ರಸ್ತೆ, ನಾಗಸಂದ್ರ, ರೇಷ್ಮೆ ಸಂಸ್ಥೆ, ಕೃಷ್ಣರಾಜಪುರ, ವೈಟ್ ಫೀಲ್ಡ್ ವಿಭಾಗಗಳ ರೈಲುಗಳು ಎಂದಿನಂತೆ ಸಂಚರಿಸಲಿವೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

### ರಂಜಿಸಿದ ವಿದ್ಯಾರ್ಥಿಗಳ 'ವೀರ ಬರ್ಬರೀಕ' ಯಕ್ಷಗಾನ



ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ನಗರದಲ್ಲಿ ಆಯೋಜಿಸಿದ್ದ 'ಮಾಸದ ಮೆಲುಕು' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು 'ವೀರ ಬರ್ಬರೀಕ' ಯಕ್ಷಗಾನ ಪ್ರದರ್ಶನ ನೀಡುವ ಮೂಲಕ ರಂಜಿಸಿದರು.

ಯಕ್ಷಗಾನ ಕಲಾವಿದ ಭರತ್ ಪರ್ಕಳರ ನಿರ್ದೇಶನದಲ್ಲಿ ನಡೆದ ಈ ಯಕ್ಷಗಾನ ಪ್ರಸಂಗವನ್ನು ಗುಂಡು ಸೀತಾರಾಮ್ ರಚಿಸಿದ್ದಾರೆ. ಇದು ಮಹಾಭಾರತದ ಕಥೆಯನ್ನಾಧರಿಸಿದೆ. ವೀರ ಬರ್ಬರೀಕ ಪಾತ್ರದಲ್ಲಿ ಪೂಜಾ ಆಚಾರ್ಯ, ಕೃಷ್ಣನ ಪಾತ್ರದಲ್ಲಿ ಅದಿತಿ ಉರಾಳ, ಘಟೋತ್ಕಜನ ಪಾತ್ರದಲ್ಲಿ ಚೈತ್ರಾ, ಧರ್ಮರಾಯನ ಪಾತ್ರದಲ್ಲಿ ಧೃತಿ, ಭೀಮನ ಪಾತ್ರದಲ್ಲಿ ಚಿರಾಗ್, ಅರ್ಜುನನ ಪಾತ್ರದಲ್ಲಿ ಸ್ವರ್ಣ ಯು. ಶೆಟ್ಟಿ, ನಕುಲ ಹಾಗೂ ಸಹದೇವನ ಪಾತ್ರದಲ್ಲಿ ಅನ್ವಿತ ಸೋಮಯಾಜಿ ಮತ್ತು ಪರ್ಣಿಕ ನಾವಡ, ಮೌರ್ವಿಯಾಗಿ ವರ್ಣ ಯು. ಶೆಟ್ಟಿ, ವತ್ಸಲೆಯಾಗಿ ನಿತ್ಯಾ ಗೌಡ ಹಾಗೂ ಗಜಕರ್ಣನಾಗಿ ನಿಶ್ಚಿತ ಅಭಿನಯಿಸಿದರು.

ಸುಮುಖ ಪಾತ್ರದಲ್ಲಿ ಅಭಿನಯಿಸಿದ ದೇವರಾಜ ಕರಬರ ಅವರು ಹಾಸ್ಯ ಮಿಶ್ರಿತ ಮಾತುಗಳಿಂದ ನೆರೆದಿದ್ದವರು ನಗೆಗಡಲಲ್ಲಿ ತೇಲುವಂತೆ ಮಾಡಿದರು. ಹಿಮ್ಮೇಳದಲ್ಲಿ ಭಾಗವತರಾಗಿ ಸುಬ್ರಾಯ ಹೆಬ್ಬಾರ್ ಅಚರು ತಮ್ಮ ಸುಮಧುರ ಕಂಠದಿಂದ ಗಾನ ಸುಧೆ ಹರಿಸಿದರು. ಮದ್ದಲೆ ಹಾಗೂ ಚಂಡೆಯಲ್ಲಿ ಸಂಪತ್ ಆಚಾರ್ ಮತ್ತು ಶ್ರೀನಿವಾಸ ಪ್ರಭು ಅವರು ತಮ್ಮ ತಾಳ ವೈವಿಧ್ಯತೆಯನ್ನು ತೋರಿ, ಬಾಲ ಕಲಾವಿದರಲ್ಲಿ ಉತ್ಸಾಹ ಹೆಚ್ಚುವಂತೆ ಮಾಡಿದರು. ಕಲಾಕದಂಬ ಆರ್ಟ್ ಸೆಂಟರ್‌ನ ನಿರ್ದೇಶಕ ರಾಧಾಕೃಷ್ಣ ಉರಾಳ, ಸತ್ಯನಾರಾಯಣ ಬಿ., ವಿಶ್ವನಾಥ ಉರಾಳ, ಮುರಳೀಧರ ನಾವಡ, ಸುರೇಶ್, ಗುರುರಾಜ್ ಹಾಗೂ ಶನೈಶ್ಚರ ದೇವಾಲಯದ ಪದಾಧಿಕಾರಿಗಳು ಇದ್ದರು.



**ಸಂಕ್ಷಿಪ್ತ ಸುದ್ದಿ**

### ಕಿರು ನಾಟಕೋತ್ಸವ ಏಳು ನಾಟಕಗಳು ಆಯ್ಕೆ

ಬೆಂಗಳೂರು: ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್ ಜಂಟಿಯಾಗಿ ಆಯೋಜಿಸಿದ್ದ 'ಬೆಂಗಳೂರು ಕಿರು ನಾಟಕೋತ್ಸವ'ದ ಎರಡನೇ ಆವೃತ್ತಿಯ ಅಂತಿಮ ಹಂತಕ್ಕೆ ಏಳು ನಾಟಕಗಳು ಆಯ್ಕೆಯಾಗಿವೆ.

ಕಿರು ನಾಟಕೋತ್ಸವದ 2023ರ ಪ್ರಥಮ ಹಂತದ ಸ್ಪರ್ಧೆಯಲ್ಲಿ 18 ತಂಡಗಳು ಭಾಗವಹಿಸಿದ್ದವು. ಅವುಗಳಲ್ಲಿ ಬೆಂಗಳೂರು ಥಿಯೇಟರ್ ಆನ್ಸೆಮಬಲ್ ತಂಡದ 'ಚೆನ್ನುಡಿ', ಪ್ರಕಸಂ ತಂಡದ 'ಸತ್ಯ ನಿತ್ಯ', ಕಲಾ ಕದಂಬ ಆರ್ಟ್ ಸೆಂಟರ್‌ನ 'ಅಡ್ವೆಂಚರ್ಸ್ ಆಫ್ ಅಮ್ಮ', ಕರಣ ಥಿಯೇಟರ್‌ನ 'ಕನ್ನಡಿಗ (ಳು)', ಮಲೆನಾಡು ರಂಗ ತಂಡದ 'ಕನ್ನಡವೆಂದರೆ ಈಗಿನ ಜನರೇಶನ್‌ಗಳಿಗೆ ತೊಂದರೆ', ಕಲಾವಿಲಾಸಿ ತಂಡದ 'ಕೊನೆಯ ಸಂಚಿಕೆ?' ಹಾಗೂ ಉತ್ಕರ್ಷ್ ಅಭಿನಯ ತಂಡದ 'ಎತ್ತ ಮುಖ ಮಾಡಲಯ್ಯ ನಾ' ನಾಟಕ ಅಂತಿಮ ಹಂತದ ಸ್ಪರ್ಧೆಗೆ ಆಯ್ಕೆಯಾಗಿವೆ.

ಜುಲೈ 2ರಂದು ಸಂಜೆ 6 ಗಂಟೆಗೆ ಇಲ್ಲಿನ ಹನುಮಂತ ನಗರದಲ್ಲಿ ಇರುವ ಪ್ರಭಾತ್ ಕೆ.ಎಚ್.ಕಲಾಸೌಧದಲ್ಲಿ ಅಂತಿಮ ಹಂತದ ಸ್ಪರ್ಧೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

### ಇಂದು ರಕ್ತದಾನ ಶಿಬಿರ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ವೈದ್ಯರ ದಿನಾಚರಣೆ ಪ್ರಯುಕ್ತ ಶನಿವಾರ ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ರಕ್ತದಾನ ಶಿಬಿರ ಹಮ್ಮಿಕೊಂಡಿದೆ.

ಸಂಸ್ಥೆಯ ಸೈಕಿಯಾಟ್ರಿ ರಿಸೆಪ್ಷನ್ ಬ್ಲಾಕ್‌ನಲ್ಲಿ ಶಿಬಿರ ನಡೆಯಲಿದೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ರಕ್ತವನ್ನು ದಾನ ಮಾಡಬೇಕು ಎಂದು ಪ್ರಕಟಣೆ ತಿಳಿಸಿದೆ.


### ಕಾರ್ಯಾಗಾರ ಇಂದಿನಿಂದ

ಬೆಂಗಳೂರು: 'ಸಂವಿಧಾನ ಓದು ಅಭಿಯಾನ: ಭಾಷಣ ಮತ್ತು ಸಂವಹನ ಕಲೆ' ಕುರಿತು ರಾಜ್ಯಮಟ್ಟದ ಕಾರ್ಯಾಗಾರ ಜುಲೈ 1 ಮತ್ತು 2ರಂದು ನಗರದ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ 'ಆಶೀರ್ವಾದ'ದಲ್ಲಿ ಹಮ್ಮಿಕೊಳ್ಳಲಾಗಿದೆ. ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಸಾಹಿತಿಗಳಾದ ಪ್ರೊ. ಆರ್.ಕೆ. ಹುಡ್ಗಿ, ಯೋಗೇಶ್ ಮಾಸ್ಟರ್, ರಹಮತ್ ತರೀಕೆರೆ ಪಾಲ್ಗೊಳ್ಳಲಿದ್ದಾರೆ. ಬೇರೆ ಬೇರೆ ಜಿಲ್ಲೆಗಳಿಂದ 150ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಅಭಿಯಾನದ ಸಂಚಾಲಕ ಬಿ. ರಾಜಶೇಖರಮೂರ್ತಿ ತಿಳಿಸಿದ್ದಾರೆ.




### ಗಾಂಧಿ ತತ್ವ ಪ್ರತಿಪಾದಕರಿಗೆ 'ಕಸಾಪ ದತ್ತಿ ಪ್ರಶಸ್ತಿ'

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 'ಎ.ಆರ್. ನಾರಾಯಣಘಟ್ಟ ಮತ್ತು ಸರೋಜಮ್ಮ ಗಾಂಧಿ ಪುರಸ್ಕಾರ ಪುದುವಟ್ಟು ದತ್ತಿ ಪ್ರಶಸ್ತಿ' ಘೋಷಿಸಿದ್ದು, 2020ನೇ ಸಾಲಿಗೆ ಬೆಂಗಳೂರಿನ ಕೋದಂಡರಾಮು ಆಯ್ಕೆಯಾಗಿದ್ದಾರೆ.



ಕೋದಂಡ ರಾಮು



ನರಸಿಂಹಯ್ಯ

2021ನೇ ಸಾಲಿಗೆ ಧಾರವಾಡದ ಗರಗದ 'ಗರಗ ಕ್ಷೇತ್ರಿಯ ಸೇವಾ ಸಂಘ (ಖಾದಿ ಕೇಂದ್ರ ಗರಗ)', 2022ನೇ ಸಾಲಿಗೆ ತುಮಕೂರಿನ ನರಸಿಂಹಯ್ಯ ಹಾಗೂ 2023ನೇ ಸಾಲಿಗೆ ಹುಬ್ಬಳ್ಳಿಯ ಬೆಂಗೇರಿಯ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ ಆಯ್ಕೆಯಾಗಿದೆ.

ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ.

## ದಕ್ಷಿಣ ಪಿನಾಕಿನಿ ನದಿ ವಿವಾದ: ನ್ಯಾಯಮಂಡಳಿ ಬೇಡ–ಡಿಕೆಶಿ

# ಮಾತುಕತೆಗೆ ಒಲವು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆಯ ವಿವಾದ ಬಗೆಹರಿಸಲು 'ದಕ್ಷಿಣ ಪಿನಾಕಿನಿ ಜಲವಿವಾದ ನ್ಯಾಯ ಮಂಡಳಿ' ರಚಿಸುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ಕರ್ನಾಟಕ ಸರ್ಕಾರ ವಿರೋಧ ವ್ಯಕ್ತಪಡಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಉಪಮುಖ್ಯ ಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್, 'ಬೆಂಗಳೂರಿನಲ್ಲಿ ಕೊಳಚೆ ನೀರು ಶುದ್ಧೀಕರಿಸಿ ಕೋಲಾರ ಭಾಗಕ್ಕೆ ನೀಡುತ್ತಿರುವುದಕ್ಕೆ ತಮಿಳುನಾಡು ಆಕ್ಷೇಪ ವ್ಯಕ್ತಪಡಿಸಿದೆ. ಈ ಸಂಬಂಧ ನ್ಯಾಯಮಂಡಳಿ ರಚಿಸದಂತೆ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವಿ ಮಾಡಲಾಗಿದೆ. ನಾವು ಕೂತು ಸಮಸ್ಯೆ ಬಗೆಹರಿಸಿಕೊಳ್ಳೋಣ. ದಿನನಿತ್ಯ ಈ ವಿಚಾರವಾಗಿ ಎರಡು ರಾಜ್ಯಗಳು ಸಂಘರ್ಷ ಮಾಡಿಕೊಳ್ಳುವುದು ಬೇಡ ಎಂದೂ ಮನವಿ ಮಾಡಿದ್ದೇನೆ' ಎಂದರು.

ರಾಜ್ಯದ ವಿವಿಧ ನೀರಾವರಿ ಯೋಜನೆಗಳ ಕುರಿತು ಶಿವಕುಮಾರ್ ಅವರು ಶೇಖಾವತ್ ಅವರೊಂದಿಗೆ ಗುರುವಾರ ರಾತ್ರಿ ಸಮಾಲೋಚನೆ ನಡೆಸಿದರು. 'ಈ ವಿವಾದವನ್ನು ಸೌಹಾರ್ದವಾಗಿ ಬಗೆಹರಿಸಲು ಜಲ ಶಕ್ತಿ ಸಚಿವಾಲಯವು ಮತ್ತೊಮ್ಮೆ ನೇತೃತ್ವ ವಹಿಸಲಿದೆ ಹಾಗೂ ಸಹಾಯ ಮಾಡಲಿದೆ' ಎಂದು ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ಬೆಂಗಳೂರಿನ ಕೊಳಚೆ ನೀರು ಶುದ್ಧೀಕರಿಸಿ ಕೋಲಾರ ಭಾಗಕ್ಕೆ ನೀಡುತ್ತಿರುವುದಕ್ಕೆ ತಮಿಳುನಾಡು ಆಕ್ಷೇಪ ವ್ಯಕ್ತಪಡಿಸಿದೆ. ಇಲ್ಲಿ ಈ ನೀರಿನ ಪ್ರಮಾಣ ಒಂದು ಟಿಎಂಸಿ ಅಡಿ ಕೂಡ ಇಲ್ಲ. ಪ್ರಾಧಿಕಾರ ರಚನೆಯಾದರೆ ರಾಜ್ಯದ ಯೋಜನೆಗಳಿಗೆ ಸಮಸ್ಯೆ ಆಗುವ ಸಾಧ್ಯತೆ ಇದೆ' ಎಂದು ಅವರು ಆತಂಕ ವ್ಯಕ್ತಪಡಿಸಿದರು.

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ.

## 'ವರ್ಗಾವಣೆ ಮಾಫಿಯಾ ಇಲ್ಲ'

**ನವದೆಹಲಿ:** 'ಕಾಂಗ್ರೆಸ್ ಸರ್ಕಾರ ವರ್ಗಾವಣೆ ಮಾಫಿಯಾದಲ್ಲಿ ತೊಡಗಿಲ್ಲ. ಒಂದು ವೇಳೆ, ಸರ್ಕಾರದಲ್ಲಿ ಇಂತಹ ಘಟನೆಗಳು ನಡೆದರೆ ಅದಕ್ಕೆ ಕಡಿವಾಣ ಹಾಕಲಾಗುವುದು' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಮುಖ್ಯಮಂತ್ರಿ ಕಚೇರಿಯಲ್ಲಿ ವರ್ಗಾವಣೆ ದಂಧೆ ನಡೆಯುತ್ತಿದೆ ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರ ಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಕೆಲವು ಒತ್ತಡದಲ್ಲಿ ಯಾರಿಗೆ ಯಾವ ಆದೇಶ ಎಂದು ಗೊತ್ತಾಗುವುದಿಲ್ಲ. ಎಲ್ಲವೂ ಒಂದು ಹಂತಕ್ಕೆ ಬರಲು ಸಮಯ ಬೇಕು. ಎಲ್ಲವನ್ನೂ ಸರಿಪಡಿಸಲಾಗುವುದು. ನನ್ನ ಇಲಾಖೆಯಲ್ಲಿ ಇದುವರೆಗೂ ಒಂದೇ ಒಂದು ವರ್ಗಾವಣೆ ಮಾಡಿಲ್ಲ. ಅವರಿಗೆ ಮಾಹಿತಿ ಇದ್ದರೆ ನೀಡಲಿ' ಎಂದು ಸವಾಲೆಸೆದರು.

## 4ರಂದು ಸದನದ ಒಳಗೆ, ಹೊರಗೆ ಬಿಜೆಪಿ ಹೋರಾಟ

**ಬೆಂಗಳೂರು:** ಕಾಂಗ್ರೆಸ್ 'ಗ್ಯಾರಂಟಿ' ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಆಗ್ರಹಿಸಿ ಜುಲೈ 4ರಂದು ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಇಡೀ ದಿನ ಧರಣಿ ನಡೆಸಲಾಗುವುದು ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಕೊಟ್ಟ ಗ್ಯಾರಂಟಿಯ ಭರವಸೆಗಳನ್ನು ಜಾರಿಗೊಳಿಸಬೇಕು' ಎಂದು ಆಗ್ರಹಿಸಿದರು.

## ಬೆಂಗಳೂರು ರೇಸ್


### ಲಾಂಗ್ ಲೀಸ್ ಗೆಲ್ಲುವ ನಿರೀಕ್ಷೆ

ಫೈವ್ ಸ್ಟಾರ್ ಶಿಪ್ಪಿಂಗ್ ಜುವನೈಲ್ ಸ್ಪ್ರಿಂಟರ್ಸ್ ಮಿಲಿಯನ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲಾಂಗ್ ಲೀಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅಲ್ಟಿಮೇಟ್ ಚಾನ್ಸ್ 1, ಸ್ಟ್ಯಾಂಡ್ ಕ್ಯಾಸ್ಲ್ 12, ಎಲೈಟ್ ಏಜೆಂಟ್ 7
2ನೇ ರೇಸ್: ಮಿಸ್ಟಿಕಲ್ ಮರ್ಕಬಾ 7, ಸಿಂಕೊ ಡೆ ಮಿಯೊ 2, ಸ್ಲಿಂಗ್ ಶಾಟ್ 8
3ನೇ ರೇಸ್: ಎಟರ್ನಲ್ ಪ್ರಿನ್ಸೆಸ್ 1, ಆಲ್ಸಿಡಸ್ ಎನರ್ಜಿ 9, ಸೂಪರ್ ಕೈಂಡ್ 8
4ನೇ ರೇಸ್: ನೈಟ್ ಡಿಫೆನ್ಸರ್ 3, ವಿಕ್ಟೋರಿಯಾ ದೊರೆಸಾನಿ 8, ಕ್ರಾಸ್‌ವಾಟರ್ 5
5ನೇ ರೇಸ್: ಪ್ರೈಡ್ಸ್ ಏಂಜೆಲ್ 4, ಡೆ ವಿಲ್ಲಿಯರ್ಸ್ 2, ರೀಜೆನ್ಸಿ ಸ್ಟೈಲ್ 5
6ನೇ ರೇಸ್: ಲಾಂಗ್ ಲೀಸ್ 8, ಡೆಡಿಕೇಟ್ 1, ಕೆನಾಫ್ 2
7ನೇ ರೇಸ್: ಟಾಪ್ ಡ್ಯಾನ್ಸರ್ 5, ಮಿಲ್‌ಬ್ರೂಕ್ 3, ಕಟಾನ 2

**ಉತ್ತಮ ಬೆಟ್: ನೈಟ್ ಡಿಫೆನ್ಸರ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5.6,7 |




'ನಿಸ್ವಾರ್ಥ ಬದುಕಿನ ಶ್ರೀರಾಮಭಕ್ತ ಎಸ್.ವಿ. ನಾರಾಯಣಸ್ವಾಮಿ' ಪುಸ್ತಕವನ್ನು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಬಿಡುಗಡೆ ಮಾಡಿದರು. ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್, ಡಾ.ಸುಮಾ ಸುಧೀಂದ್ರ, ಡಾ.ರಾಘವೇಂದ್ರ ಆಚಾರ್, ರವಿಶಂಕರ್, ವಿದ್ವಾನ್ ನಾಗರಾಜ್, ಬಾಲಮಣಿ ಮತ್ತು ಲೇಖಕ ನಾಗರಾಜ್ ಇದ್ದರು.

## ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮಾರಕ ಸಭಾಂಗಣ ಉದ್ಘಾಟನೆ

# 'ನಿಸ್ವಾರ್ಥದ ಸೇವೆ ಮುಖ್ಯ'

ಪ್ರಜಾವಾಣಿ ವಾರ್ತೆ

**ಕೆಂಗೇರಿ:** 'ಸ್ವಾರ್ಥ ಮನೋಭಾವದಿಂದ ಹುಟ್ಟು ಹಾಕಿದ ಸಂಘ–ಸಂಸ್ಥೆಗಳು ದೀರ್ಘಕಾಲ ಜನಮಾನಸದಲ್ಲಿ ಉಳಿಯಲು ಅಸಾಧ್ಯ' ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಯಶವಂತಪುರ ಕ್ಷೇತ್ರದ ನೆಟ್ಟಿಗೆರೆ ಗ್ರಾಮದಲ್ಲಿ ಶ್ರೀರಾಮ ಸೇವಾ ಮಂಡಲಿ ಟ್ರಸ್ಟ್ ಎಸ್.ವಿ. ನಾರಾಯಣಸ್ವಾಮಿ ರಾವ್ ಅವರ ಸ್ಮರಣಾರ್ಥ ನಿರ್ಮಿಸಿರುವ 'ಎಸ್.ವಿ. ನಾರಾಯಣಸ್ವಾಮಿ ರಾವ್ ಮೆಮೋರಿಯಲ್ ಹಾಲ್' ಉದ್ಘಾಟನೆ ಹಾಗೂ 'ನಿಸ್ವಾರ್ಥ ಬದುಕಿನ ಶ್ರೀರಾಮಭಕ್ತ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಂಗೀತ ಪ್ರೀತಿ, ಸೇವಾ ಮನೋಭಾವದ ಸಂಗಮದಿಂದ ಶ್ರೀರಾಮಸೇವಾ ಮಂಡಲಿ ಇಂದಿಗೂ ಜನಮನ್ನಣೆ ಗಳಿಸಿದೆ. ನಿಸ್ವಾರ್ಥ ಮನಸ್ಸು ಉಳ್ಳವರು ಮಾತ್ರ ಶ್ರೀರಾಮನ ಭಕ್ತರಾಗಲು ಸಾಧ್ಯ. ದೈವ ಸ್ವರೂಪಿ ಹನುಮನೇ ಇದಕ್ಕೆ ಸಾಕ್ಷಿ' ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಮಾತನಾಡಿ, 'ಶ್ರೀರಾಮ ಸೇವಾ ಮಂಡಲಿಯಂತಹ ಅಮೋಘ ಸಂಗೀತ ಸೌಧವನ್ನು ಹುಟ್ಟು ಹಾಕುವ ಮೂಲಕ ಸಂಗೀತಾರಾಧನೆಗೆ ದೈವಿಕ ವೇದಿಕೆ ಕಲ್ಪಿಸಿದ ನಾರಾಯಣ ಸ್ವಾಮಿ ರಾವ್ ಅವರ ಕಾರ್ಯ ಎಂದಿಗೂ ಸ್ತುತ್ಯರ್ಹ' ಎಂದು ಹೇಳಿದರು.

'ಭಗವಂತನ ಸಾಕ್ಷಾತ್ಕಾರಕ್ಕೆ ಹಲವು ಮಾರ್ಗಗಳಿವೆ. ಸಾಧು ಸಂತರು ಸಂಗೀತದ ಮೂಲಕ ಭಗವಂತನನ್ನು ಕಂಡರೆ, ಕಲಾರಸಿಕರಿಗೆ ಸಂಗೀತವನ್ನು ಉಣಬಡಿಸುವ ಮೂಲಕ ನಾರಾಯಣರಾವ್ ಅವರು ದೇವರನ್ನು ಕಂಡುಕೊಂಡರು. ಆ ಮೂಲಕ ನೂರಾರು ಕಲಾವಿದರ ಭವಿಷ್ಯಕ್ಕೂ ಆಸರೆಯಾದರು' ಎಂದು ಶ್ಲಾಘಿಸಿದರು.

ಡಾ.ಸುಮಾ ಸುಧೀಂದ್ರ, ಡಾ.ರಾಘವೇಂದ್ರ ಆಚಾರ್, ರವಿಶಂಕರ್, ವಿದ್ವಾನ್ ನಾಗರಾಜ್, ಬಾಲಮಣಿ, ಲೇಖಕ ನಾಗರಾಜ್ ಅವರು ನಾರಾಯಣ ಸ್ವಾಮಿ ರಾವ್ ಅವರೊಂದಿಗಿನ ನೆನಪುಗಳನ್ನು ಮೆಲುಕು ಹಾಕಿದರು.

ಎರಡು ಎಕರೆ ಜಾಗದಲ್ಲಿ 'ಎಸ್.ವಿ. ನಾರಾಯಣಸ್ವಾಮಿ ರಾವ್ ಮೆಮೋರಿಯಲ್ ಹಾಲ್' ನಿರ್ಮಿಸಲಾಗಿದ್ದು, ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ.

## ಕ್ರೀಡಾ ಇಲಾಖೆ ಆಯುಕ್ತರಾಗಿ ಎನ್.ಶಶಿಕುಮಾರ್

ಬೆಂಗಳೂರು: ರೈಲ್ವೆ ಇಲಾಖೆ ಡಿಐಜಿ ಹುದ್ದೆಯಲ್ಲಿದ್ದ ಐಪಿಎಸ್ ಅಧಿಕಾರಿ ಎನ್.ಶಶಿಕುಮಾರ್ ಅವರನ್ನು ಕ್ರೀಡಾ ಇಲಾಖೆ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಹಾಸನ ಜಿಲ್ಲಾಧಿಕಾರಿ ಅರ್ಚನಾ ಎಂ.ಎಸ್. ಅವರನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕರ ಹುದ್ದೆಗೆ ಮತ್ತು ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ ಆಯುಕ್ತ ಡಾ.ಬಿ. ಎಸ್. ಗೋಪಾಲಕೃಷ್ಣ ಅವರನ್ನು ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹುದ್ದೆಗೆ ವರ್ಗಾಯಿಸಲಾಗಿದೆ.

ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

ನಗರ್ತಪೇಟೆಯ ಚಿನ್ನಾಭರಣ ಮಳಿಗೆಯಲ್ಲಿ ಘಟನೆ • ಮಳಿಗೆ ಮಾಲೀಕರ ವಿರುದ್ಧ ಎಫ್‌ಐಆರ್

# ಸಿಲಿಂಡರ್ ಸ್ಫೋಟ: ಕೆಲಸಗಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ್ತಪೇಟೆಯಲ್ಲಿರುವ ಅಂಬಿಕಾ ಆಭರಣ ಮಳಿಗೆಯಲ್ಲಿ ಆಮ್ಲಜನಕ ಸಿಲಿಂಡರ್ ಸ್ಫೋಟಗೊಂಡಿದ್ದು, ಅದರಿಂದ ಚಿಮ್ಮಿದ ಕಬ್ಬಿಣದ ಚೂರುಗಳು ತಾಗಿ ಕೆಲಸಗಾರ ವಿಷ್ಣು ಸಾವಂತ್ ಮೃತಪಟ್ಟಿದ್ದಾರೆ.

'ಮಹಾರಾಷ್ಟ್ರದ ವಿಷ್ಣು, ಪತ್ನಿ ವೈಜಯಂತಿ ಜೊತೆ ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಚಿನ್ನ ಶುದ್ಧೀಕರಣ ಪ್ರಕ್ರಿಯೆಯಲ್ಲಿ ಪರಿಣತಿ ಹೊಂದಿದ್ದ ವಿಷ್ಣು, ರಮೇಶ್ ಹಾಗೂ ಮಹೇಶ್ ಕೊಠಾರಿ ಮಾಲೀಕತ್ವದ ಅಂಬಿಕಾ ಚಿನ್ನಾಭರಣ ಮಳಿಗೆಯಲ್ಲಿ ಕೆಲಸಕ್ಕೆ ಸೇರಿದ್ದರು. ಅದೇ ಮಳಿಗೆಯಲ್ಲಿ ಸಿಲಿಂಡರ್ ಸ್ಫೋಟ ಸಂಭವಿಸಿದೆ' ಎಂದು ಹಲಸೂರು ಗೇಟ್ ಠಾಣೆ ಪೊಲೀಸರು ಹೇಳಿದರು.

'ಸ್ಫೋಟ ಸಂಬಂಧ ಮಳಿಗೆಯ ಇನ್ನೊಬ್ಬ ನೌಕರ ನರೇಂದ್ರ ಸೋನಿ ದೂರು ನೀಡಿದ್ದಾರೆ. ಮಳಿಗೆ ಮಾಲೀಕರಾದ ರಮೇಶ್ ಹಾಗೂ ಮಹೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ' ಎಂದರು.

**ಊಟದ ಸಂದರ್ಭದಲ್ಲಿ ಸ್ಫೋಟ:** 'ಮಳಿಗೆಯಲ್ಲಿದ್ದ ವಿಷ್ಣು, ಚಿನ್ನ ಶುದ್ಧೀಕರಣ ಹಾಗೂ ಚಿನ್ನ ಕರಗಿಸುವ ಕೆಲಸದಲ್ಲಿ ತೊಡಗಿದ್ದರು. ಇದಕ್ಕಾಗಿ ಎಲ್‌ಪಿಜಿ ಸಿಲಿಂಡರ್ ಹಾಗೂ ಆಮ್ಲಜನಕ ಸಿಲಿಂಡರ್ ಬಳಸಲಾಗುತ್ತಿತ್ತು' ಎಂದು ಪೊಲೀಸರು ತಿಳಿಸಿದರು.

'ಮಾಲೀಕರು ಗುರುವಾರ ಮಧ್ಯಾಹ್ನ ಮಳಿಗೆಯಿಂದ ಹೊರಗೆ ಹೋಗಿದ್ದರು. ವಿಷ್ಣು ಮಾತ್ರ ಮಳಿಗೆಯಲ್ಲಿದ್ದರು. ಅದೇ ಸಂದರ್ಭದಲ್ಲಿ ಪತ್ನಿ ವೈಜಯಂತಿ, ಊಟ ತೆಗೆದುಕೊಂಡು ಮಳಿಗೆಗೆ ಬಂದಿದ್ದರು. ಅರ್ಧಕ್ಕೆ ಕೆಲಸ ನಿಲ್ಲಿಸಿದ್ದ ವಿಷ್ಣು, ಸಿಲಿಂಡರ್ ಬಳಿಯೇ ಕುಳಿತು ಊಟ ಮಾಡುತ್ತಿದ್ದರು. ಆದರೆ, ಆಮ್ಲಜನಕದ ಸಿಲಿಂಡರ್ ಆಫ್ ಮಾಡುವುದನ್ನು ಮರೆತಿದ್ದರು.'

'ಆಮ್ಲಜನಕ ಸಿಲಿಂಡರ್ ಏಕಾಏಕಿ ಸ್ಫೋಟಗೊಂಡು, ಕಬ್ಬಿಣದ ಚೂರುಗಳು ಚೆಲ್ಲಾಪಿಲ್ಲಿಯಾಗಿದ್ದವು. ಅದೇ ಚೂರುಗಳು ವಿಷ್ಣು ತಲೆ ಹಾಗೂ ದೇಹದ ಹಲವೆಡೆ ತಾಗಿದ್ದವು. ಕೊಠಡಿಯಲ್ಲಿ ಹೊಗೆ ಆವರಿಸಿತ್ತು, ತಲೆಯಿಂದ ರಕ್ತ ಸೋರುತ್ತಿದ್ದ ವಿಷ್ಣು ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ. ಪತ್ನಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದರು.

'ಆಮ್ಲಜನಕ ಸಿಲಿಂಡರ್ ಪಕ್ಕದಲ್ಲೇ ಎಲ್‌ಪಿಜಿ ಸಿಲಿಂಡರ್ ಇತ್ತು. ಅದೃಷ್ಟವಶಾತ್ ಅದಕ್ಕೆ ಯಾವುದೇ ಧಕ್ಕೆಯಾಗಿಲ್ಲ. ಆಕಸ್ಮಾತ್ ಎಲ್‌ಪಿಜಿ ಸಿಲಿಂಡರ್ ಸ್ಫೋಟಗೊಂಡಿದ್ದರೆ, ಬೆಂಕಿ ಹೊತ್ತಿಕೊಳ್ಳುವ ಸಾಧ್ಯತೆ ಇತ್ತು' ಎಂದು ಪೊಲೀಸರು ತಿಳಿಸಿದರು.

'ಸಿಲಿಂಡರ್ ಬಳಕೆಗೆ ಅನುಮತಿ ನೀಡಲಾಗಿದೆಯೇ ಅಥವಾ ಅಕ್ರಮವಾಗಿ ಸಿಲಿಂಡರ್ ಬಳಕೆ ಮಾಡಲಾಗುತ್ತಿತ್ತಾ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಅವರು ಹೇಳಿದರು.



ಸ್ಫೋಟದಿಂದ ಛಿದ್ರಗೊಂಡಿರುವ ಆಮ್ಲಜನಕ ಸಿಲಿಂಡರ್

## ಸುದ್ದಿ 2 ನಿಮಿಷ

### ಡ್ರೋನ್ ಬಳಸಿ ನಗರದಲ್ಲಿ ವಾಯು ಮಾಲಿನ್ಯ ಅಧ್ಯಯನ

ಬೆಂಗಳೂರು: ನಗರದ ಆಯ್ದ ಸ್ಥಳಗಳು ಹಾಗೂ ಪ್ರಮುಖ ವಾಹನ ದಟ್ಟಣೆಯುಳ್ಳ ವೃತ್ತಗಳಲ್ಲಿ ಎರಡು ಸಂಸ್ಥೆಗಳು ಡ್ರೋನ್ ಬಳಸಿ ವಾಯು ಮಾಲಿನ್ಯ ಅಧ್ಯಯನ ಆರಂಭಿಸಿವೆ.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಇಎಂಪಿಆರ್‌ಐ) ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (ಎನ್‌ಐಎಎಸ್) ಸಹಭಾಗಿತ್ವದಲ್ಲಿ ಈ ಅಧ್ಯಯನ ಆರಂಭವಾಗಿದೆ. ವಾಯು ಮಾಲಿನ್ಯದ ದುಷ್ಪರಿಣಾಮಗಳ ತಡೆಗೆ ಅಧ್ಯಯನ ಸಹಕಾರಿ ಆಗಲಿದೆ ಎಂದು ನಿರೀಕ್ಷಿಸಲಾಗಿದೆ.

ನಗರದಲ್ಲಿ ವಾಯು ಮಾಲಿನ್ಯವು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೈಗಾರಿಕೆಗಳು ಹಾಗೂ ವಾಹನಗಳಿಂದ ವಾಯು ಮಾಲಿನ್ಯ ಹೆಚ್ಚಾಗಿದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸುತ್ತಾರೆ.

ಡ್ರೋನ್ ತಂತ್ರಜ್ಞಾನ ಆಧರಿತ ಅಧ್ಯಯನವು ನಿಖರವಾದ ಅಂಕಿ-ಅಂಶವನ್ನು ಒದಗಿಸಲಿದೆ ಎಂಬ ಆಶಯವನ್ನು ನಿರೀಕ್ಷಿಸಲಾಗಿದೆ.

ಸದ್ಯ ತಂಡವೊಂದು ಅಧ್ಯಯನದಲ್ಲಿ ತೊಡಗಿದೆ. ಮೂರು ಡ್ರೋನ್ ಬಳಕೆ ಮಾಡಲಾಗುತ್ತಿದೆ. ಹೆಚ್ಚಿನ ವಾಹನ ದಟ್ಟಣೆಯುಳ್ಳ 42 ಜಂಕ್ಷನ್‌ಗಳು, 36 ಕೊಳೆಗೇರಿಗಳು, 6 ಘನತ್ಯಾಜ್ಯ ನಿರ್ವಹಣಾ ಘಟಕಗಳು ಹಾಗೂ ಮೂರು ಕೈಗಾರಿಕಾ ಪ್ರದೇಶ, ನಗರ ಪ್ರವೇಶಿಸುವ ಪ್ರಮುಖ ವಾದ 8 ಸ್ಥಳಗಳಲ್ಲಿ ಈ ಅಧ್ಯಯನ ನಡೆಯಲಿದೆ.

ವಾಹನ ದಟ್ಟಣೆ, ಜನಸಂದಣಿ, ಕೈಗಾರಿಕೆಗಳು, ಕಸದ ರಾಶಿಯ ದೃಶ್ಯವನ್ನು ಸೆರೆ ಹಿಡಿಯಲಿವೆ. ಅದರ ಆಧಾರದ ಮೇಲೆ ವಾಯು ಮಾಲಿನ್ಯದ ವಿಶ್ಲೇಷಣೆ ನಡೆಸಲಾಗುವುದು ಎಂದು ಸಂಸ್ಥೆ ತಿಳಿಸಿದೆ.

'ಈ ಅಧ್ಯಯನ ವರದಿ, ಮುಂದಿನ ದಿನಗಳಲ್ಲಿ ವಾಯು ಮಾಲಿನ್ಯ ತಡೆಗೆ ಸಹಕಾರಿ ಆಗಲಿದೆ. ಇದು ವರ್ಷದ ಯೋಜನೆಯಾಗಿದೆ. ಕಳೆದ ಬುಧವಾರದಿಂದ ಡ್ರೋನ್ ಬಳಸಿ ವಿಶ್ಲೇಷಣೆ ನಡೆಸಲಾಗುತ್ತಿದೆ' ಎಂದು ಯೋಜನೆ ಸಮನ್ವಯಕಾರರಾದ ಡಾ.ಎಂ.ಇ.ತೇಜಸ್ವಿನಿ ತಿಳಿಸಿದ್ದಾರೆ.

### 'ವಿದ್ಯುತ್ ದರ: ಸರ್ಕಾರದ ಪಾತ್ರ ಇಲ್ಲ'



ಬೆಂಗಳೂರು: ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮೊದಲೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ವಿದ್ಯುತ್ ದರ ಹೆಚ್ಚಳ ಮಾಡಿತ್ತು. ಇದರಲ್ಲಿ ಸರ್ಕಾರದ ಪಾತ್ರವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಶುಕ್ರವಾರ ತಮ್ಮನ್ನು ಭೇಟಿ ಮಾಡಿದ ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಎಚ್. ಮಂಜುನಾಥ್ ಅವರ ನೇತೃತ್ವದ ನಿಯೋಗದ ಜತೆ ಅವರು ಮಾತನಾಡಿದರು.

ಸಣ್ಣ, ಅತಿಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಹಿತಾಸಕ್ತಿ ಕಾಪಾಡಲು ಸರ್ಕಾರ ಬದ್ಧವಾಗಿದೆ. ಪೀಣ್ಯ ಕೈಗಾರಿಕಾ ಟೌನ್‌ಶಿಪ್ ಪ್ರಾಧಿಕಾರ ಸ್ಥಾಪನೆ, ಕೆಐಎಡಿಬಿ ಕೈಗಾರಿಕಾ ಪ್ರದೇಶದ ಮೂಲಭೂತ ಸೌಕರ್ಯ ಸೇರಿದಂತೆ ಇತರೆ ಬೇಡಿಕೆ ಈಡೇರಿಕೆಗೆ ನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಆಶ್ವಾಸನೆ ನೀಡಿದರು. ದರ ಹೆಚ್ಚಳ ಕುರಿತು ಆಯೋಗಕ್ಕೆ ಮನವಿ ಸಲ್ಲಿಸುವಂತೆ ಸಲಹೆ ನೀಡಿದರು.

## ಕಳ್ಳತನ: ಸಹಜೀವನದಲ್ಲಿದ್ದ ಯುವಕ–ಯುವತಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ಸುಮಂತ್ ಹಾಗೂ ಲಿಖಿತಾ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಶಿವಮೊಗ್ಗ ಜಿಲ್ಲೆಯ ಸುಮಂತ್ ಹಾಗೂ ಲಿಖಿತಾ, ತಾವು ವಾಸವಿದ್ದ ಬಾಡಿಗೆ ಮನೆಯ ಮಾಲೀಕರ ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದರು. ಎಜಿಎಸ್ ಬಡಾವಣೆಯಲ್ಲಿರುವ ಮನೆ ಮಾಲೀಕರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಶಿವಮೊಗ್ಗದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ. ಸದ್ಯ ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸುಮಂತ್ ಹಾಗೂ ಲಿಖಿತಾ, ಪಿಜಿಯೋಥೆರಪಿ ಕೋರ್ಸ್ ಅಧ್ಯಯನಕ್ಕಾಗಿ ಎರಡು ವರ್ಷಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ವ್ಯಾಸಂಗದ ಸ್ಥಳದಲ್ಲಿ ಇಬ್ಬರಿಗೂ ಪರಿಚಯವಾಗಿ ಸಲುಗೆ ಬೆಳೆದಿತ್ತು. ನಂತರ, ಅವರಿಬ್ಬರು ಒಂದೇ ಮನೆಯಲ್ಲಿ ಸಹಜೀವನ ನಡೆಸುತ್ತಿದ್ದರು.'

'ಇಬ್ಬರೂ ಬೆಲೆಬಾಳುವ ವಸ್ತುಗಳನ್ನು ಹೆಚ್ಚು ಖರೀದಿಸುತ್ತಿದ್ದರು. ಐಷಾರಾಮಿ ಜೀವನ ನಡೆಸುತ್ತಿದ್ದರು. ಇದಕ್ಕಾಗಿ ಹಲವರ ಬಳಿ ಸಾಲ ಮಾಡಿಕೊಂಡಿದ್ದರು. ಕೋರ್ಸ್ ಅಧ್ಯಯನ ಅವಧಿ ಮುಗಿಯುತ್ತಿದ್ದಂತೆ ಮನೆ ಖಾಲಿ ಮಾಡಿದ್ದ ಇಬ್ಬರೂ ಕೆಲ ತಿಂಗಳು ತಮ್ಮೂರಿಗೆ ಹೋಗಿದ್ದರು. ಸಾಲ ಕೊಟ್ಟವರು, ಮರುಪಾವತಿಗಾಗಿ ಒತ್ತಾಯಿಸಲಾರಂಭಿಸಿದ್ದರು' ಎಂದು ಪೊಲೀಸರು ತಿಳಿಸಿದರು.

## ಗೃಹಪ್ರವೇಶದಲ್ಲಿ ಅಸಭ್ಯ ವರ್ತನೆ ಲಿಂಗತ್ವ ಅಲ್ಪಸಂಖ್ಯಾತರ ಬಂಧನ

ಬೆಂಗಳೂರು: ವೈಯಾಲಿಕಾವಲ್ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ಅಸಭ್ಯವಾಗಿ ವರ್ತಿಸಿದ್ದ ಆರೋಪದಡಿ ಮೂವರು ಲಿಂಗತ್ವ ಅಲ್ಪಸಂಖ್ಯಾತರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

'ಶ್ರೀರಾಮಪುರದ ಕೃತಿಕಾ, ಪ್ರಶಾಂತ್ ಅಲಿಯಾಸ್ ಪ್ರೀತಿ ಹಾಗೂ ಮಣಿಕಂಠನ್ ಅಲಿಯಾಸ್ ಪೂಜಾ ಬಂಧಿತರು. ಗೃಹ ಪ್ರವೇಶ ಕಾರ್ಯಕ್ರಮ ನಡೆಯುತ್ತಿದ್ದ ಮನೆಗೆ ನುಗ್ಗಿದ್ದ ಇಬ್ಬರೂ ಅಸಭ್ಯವಾಗಿ ವರ್ತಿಸಿ ಜೀವ ಬೆದರಿಕೆಯೊಡಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಮೂವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಠಾಣೆ ವ್ಯಾಪ್ತಿಯ ನಿವಾಸಿ ರಾಜೇಶ್, ಹೊಸ ಮನೆ ಕಟ್ಟಿಸಿದ್ದಾರೆ. ಮನೆಯ ಗೃಹ ಪ್ರವೇಶ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಬೆಳಿಗ್ಗೆ ಮನೆಗೆ ನುಗ್ಗಿದ್ದ ಲಿಂಗತ್ವ ಅಲ್ಪಸಂಖ್ಯಾತರೊಬ್ಬರು, ಹಣ ನೀಡುವಂತೆ ಪಟ್ಟು ಹಿಡಿದಿದ್ದರು. ದೂರುದಾರ ರಾಜೇಶ್, ₹ 200 ನೀಡಿದ್ದರು. ಅದನ್ನು ಪಡೆಯಲು ನಿರಾಕರಿಸಿದ್ದು, ₹ 5,000 ನೀಡಲು ಒತ್ತಾಯಿಸಿದ್ದರು' ಎಂದು ಮಾಲೀಕರು ಠಾಣೆಗೆ ದೂರು ನೀಡಿದ್ದಾರೆ.

# ಖ್ಯಾತಿಗಾಗಿ ಕೊಲೆ: ಜಾಮೀನು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸಿ ಕಿರುಚಾಡುತ್ತಾ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ ಕಾರಣಕ್ಕಾಗಿ ಕಪಾಳಕ್ಕೆ ಬಿಗಿದಿದ್ದ ಯುವಕನನ್ನು ಡ್ಯಾಗರ್‌ನಿಂದ ಚುಚ್ಚಿ ಬರ್ಬರವಾಗಿ ಕೊಲೆ ಮಾಡಿದ್ದ ಆರೋಪಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಕನವನಹಳ್ಳಿ ಮುಖ್ಯ ರಸ್ತೆಯ ಕೂಡ್ಲು ಕೊಳೆಗೇರಿ ನಿವಾಸಿ ಕೆ.ನವೀನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕ ಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಆರೋಪಿಯು ಕೊಲೆ ಮಾಡಿ ಖ್ಯಾತಿ ಗಳಿಸಬೇಕು ಎಂದು ಪದೇ ಪದೇ ಹೇಳುತ್ತಿದ್ದ. ಮೃತನ ತಾಯಿ ಹಾಗೂ ಇತರೆ ಪ್ರತ್ಯಕ್ಷದರ್ಶಿಗಳ ಹೇಳಿಕೆ ಪ್ರಕಾರ ಆರೋಪಿ ಮೃತನ ಕುತ್ತಿಗೆಗೆ ಡ್ಯಾಗರ್‌ನಿಂದ ಚುಚ್ಚಿದ್ದಾನೆ. ನಂತರ ಓಡಿ ಹೋಗುತ್ತಿದ್ದ ಆತನನ್ನು ಬೆನ್ನಟ್ಟಿ ಮತ್ತೆ ಕುತ್ತಿಗೆ ಹಾಗೂ ಹೊಟ್ಟೆಗೆ ಡ್ಯಾಗರ್‌ನಿಂದ ಚುಚ್ಚಿದ್ದಾನೆ. ಶವಪರೀಕ್ಷೆಯ ವರದಿ ಪ್ರಕಾರ ಮೃತನ ದೇಹದ ಮೇಲೆ ಏಳು ಗಂಭೀರ ಗಾಯಗಳಿವೆ. ಆಘಾತ ಮತ್ತು ತೀವ್ರ ರಕ್ತಸ್ರಾವದಿಂದ ಆತ ಮೃತಪಟ್ಟಿದ್ದಾನೆ. ಆದ್ದರಿಂದ ಆರೋಪಿಗೆ ಜಾಮೀನು ನೀಡಬಾರದು' ಎಂಬ ಸರ್ಕಾರದ ಪರ ವಕೀಲ ಕೆ.ಕೃಷ್ಣಕುಮಾರ್ ವಾದವನ್ನು ನ್ಯಾಯಪೀಠ ಮನ್ನಿಸಿದೆ.

**ಪ್ರಕರಣವೇನು?:** 'ಆರೋಪಿ ನವೀನ್ ಮದ್ಯ ವ್ಯಸನಿ. ಖ್ಯಾತಿ ಗಳಿಸಲು ಒಂದು ಕೊಲೆ ಮಾಡುತ್ತೇನೆ ಎಂದು ಆತ ಪದೇ ಪದೇ ಹೇಳುತ್ತಲೇ ಇದ್ದ. 2022ರ ಅಕ್ಟೋಬರ್ 3ರಂದು ರಾತ್ರಿ 10 ಗಂಟೆಗೆ ಸಾರ್ವಜನಿಕರಿಗೆ ಉಪದ್ರವ ನೀಡುತ್ತಿದ್ದ. ಇದಕ್ಕೆ ಅನಿಲ್ ಕುಮಾರ್ (24) ಬುದ್ಧಿ ಹೇಳಿದ್ದ. ಆಗ ಉಂಟಾದ ಜಗಳದಲ್ಲಿ ಅನಿಲ್, ನವೀನ್‌ಗೆ ಕಪಾಳಕ್ಕೆ ಹೊಡೆದಿದ್ದ. ಈ ಹಿನ್ನೆಲೆಯಲ್ಲಿ 2022ರ ಅಕ್ಟೋಬರ್ 9ರಂದು ಸಂಜೆ 6.10ರ ಸಮಯದಲ್ಲಿ ಮನೆಯಿಂದ ಹೊರಬಂದಿದ್ದ ಅನಿಲ್ ಮೇಲೆ ಎರಗಿ ಬಿದ್ದಿದ್ದ ನವೀನ್ ಡ್ಯಾಗರ್‌ನಿಂದ ಚುಚ್ಚಿ ಸಾಯಿಸಿದ್ದ' ಎಂದು ಪ್ರಕರಣ ದಾಖಲಿಸಲಾಗಿತ್ತು. ಆರೋಪಿಯನ್ನು 2022ರ ಅಕ್ಟೋಬರ್ 10ರಿಂದ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ.

## ಅಪರಾಧ ಸುದ್ದಿ

### ಖೋಟಾ ನೋಟು: ಬ್ಯಾಂಕ್ ವಿರುದ್ಧ ಎಫ್‌ಐಆರ್

ಬೆಂಗಳೂರು: ನೃಪತುಂಗ ರಸ್ತೆಯಲ್ಲಿರುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಪ್ರಾದೇಶಿಕ ಕಚೇರಿಯ ಕರೆನ್ಸಿ ವಿಭಾಗಕ್ಕೆ ಖೋಟಾ ನೋಟು ನೀಡಿದ್ದ ಆರೋಪದಡಿ ಯುಬಿಐ ಬ್ಯಾಂಕ್ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆರ್‌ಬಿಐ ಬ್ಯಾಂಕ್ ವ್ಯವಸ್ಥಾಪಕ ಎಂ. ಆನಂದ್ ಅವರು ದೂರು ನೀಡಿದ್ದಾರೆ. ಉಡುಪಿಯ ರಾಜಾಜಿ ಮಾರ್ಗ್‌ನಲ್ಲಿರುವ ಯುಬಿಐ ಬ್ಯಾಂಕ್ ಶಾಖೆ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಮುಖ ಬ್ಯಾಂಕ್‌ಗಳು, ಆರ್‌ಬಿಐ ಕರೆನ್ಸಿ ವಿಭಾಗದಲ್ಲಿ ನೋಟು ಜಮೆ ಹಾಗೂ ಡ್ರಾ ಮಾಡಿಕೊಳ್ಳುತ್ತವೆ. ಯುಬಿಐ ಬ್ಯಾಂಕ್ ಶಾಖೆ ಅಧಿಕಾರಿಗಳು, ಮೇ 17ರಂದು ಆರ್‌ಬಿಐ ಕರೆನ್ಸಿ ವಿಭಾಗಕ್ಕೆ ನೋಟು ಜಮೆ ಮಾಡಿದ್ದರು. ಅದರಲ್ಲಿ ₹100 ಮುಖಬೆಲೆಯ 5 ಖೋಟಾ ನೋಟುಗಳು ಪತ್ತೆಯಾಗಿದ್ದವು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಯುಬಿಐ ಬ್ಯಾಂಕ್ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದರು.

**ಕೆನರಾ ಬ್ಯಾಂಕ್ ಹಣದಲ್ಲೂ ಖೋಟಾ ನೋಟು:** 'ಹುಬ್ಬಳ್ಳಿಯ ಮದಿಮಾನ್ ಕಾಂಪ್ಲೆಕ್ಸ್‌ನಲ್ಲಿರುವ ಕೆನರಾ ಬ್ಯಾಂಕ್ ಶಾಖೆ ಅಧಿಕಾರಿಗಳು ಮೇ 31ರಂದು ಹಣ ಜಮೆ ಮಾಡಿದ್ದರು. ಅದರಲ್ಲೂ ₹ 100 ಮುಖಬೆಲೆಯ 5 ಖೋಟಾ ನೋಟು ಪತ್ತೆಯಾಗಿವೆ. ಈ ಬಗ್ಗೆ ಪ್ರತ್ಯೇಕ ಪ್ರಕರಣ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

### ರೈಲಿನಲ್ಲಿ ಗಾಂಜಾ ತಂದು ಮಾರಾಟ

ಬೆಂಗಳೂರು: ಆಂಧ್ರಪ್ರದೇಶದಿಂದ ರೈಲಿನಲ್ಲಿ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕಾಟನ್‌ಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ವೆಂಕಟಾಲ ಸೀತಾರಾಮ್ (55) ಹಾಗೂ ಅರಕು ವ್ಯಾಲಿ (34) ಬಂಧಿತರು. ಇವರಿಂದ ₹ 10 ಲಕ್ಷ ಮೌಲ್ಯದ 20 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಗಾಂಜಾ ಮಾರುತ್ತಿದ್ದ ಆರೋಪದಡಿ ಸೀತಾರಾಮ್‌ನನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಆತನನ್ನು ವಿಚಾರಣೆ ನಡೆಸಿದಾಗ, ಆಂಧ್ರಪ್ರದೇಶದಿಂದ ನಗರಕ್ಕೆ ಗಾಂಜಾ ತರುತ್ತಿದ್ದ ಸಂಗತಿ ಗೊತ್ತಾಗಿತ್ತು.'

'ಆರೋಪಿ ಅರಕು, ಜೂನ್ 24ರಂದು ಆಂಧ್ರಪ್ರದೇಶದಿಂದ ಬೆಂಗಳೂರಿಗೆ ರೈಲಿನಲ್ಲಿ ಗಾಂಜಾ ತರುತ್ತಿದ್ದ. ಈ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ, ರೈಲು ನಿಲ್ದಾಣ ಹಾಗೂ ಸುತ್ತಮುತ್ತ ನಿಗಾ ವಹಿಸಲಾಗಿತ್ತು. ಆರೋಪಿ ನಿಲ್ದಾಣದಿಂದ ಹೊರಬಂದು ಗ್ರಾಹಕರೊಬ್ಬರಿಗೆ ಗಾಂಜಾ ನೀಡಲು ಹೊರಟಿದ್ದ. ಅದೇ ಸಂದರ್ಭದಲ್ಲಿ ಆತನನ್ನು ವಶಕ್ಕೆ ಪಡೆದು ಗಾಂಜಾ ಜಪ್ತಿ ಮಾಡಲಾಯಿತು' ಎಂದರು.

'ಸೀತಾರಾಮ್ ಹಾಗೂ ಅರಕು, ಹಲವು ತಿಂಗಳಿನಿಂದ ಗಾಂಜಾ ಮಾರುತ್ತಿದ್ದರು. ಇದರಿಂದ ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು. ಇವರಿಬ್ಬರ ಜೊತೆ ನಗರದ ಕೆಲವರು ಒಡನಾಟವಿಟ್ಟುಕೊಂಡಿದ್ದರು. ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.



ಕರುನಾಡ ವಿಜಯಸೇನೆ ಈಚೆಗೆ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚಾಲನೆ ನೀಡಿದರು

## 'ಕೆಂಪೇಗೌಡರ ಆದರ್ಶ ಪ್ರತಿಯೊಬ್ಬರಿಗೂ ಮಾದರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಆದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕರುನಾಡ ವಿಜಯಸೇನೆ ಈಚೆಗೆ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ನಾಡಪ್ರಭು ಕೆಂಪೇಗೌಡರು ವಿಶ್ವವೇ ಗುರುತಿಸುವಂತೆ ಬೆಂಗಳೂರು ನಗರವನ್ನು ಕಟ್ಟಿ ಬೆಳೆಸಿದ್ದಾರೆ. ಇಂದು ಇಲ್ಲಿ ಕೋಟ್ಯಾಂತರ ಜನ ಅನ್ನ, ಉದ್ಯೋಗ ಮತ್ತು ಆಶ್ರಯ ಪಡೆದುಕೊಂಡಿದ್ದಾರೆ. ಜಾತಿ, ಭೇದವಿಲ್ಲದೆ ಎಲ್ಲರೂ ನೆಮ್ಮದಿಯಿಂದ ಜೀವನ ನಡೆಸಲು ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ ಎಂದು ಸ್ಮರಿಸಿದರು.

ವಿಜಯಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಎನ್.ದೀಪಕ್, 'ಕೆಂಪೇಗೌಡರ ಕಾಲದ ಕೆರೆಗಳನ್ನು ಸರ್ಕಾರ ಮತ್ತು ಸಾರ್ವಜನಿಕರು ಉಳಿಸಬೇಕಾಗಿದೆ' ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅನ್ನ ಸಂತರ್ಪಣೆಗೆ ಚಾಲನೆ ನೀಡಿದರು. ನಂಜಾವಧೂತ ಸ್ವಾಮೀಜಿ, ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

## ಡಿಆರ್‌ಡಿಒ ವಿಜ್ಞಾನಿ ವಿರುದ್ಧ ದೋಷಾರೋಪ

ಪುಣೆ (ಪಿಟಿಐ): ಗೋಪ್ಯ ಮಾಹಿತಿಯನ್ನು ಪಾಕಿಸ್ತಾನದ ಗುಪ್ತ ದಳಕ್ಕೆ ನೀಡಿದ ಪ್ರಕರಣದ ಆರೋಪಿ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆಯ (ಡಿಆರ್‌ಡಿಒ) ವಿಜ್ಞಾನಿ ಪ್ರದೀಪ್ ಕುರುಲ್ಕರ್ ವಿರುದ್ಧ ದೋಷಾರೋಪ ಪಟ್ಟಿ ದಾಖಲಿಸಲಾಗಿದೆ.

ಮಹಾರಾಷ್ಟ್ರ ಪೊಲೀಸ್‌ನ ಭಯೋತ್ಪಾದನಾ ವಿರೋಧಿ ಪಡೆ (ಎಟಿಎಸ್) ಅಧಿಕೃತ ಗೋಪ್ಯತಾ ಕಾಯ್ದೆಯ ಸೆಕ್ಷನ್ 3 (ಕಣ್ಗಾವಲಿಗೆ ದಂಡ), ಸೆಕ್ಷನ್ 4 (ವಿದೇಶಿ ಏಜೆಂಟ್ ಜೊತೆಗೆ ಸಂವಹನ) ಮತ್ತು ಸೆಕ್ಷನ್ 5 (ತಪ್ಪು ಸಂವಹನ) ಅನ್ವಯ ಸುಮಾರು 1000 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದೆ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ವಿಜಯ್ ಫರ್ಗಡೆ ಹೇಳಿದರು.

ಕುರುಲ್ಕರ್ ಅವರು ಪಾಕಿಸ್ತಾನಿ ಏಜೆಂಟ್‌ಗೆ ಸೂಕ್ಷ್ಮ ಮಾಹಿತಿಯನ್ನು 'ಜರಾ ದಾಸ್‌ಗುಪ್ತಾ' ಹೆಸರಿನಲ್ಲಿ ರವಾನಿಸಿದ್ದಾರೆ ಎಂದು ಹೆಚ್ಚುವರಿ ಸೆಷನ್ಸ್ ಕೋರ್ಟ್‌ನಲ್ಲಿ ಸಲ್ಲಿಸಿದ ದೋಷಾರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

ಆರೋಪಿಯ ಧ್ವನಿಪರೀಕ್ಷೆ, ಮಾನಸಿಕ ಸ್ಥಿತಿ ವಿಶ್ಲೇಷಣೆಗೆ ಅನುಮತಿ ಕೋರಿತ್ತು. ಆದರೆ, ಆರೋಪಿ ಪರ ವಕೀಲರು ಅದಕ್ಕೆ ವಿರೋಧಿಸಿದ್ದರು. ಪುಣೆಯ ಡಿಆರ್‌ಡಿಒ ಪ್ರಯೋಗಾಲಯದ ನಿರ್ದೇಶಕರಾಗಿದ್ದ ಕುರುಲ್ಕರ್ ಅವರನ್ನು ಮೇ 3ರಂದು ಬಂಧಿಸಿತ್ತು.




**ಅಲಂಕಾರ** ಬೆಂಗಳೂರಿನ ಆ್ಯಬ್ವಿ ಕಂಪನಿ ಉದ್ಯೋಗಿಗಳು, ಕಂಪನಿಯ 8ನೇ ವಾರ್ಷಿಕ ಸಪ್ತಾಹದ ಅಂಗವಾಗಿ ಶುಕ್ರವಾರ ಸಂರಕ್ಷಣ್ ರೇನ್‌ಬೋ ಹೋಮ್‌ನ ಶಾಲಾ ಆವರಣ ನವೀಕರಿಸಿ ಅಲಂಕರಿಸಿದರು. ಕಂಪನಿಯ ಪ್ರಧಾನ ವ್ಯವಸ್ಥಾಪಕ ಸುರೇಶ ಪಟ್ಟಾಥಿಲ್ ಇದ್ದರು.

## ಆಗ್ನೇಯ ರೈಲ್ವೆ ಜಿ.ಎಂ ಎತ್ತಂಗಡಿ

ನವದೆಹಲಿ (ಪಿಟಿಐ): ಆಗ್ನೇಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕರಾಗಿದ್ದ ಅರ್ಚನಾ ಜೋಶಿ ಅವರನ್ನು ಶುಕ್ರವಾರ ವರ್ಗಾವಣೆ ಮಾಡಲಾಗಿದ್ದು, ಕರ್ನಾಟಕದ ಯಲಹಂಕದಲ್ಲಿರುವ ರೈಲು ಗಾಲಿ ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕರಾಗಿ ನೇಮಿಸಲಾಗಿದೆ.

ಬಾಲೇಶ್ವರದಲ್ಲಿ ಇತ್ತೀಚೆಗೆ ನಡೆದಿದ್ದ ಭೀಕರ ರೈಲು ಅಪಘಾತದ ಹಿನ್ನೆಲೆಯಲ್ಲಿ ನಡೆಯುತ್ತಿರುವ ಅಧಿಕಾರಿಗಳ ವರ್ಗಾವರ್ಗಿಯ ಭಾಗವಾಗಿ ಈ ವರ್ಗಾವಣೆ ನಡೆದಿದೆ. ಇದಕ್ಕೂ ಮೊದಲು ಇಲಾಖೆಯು ಹಿರಿಯ ವಲಯ ಅಧಿಕಾರಿಗಳನ್ನು ವರ್ಗಾಯಿಸಿತ್ತು.



## ನಗರದಲ್ಲಿ ಇಂದು

**ರಾಷ್ಟ್ರ ಮಟ್ಟದ ಡ್ರೋನ್ ಟೆಕ್ ಎಕ್ಸ್‌ಪೊ ಆ್ಯಂಡ್ ಸಮ್ಮಿಟ್:** ವಿಷಯ: 'ಡ್ರೋನ್ ತಂತ್ರಜ್ಞಾನಗಳ ಮೂಲಕ ಭಾರತವನ್ನು ಪರಿವರ್ತಿಸುವ ಸಂಶೋಧನೆ ಮತ್ತು ನಾವೀನ್ಯದಲ್ಲಿ ಕಾರ್ಯತಂತ್ರದ ಯೋಜನೆ'; ಅತಿಥಿಗಳು: ಎಸ್. ಮರಿಸ್ವಾಮಿ, ಬಿಜಯ್ ಕುಮಾರ್ ಸಾಹು, ಪಿ.ವಿ. ಬೈರಪ್ಪ, ಎಲ್.ಎಂ. ಪಟ್ನಾಯಕ್, ಪುಟ್ಟರಾಜು, ಸ್ಥಳ: ಡಾ. ಅಂಬೇಡ್ಕರ್ ತಾಂತ್ರಿಕ ವಿದ್ಯಾಲಯ, ಜ್ಞಾನಭಾರತಿ ಸಮೀಪ, ಬೆಳಿಗ್ಗೆ 11


**'ಪತ್ರಕರ್ತರಾಗಿ ಮಹಾತ್ಮ ಗಾಂಧೀಜಿ' ಪತ್ರಿಕಾ ದಿನಾಚರಣೆಯ ಅಂಗವಾಗಿ ಉಪನ್ಯಾಸ:** ಉದ್ಘಾಟನೆ: ಶಂಕರ್ ಬಿ.ಎಸ್., ಉಪನ್ಯಾಸಕ: ಮಹ್ಮದ್ ಬಾಷ ಗೂಳ್ಯಂ, ಅಧ್ಯಕ್ಷತೆ: ಎನ್. ಶ್ರೀಮತಿ ಜಯರಾಮ್, ಪ್ರಾಸ್ತಾವಿಕ: ಯ.ಚಿ. ದೊಡ್ಡಯ್ಯ, ಆಯೋಜನೆ: ಕರ್ನಾಟಕ ಸರ್ವೋದಯ ಮಂಡಲ, ಬೆಂಗಳೂರು ನಗರ ಘಟಕ ಮತ್ತು ಬಿಇಎಸ್ ವಿದ್ಯಾಸಂಸ್ಥೆ, ಸ್ಥಳ: ಬಿಇಎಸ್ ವಿದ್ಯಾಸಂಸ್ಥೆ ಸಭಾಂಗಣ, 8ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 11

**ಸಂಸ್ಥಾಪಕರ ದಿನಾಚರಣೆ:** ಅತಿಥಿಗಳು: ಎ.ಜೆ. ಸದಾಶಿವ, ಕೆ.ಎನ್. ಸುಬ್ಬಾರೆಡ್ಡಿ, ನಂಜಪ್ಪ ಕಾಳೇಗೌಡ, ಎಚ್. ಶರತ್‌ಚಂದ್ರ, ಆಯೋಜನೆ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಗಂಗಮ್ಮ ಮತ್ತು ಹೊಂಬೇಗೌಡ ಸಮೂಹ ಸಂಸ್ಥೆಗಳು, ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಹೊಂಬೇಗೌಡ ನಗರ, ಬೆಳಿಗ್ಗೆ 11

**'ದಿ ಗರ್ಲ್ ಫ್ರಮ್ ಕಥುವಾ' ಕೃತಿ ಬಿಡುಗಡೆ:** ಅತಿಥಿಗಳು: ಮಧು ಪೂರ್ಣಿಮಾ ಕಿಶ್ವರ್, ಕಿರಣ್ ಬೆಟ್ಟದಪುರ್, ಸುಚಿತ್ರಾ ಕೌಲ್ ಮಿಶ್ರ, ಸತ್ಯಂ ಸುವಾಸ್, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

**'ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ವಾರ'** ಕಾರ್ಯಕ್ರಮ ಸಮಾರೋಪ: ಅತಿಥಿ: ಡಿ.ಕೆ. ಶಿವಕುಮಾರ್, ಆಯೋಜನೆ: ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟೊರೇಟ್ ಎಂಜಿನಿಯರ್ಸ್ ಅಸೋಸಿಯೇಶನ್ ಆಫ್ ಕರ್ನಾಟಕ, ಸ್ಥಳ: ಭಾರತೀಯ ಎಂಜಿನಿಯರ್‌ಗಳ ಸಂಸ್ಥೆ, ವಸಂತನಗರ, ಮಧ್ಯಾಹ್ನ 3.30

**'ಸ್ವರಕಂಠೀರವ' ರಾಜ್ ಸವಿನೆನಪು:** ಅತಿಥಿಗಳು: ರವೀಂದ್ರ ಭಟ್ಟ, ಮಾನಸ ಚಿದಾನಂದ ಪೈ, ಪ್ರದೀಪ್ ಕುಮಾರ್ ಎಸ್. ಕಲ್ಕೂರ, ವಿ. ಮನೋಹರ್, ಮಣಿಕಾಂತ್ ಕದ್ರಿ, ಎಚ್. ಜನಾರ್ದನ ಹಂದೆ, ಗುರುಕಿರಣ್, ರೇಣುಕುಮಾರ್, ವಿಶ್ವನಾಥ ಹಿರೇಮಠ, ಸದಾನಂದ ಆಚಾರ್ಯ, ತುಕಾರಾಮ ಆಚಾರ್ಯ, ಹರಿಶ್ಚಂದ್ರ ಎನ್. ಆಚಾರ್ಯ, ಜಗದೀಶ್ ಶಿವಪುರ, ಸನ್ಮಾನ: ಶರಣ್ಯ, ಬಿ.ಎಸ್. ವೇಣುಗೋಪಾಲ, ನೃತ್ಯ: ದೀಪಿಕಾ ದಿವಾಕರ ಆಚಾರ್ಯ, ಆಯೋಜನೆ: ಮಂಗಳೂರಿನ ಮಧುರ ತರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4



ಅನನ್ಯ ಎಂ.ಪಿ.

**ಭರತನಾಟ್ಯ ರಂಗಪ್ರವೇಶ:** ಅನನ್ಯಾ ಎಂ.ಪಿ., ಅತಿಥಿಗಳು: ಆನೂರು ಅನಂತಕೃಷ್ಣ ಶರ್ಮ, ಸುಪರ್ಣಾ ವೆಂಕಟೇಶ್, ಶಮಾ ಕೃಷ್ಣ, ಆಯೋಜನೆ: ಕಾವ್ಯಶ್ರೀ ಆರ್ಟ್ ಫೌಂಡೇಶನ್, ಸ್ಥಳ: ಶಿವರಾತ್ರೀಶ್ವರ ಸೆಂಟರ್, ಜೆಎಸ್‌ಎಸ್ ಆಡಿಟೋರಿಯಂ, ಜಯನಗರ 8ನೇ ಬ್ಲಾಕ್, ಸಂಜೆ 5

**ಕಾಸಿಯಾ ಪತ್ತಿನ ಸಹಕಾರ ಸಂಘದ ರಜತ ಮಹೋತ್ಸವ:** ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಕೆ.ಎನ್. ರಾಜಣ್ಣ, ಅಧ್ಯಕ್ಷತೆ: ವಿಶ್ವನಾಥಯ್ಯ, ಅತಿಥಿಗಳು: ಎಂ.ಕೃಷ್ಣಪ್ಪ, ಪ್ರಿಯಾಕೃಷ್ಣ, ನರಸಿಂಹಮೂರ್ತಿ ಕೆ.ಎನ್., ಶಶಿಧರ ಶೆಟ್ಟಿ, ಸನ್ಮಾನ: ಜೆ.ಆರ್. ಬಂಗೇರ, ಸಿ.ಆರ್.ಜನಾರ್ದನ, ಸ್ಥಳ: ಕಾಸಿಯಾ ಸಭಾಂಗಣ, ಕಾಸಿಯಾ ಭವನ, ವಿಜಯನಗರ, ಸಂಜೆ 4

**'ಸುಹೃತ್ ಸಂವಾದ':** ಯಕ್ಷಗಾನ ಅರ್ಥಧಾರಿ ರಾಧಾಕೃಷ್ಣ ಕಲ್ಚಾರ್‌ರೊಂದಿಗೆ ಪಾತ್ರ ಸಂವಾದ ಕಾರ್ಯಕ್ರಮ, ಆಯೋಜನೆ: ಯಕ್ಷ ವಾಹಿನಿ ಬೆಂಗಳೂರು, ಸ್ಥಳ: ಚಿತ್ಪಾವನ ಸಭಾಭವನ, ರಾಜಾಜಿನಗರ, ಸಂಜೆ 5

**ರಾಷ್ಟ್ರೀಯ ವೈದ್ಯರ ದಿನಾಚರಣೆ:** ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಬಸವರಾಜ್ ಎಸ್. ಹೊರಟ್ಟಿ, ಯು.ಟಿ. ಖಾದರ್, ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 5

**'ನೃತ್ಯನಂಕುರ' ಸರಣಿ:** ವಿಶ್ರಿತರಿಂದ ಭರತನಾಟ್ಯ ಪ್ರದರ್ಶನ, ಅತಿಥಿಗಳು: ಚೇತನ್ ಗಂಗಟ್ಕರ್, ಚಂದ್ರಪ್ರಭಾ ಚೇತನ್, ಕೀರ್ತಿ ಸಚಿನ್, ಆಯೋಜನೆ: ಅರ್ಕ ಕಲಾ ಕುಟೀರ ಸಂಸ್ಥೆ, ಸ್ಥಳ: ಅರ್ಕ ಥಿಯೇಟರ್ ಆ್ಯಂಡ್ ಆಡಿಟೋರಿಯಂ, ಕೊತ್ತನೂರು ದಿಣ್ಣೆ ಮುಖ್ಯರಸ್ತೆ, ಜೆ.ಪಿ. ನಗರ, ಸಂಜೆ 5.30

**ನಿಗಂಸುಧಾ ಪರ್ಫಾರ್ಮಿಂಗ್ ಆರ್ಟ್ಸ್ ವಾರ್ಷಿಕೋತ್ಸವ:** ಅತಿಥಿಗಳು: ನಂದಿನಿ ಮೆಹ್ತಾ, ಮಧುಲಿತ ಮೋಹಪಾತ್ರ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ ಸಂಜೆ 5.30

**12 ವರ್ಷದ ಬಾಲಕಿ ಪ್ರಿಶಾ ಲೋಕೇಶ್‌ರಿಂದ ಡ್ರಂ ವಾದನ:** ಸ್ಥಳ: ಆರ್.ವಿ. ಡೆಂಟಲ್ ಕಾಲೇಜು ಆಡಿಟೋರಿಯಂ, ಐಟಿಐ ಬಡಾವಣೆ, ಜೆ.ಪಿ. ನಗರ, ಸಂಜೆ 6.30

'ಪಾಕ ಕ್ರಾಂತಿ' ನಾಟಕ ಪ್ರದರ್ಶನ: ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ನಾಲ್ಕು ನಿಗಮಗಳ ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ನೇಮಕಾತಿಗೆ ಪ್ರಸ್ತಾವ: ಸಚಿವ ರಾಮಲಿಂಗಾರೆಡ್ಡಿ

# ಸಾರಿಗೆ: 13,415 ಹುದ್ದೆ ಭರ್ತಿಗೆ ಕ್ರಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಲ್ಕು ಸಾರಿಗೆ ನಿಗಮಗಳಲ್ಲಿ ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ಸೇರಿ ಒಟ್ಟು 13,415 ಹುದ್ದೆಗಳನ್ನು ನೇಮಕಾತಿ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕೆಎಸ್‌ಆರ್‌ಟಿಸಿಯಲ್ಲಿ 3,745 ಚಾಲನಾ ಸಿಬ್ಬಂದಿ, 726 ತಾಂತ್ರಿಕ ಸಿಬ್ಬಂದಿಯ ನೇಮಕಾತಿಗೆ ಈಗಾಗಲೇ ಕರೆಯಲಾಗಿರುವ ಜಾಹೀರಾತು ಪ್ರಕ್ರಿಯೆಯನ್ನು ಮುಂದುವರಿಸಲಾಗುವುದು. ಕೆಎಸ್‌ಆರ್‌ಟಿಸಿಗೆ ಹೊಸದಾಗಿ 1,433 ಚಾಲನಾ ಸಿಬ್ಬಂದಿ, 2,738 ತಾಂತ್ರಿಕ ಸಿಬ್ಬಂದಿ, ಬಿಎಂಟಿಸಿಗೆ 2,000 ನಿರ್ವಾಹಕರು, 1,000 ಚಾಲಕ ಕಂ ನಿರ್ವಾಹಕರು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 1,773 ನಿರ್ವಾಹಕರ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ನಾಲ್ಕು ನಿಗಮಗಳ ಸಭೆಗಳಲ್ಲಿ ಈ ಬಗ್ಗೆ ಚರ್ಚೆ ನಡೆಸಲಾಗಿದ್ದು, ನೇಮಕಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದರು.

ಕೆಎಸ್‌ಆರ್‌ಟಿಸಿ ಖಾಲಿ ನಿವೇಶನದಲ್ಲಿ ವಾಣಿಜ್ಯ ಆದಾಯ ಗಳಿಕೆಗಾಗಿ 10 ಔಟ್‌ಲೆಟ್ ಮತ್ತು 36 ಪೆಟ್ರೋಲ್ ಬಂಕ್ ತೆರೆಯಲು ಒಪ್ಪಿಗೆ ನೀಡಲಾಗಿದೆ ಎಂದರು.

ಕಾರ್ಗೊ ಲಾಜಿಸ್ಟಿಕ್ ಯೋಜನೆಗೆ 6 ಟನ್ ಸಾಮರ್ಥ್ಯದ 20 ಟ್ರಕ್ ಖರೀದಿಸಲಾಗುವುದು. ಹವಾನಿಯಂತ್ರಣ ರಹಿತ 44 , ಹವಾ ನಿಯಂತ್ರಿತ 4 ಸ್ಲೀಪರ್ ಬಸ್ ಖರೀದಿಗೆ ಕ್ರಮ ಕೈಗೊಳ್ಳಲಾಗುವುದು. ಎನ್‌ಡಬ್ಲ್ಯುಕೆಆರ್‌ಟಿಸಿಯಲ್ಲಿ ಹವಾನಿಯಂತ್ರಣ ರಹಿತ 20, ಹವಾ ನಿಯಂತ್ರಿತ 4 ಸ್ಲೀಪರ್ ಬಸ್ ಖರೀದಿಸಲಾಗುವುದು. ಕೆಕೆಆರ್‌ಟಿಸಿಯಲ್ಲಿ ಹವಾನಿಯಂತ್ರಣ ರಹಿತ 6 ಬಸ್ ಸೇರ್ಪಡೆಗೊಳಿಸಲಾಗುವುದು ಎಂದರು.

## ಡೀಸೆಲ್ ಬಸ್: ವಿದ್ಯುತ್ ಚಾಲಿತವಾಗಿ ಪರಿವರ್ತಿಸಲು ಒಲವು

**ಬೆಂಗಳೂರು:** ಬಿಎಂಟಿಸಿಯ ಡೀಸೆಲ್ ಬಸ್‌ಗಳನ್ನು ವಿದ್ಯುತ್ ಚಾಲಿತ ವಾಹನಗಳಾಗಿ(ಇ.ವಿ) ಪರಿವರ್ತಿಸಲು ತೈವಾನ್‌ನ ಕಂಪನಿಗಳು ಆಸಕ್ತಿ ತೋರಿವೆ. ಸಾರಿಗೆ ಇಲಾಖೆ ಜತೆ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

‘ತೈವಾನ್ ಇಂಡಿಯಾ ಬ್ಯುಸಿನೆಸ್ ಅಸೋಸಿಯೇಷನ್ (ಟಿಐಬಿಎ)’ ಪ್ರಮುಖರ ಜತೆ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವ ಕುರಿತು ನಡೆದ ಚರ್ಚೆಯ ನಂತರ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಸಹಯೋಗದಲ್ಲಿ ಪ್ರಸ್ತುತ ಇ.ವಿ ಬಸ್‌ಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಡೀಸೆಲ್ ಎಂಜಿನ್‌ಗಳು ಇ.ವಿ.ಗಳಾಗಿ ಬದಲಾದರೆ ಪರಿಸರಸ್ನೇಹಿ ಮತ್ತು ಸುಸ್ಥಿರ ಅಭಿವೃದ್ಧಿ ಸಾಧ್ಯವಾಗಲಿದೆ. ತುಮಕೂರು ಮಶೀನ್ ಟೂಲ್ಸ್ ಪಾರ್ಕ್ (ಟಿಎಂಟಿಪಿ) ಪುನಶ್ಚೇತನಗೊಳಿಸಲಾಗುವುದು. ಮೈಸೂರಿನ ಕೋಚನಹಳ್ಳಿ ಮತ್ತು ಧಾರವಾಡದ ಕೋಟೂರು-ಬೇಲೂರು ಕೈಗಾರಿಕಾ ಪ್ರದೇಶಗಳಲ್ಲಿ ಇಎಂಸಿ ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ಕೆ ತೈವಾನ್ ಕಂಪನಿಗಳು ಸಹಭಾಗಿತ್ವ ನೀಡುವ ವಿಶ್ವಾಸವಿದೆ ಎಂದರು.

ರಾಜ್ಯದಲ್ಲಿ ಹಸಿರು ಜಲಜನಕ, ಎಲೆಕ್ಟ್ರಾನಿಕ್ಸ್ ವ್ಯವಸ್ಥೆಯ ವಿನ್ಯಾಸ ಮತ್ತು ತಯಾರಿಕೆ (ಇಎಸ್‌ಡಿಎಂ), ಏರೋಸ್ಪೇಸ್ ವಲಯಗಳು ದೇಶದಲ್ಲೇ ಅಗ್ರ ಸ್ಥಾನದಲ್ಲಿವೆ. ಎಲ್ಲ ವಿಷಯಗಳನ್ನೂ ತೈವಾನ್‌ನ ಹೂಡಿಕೆದಾರರಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ಹೇಳಿದರು.

## ‘ಸಾರಿಗೆ ಸಂಸ್ಥೆ ಕಟ್ಟಡದಲ್ಲಿ ಬಾರ್‌ಗೆ ಅವಕಾಶ ಇಲ್ಲ’

**ಬೆಂಗಳೂರು:** ‘ಸಾರಿಗೆ ಸಂಸ್ಥೆಯ ಕಟ್ಟಡಗಳಲ್ಲಿ ಬಾರ್, ಪಬ್, ವೈನ್‌ಶಾಪ್‌ಗಳಿಗೆ ಅವಕಾಶ ನೀಡುವುದಿಲ್ಲ. ಎರಡು ವರ್ಷಗಳ ಹಿಂದೆ ಬಿಎಂಟಿಸಿ ಕಟ್ಟಡದಲ್ಲಿ ಪಬ್‌ಗೆ ಅವಕಾಶ ನೀಡಿರುವುದು ತಪ್ಪು. ಅದನ್ನು ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು.

ಬಿಎಂಟಿಸಿಯ 50 ಮಹೀಂದ್ರ ಬೊಲೆರೊ ಜೀಪುಗಳು ಮತ್ತು 9 ತರಬೇತಿ ವಾಹನಗಳಿಗೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಹಿಂದೆಯೂ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಅವಕಾಶ ನೀಡಿರಲಿಲ್ಲ. ಬಿಜೆಪಿ ನೇತೃತ್ವದ ಸರ್ಕಾರ ಇರುವಾಗ 2021ರ ಮೇ ತಿಂಗಳಲ್ಲಿ ಇದಕ್ಕೆ ಅವಕಾಶ ನೀಡಲಾಗಿದೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದ್ದೇನೆ’ ಎಂದು ಮಾಹಿತಿ ನೀಡಿದರು.

‘ಶಕ್ತಿ ಯೋಜನೆ ದೇಶದಲ್ಲಿಯೇ ಮಾದರಿ ಕಾರ್ಯಕ್ರಮ. ಕೇಂದ್ರದಲ್ಲಿ ಇರುವವರು ಮುಂದೆ ಇಂಥ ಕಾರ್ಯಕ್ರಮ ಅನುಷ್ಠಾನ ಮಾಡುವುದು ಅನಿವಾರ್ಯವಾಗಲಿದೆ’ ಎಂದು ಹೇಳಿದರು.



ಬಿಎಂಟಿಸಿ ಡಿಪೊ ಮ್ಯಾನೇಜರ್‌ಗಳಿಗೆ ಹೊಸ ಬೊಲೆರೊ ಜೀಪ್‌ಗಳ ಕೀಗಳನ್ನು ಸಚಿವ ರಾಮಲಿಂಗಾ ರೆಡ್ಡಿ ಸಾಂಕೇತಿಕವಾಗಿ ಹಸ್ತಾಂತರಿಸಿದರು. ಬಿಎಂಟಿಸಿ ಎಂ.ಡಿ. ಜಿ.ಸತ್ಯವತಿ, ನಿರ್ದೇಶಕ (ಐಟಿ) ಸೂರ್ಯ ಸೇನ್ ಇತರರಿದ್ದರು

**ಸಮೀಕ್ಷೆಗೆ ವಾಹನ:** ಬೊಲೆರೊ ಜೀಪುಗಳು ಮಾರ್ಗ ಸಮೀಕ್ಷೆ ಮಾಡಲು, ಸಂಚಾರ ಬೇಡಿಕೆ ಬಗ್ಗೆ ಅಧ್ಯಯನ ಮಾಡಲು, ಘಟಕದ ವಾಹನಗಳು ಅಪಘಾತವಾದ ಸಂದರ್ಭದಲ್ಲಿ ಅಪಘಾತ ಸ್ಥಳಕ್ಕೆ ತಕ್ಷಣ ಭೇಟಿ ನೀಡಲು, ಪೊಲೀಸ್ ಠಾಣೆ, ಆಸ್ಪತ್ರೆಗೆ ತೆರಳಲು, ನ್ಯಾಯಾಲಯ ಪ್ರಕರಣಗಳಿಗೆ ಹಾಜರಾಗಲು ಈ ವಾಹನಗಳು ನೆರವಾಗಲಿವೆ.

2022–23ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ 1475 ಅಭ್ಯರ್ಥಿಗಳಿಗೆ ಲಘು ಮತ್ತು ಭಾರಿ ವಾಹನಗಳ ಚಾಲನಾ ತರಬೇತಿ ನಿಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅದರಲ್ಲಿ 1015 ಫಲಾನುಭವಿಗಳ ತರಬೇತಿ ಪೂರ್ಣಗೊಂಡಿದೆ ಎಂದು ಮಾಹಿತಿ ನೀಡಿದರು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ, ನಿರ್ದೇಶಕ (ಐಟಿ) ಸೂರ್ಯಸೇನ್, ಅಧಿಕಾರಿಗಳು ಇದ್ದರು.

## ಶೇ 34ರಷ್ಟು ಸವಾರರಿಂದ ಹೆಲ್ಮೆಟ್ ಸಮರ್ಪಕ ಬಳಕೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಬೆಂಗಳೂರಿನಲ್ಲಿ ದ್ವಿಚಕ್ರ ವಾಹನಗಳ ಶೇ 88ರಷ್ಟು ಸವಾರರು ಹೆಲ್ಮೆಟ್ ಧರಿಸುತ್ತಿದ್ದಾರೆ. ಆದರೆ, ಸರಿಯಾಗಿ ಹೆಲ್ಮೆಟ್ ಧರಿಸುವವರ ಪ್ರಮಾಣ ಶೇ 34 ರಷ್ಟು ಮಾತ್ರ ಎಂದು ‘ರಸ್ತೆ ಸುರಕ್ಷತಾ ಅಪಾಯದ ಅಂಶಗಳು-2022’ ವರದಿ ಬಹಿರಂಗಪಡಿಸಿದೆ.

ಜಾನ್ಸ್ ಹಾಪ್ಕಿನ್ಸ್ ಇಂಟರ್ ನ್ಯಾಷನಲ್ ಇಂಜುರಿ ರಿಸರ್ಚ್ ಘಟಕ (ಜೆಎಚ್‌ಐಐ ಆರ್‌ಯು) ಮತ್ತು ನಿಮ್ಹಾನ್ಸ್ ಸಂಸ್ಥೆ ಈ ವರದಿಯನ್ನು ಸಿದ್ಧಪಡಿಸಿದೆ. ಬ್ಲೂಮ್ ಬರ್ಗ್ ಫಿಲಾಂತ್ರೋಫಿಸ್ ಇನಿಷಿಯೇಟಿವ್ ಫಾರ್ ಗ್ಲೋಬಲ್ ರೋಡ್ ಸೇಫ್ಟಿ (ಬಿಐಜಿಆರ್‌ಎಸ್) ನಡೆಸುತ್ತಿರುವ ಚಟುವಟಿಕೆಯ ಭಾಗವಾಗಿ ಬೆಂಗಳೂರು ಮೆಟ್ರೊಪಾಲಿಟನ್ ವಲಯದಲ್ಲಿ 2021ರ ನವೆಂಬರ್ ನಿಂದ 2022ರ ಅಕ್ಟೋಬರ್‌ವರೆಗೆ ಪರಿಶೀಲಿಸಿ ಉಲ್ಲೇಖಿಸಲಾಗಿದೆ.

18 ವರ್ಷದೊಳಗಿನ ಸವಾರರಲ್ಲಿ ಶೇ 8ರಷ್ಟು ಮಂದಿಯಷ್ಟೇ ಸರಿಯಾಗಿ ಹೆಲ್ಮೆಟ್ ಧರಿಸುತ್ತಾರೆ. ಹಿಂಬದಿ ಸವಾರರಲ್ಲಿ ಶೇ 16ರಷ್ಟು ಜನರು ಸರಿಯಾಗಿ ಧರಿಸಿದ್ದರು. ಉಳಿದವರು ಅರ್ಧ ಹೆಲ್ಮೆಟ್, ಕಳಪೆ ಗುಣಮಟ್ಟದ ಹೆಲ್ಮೆಟ್ ಹೀಗೆ ಸುರಕ್ಷಿತವಲ್ಲದವುಗಳನ್ನೇ ಬಳಸಿದ್ದಾರೆ ಎಂದು ವರದಿ ತಿಳಿಸಿದೆ.

ಪೊಲೀಸ್ ಇಲಾಖೆಯ ಪ್ರಕಾರ 2020-21ನೇ ಸಾಲಿನಲ್ಲಿ ರಸ್ತೆ ಅಪಘಾತಗಳಿಂದ 10,038 ಜನರು ಮೃತಪಟ್ಟಿದ್ದರು. ಅದರಲ್ಲಿ 9,101 ಜನರ ಮರಣಕ್ಕೆ ಅತಿ ವೇಗವೇ ಕಾರಣವಾಗಿತ್ತು.

ಕಾರುಗಳಲ್ಲಿ ಶೇ 66ರಷ್ಟು ಚಾಲಕರು ಮತ್ತು ಶೇ 12ರಷ್ಟು ಸಹಪ್ರಯಾಣಿಕರು ಸೀಟ್ ಬೆಲ್ಟ್ ಧರಿಸಿದ್ದರು. ಮಕ್ಕಳ ನಿಯಂತ್ರಕವನ್ನು ಶೇ 2ರಷ್ಟು ಮಾತ್ರ ಬಳಕೆ ಮಾಡಿರುವುದು ಕಂಡು ಬಂದಿದೆ ಎಂದು ವರದಿಯಲ್ಲಿ ವಿವರ ನೀಡಲಾಗಿದೆ.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಈ ವರದಿ ಬಿಡುಗಡೆ ಮಾಡಿದರು.

ಜೆಎಚ್‌ಐಐಆರ್‌ಯುನ ನಿಷಿತ್ ಪಟೇಲ್, ನಿಮ್ಹಾನ್ಸ್ ಹೆಚ್ಚುವರಿ ಪ್ರಾಚಾರ್ಯ ಡಾ. ಗೌತಮ್ ಸುಕುಮಾರ್ ವರದಿಯ ವಿವರ ನೀಡಿದರು. ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ. ಪ್ರಸಾದ್, ಸಂಚಾರ ಮತ್ತು ಸುರಕ್ಷತೆ ಆಯುಕ್ತ ಅಲೋಕ್ ಕುಮಾರ್, ಐಜಿಪಿ ಬಿ.ಆರ್. ರವಿಕಾಂತೇ ಗೌಡ ಇದ್ದರು.

ಉಚಿತ ಕೊಡುಗೆ: ಬಿಬೆಕ್ ದೆಬ್ರೋಯ್ ಕಳವಳ


# ‘ಅರ್ಥ ವ್ಯವಸ್ಥೆಗೆ ಹೊರೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಉಚಿತ ಕೊಡುಗೆಗಳು ವಾಸ್ತವದಲ್ಲಿ ಉಚಿತವಾಗಿರುವುದಿಲ್ಲ. ಆ ಕೊಡುಗೆಯ ಹೊರೆಯನ್ನು ಬೇರೆಯವರ ಮೇಲೆ ಹೊರಿಸಲಾಗುತ್ತದೆ’ ಎಂದು ಪ್ರಧಾನ ಮಂತ್ರಿ ಆರ್ಥಿಕ ಸಲಹಾ ಸಮಿತಿ ಅಧ್ಯಕ್ಷ ಬಿಬೆಕ್ ದೆಬ್ರೋಯ್ ಕಳವಳ ವ್ಯಕ್ತಪಡಿಸಿದರು.

ಚಾಣಕ್ಯ ವಿಶ್ವವಿದ್ಯಾಲಯ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ವಿಶೇಷ ಉಪನ್ಯಾಸದಲ್ಲಿ ‘ಭಾರತೀಯ ಆರ್ಥಿಕತೆಯಲ್ಲಿ ಪ್ರಮುಖ ಪರಿವರ್ತನೆಗಳು’ ವಿಷಯದ ಬಗ್ಗೆ ಮಾತನಾಡಿದರು.

‘ಉಚಿತ ಕೊಡುಗೆಗಳು ದೇಶದ ಅರ್ಥ ವ್ಯವಸ್ಥೆಗೆ ಒಳಿತು ಮಾಡುವುದಿಲ್ಲ. ಅರ್ಹ ಬಡವರಿಗೆ ಸಬ್ಸಿಡಿ ನೀಡಬೇಕು. ಆದರೆ, ಏನನ್ನೂ ಉಚಿತವಾಗಿ ನೀಡಬಾರದು. ಚೀನಾದ ಸರ್ಕಾರಿ ಬ್ಯಾಂಕ್ ನೀಡಿದ್ದ ಸಾಲವನ್ನು ಭರಿಸಲಾಗದೆ ಶ್ರೀಲಂಕಾ ದಿವಾಳಿ ಹಂತಕ್ಕೆ ತಲುಪಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯು ಶ್ರೀಲಂಕಾದ ಸಾಲವನ್ನು ಮರು ರಚನೆ ಮಾಡುತ್ತಿದೆ’ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಬಿಬೇಕ್ ದೇಬ್ರಾಯ್ ಮಾತನಾಡಿದರು.

‘ದೇಶದ ಜನಸಂಖ್ಯೆಯ ಬೆಳವಣಿಗೆ ದರ ಶೇ 2.1ರಿಂದ ಶೇ 0.8ಕ್ಕೆ ಕುಸಿದಿದೆ. ಆದ್ದರಿಂದ ಭಾರತದಲ್ಲಿ ಜನಸಂಖ್ಯೆ ಸ್ಫೋಟಗೊಳ್ಳುತ್ತಿದೆ ಎಂಬ ಮನೋಭಾವದೊಂದಿಗೆ ಯೋಜನೆಗಳನ್ನು ರೂಪಿಸುವುದನ್ನು ಬಿಟ್ಟು, ಕುಸಿಯುತ್ತಿರುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಬೇಕು. ಜನಸಂಖ್ಯೆಯ ಇಳಿಕೆಯನ್ನು ಆಧಾರವಾಗಿಟ್ಟುಕೊಂಡು ನಾವು ಆರ್ಥಿಕ ಚಟುವಟಿಕೆಗಳ ರೂಪುರೇಷೆ ಸಿದ್ಧಪಡಿಸಬೇಕು’ ಎಂದರು.

ಚಾಣಕ್ಯ ವಿಶ್ವವಿದ್ಯಾಲಯದ ಕುಲಪತಿ ಎಂ.ಕೆ. ಶ್ರೀಧರ್, ವಿವಿಯ ಹಿರಿಯ ಅಧಿಕಾರಿಗಳಾದ ಎಂ.ಪಿ. ಕುಮಾರ್, ನಾಗರಾಜ ರೆಡ್ಡಿ ಇತರರು ಉಪಸ್ಥಿತರಿದ್ದರು.

## ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಈಡಿಗ ಸಮುದಾಯದ ಉಚಿತ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2023–24ನೇ ಸಾಲಿನ ಶೈಕ್ಷಣಿಕ ಸಾಲಿಗೆ ಪದವಿ, ತಾಂತ್ರಿಕ, ಸ್ನಾತಕೋತ್ತರ ಪದವಿ, ವೈದ್ಯಕೀಯ ಹಾಗೂ ಔಷಧಿ ವಿಜ್ಞಾನ ಪದವಿಗಳಲ್ಲಿ ವ್ಯಾಸಂಗ ಮಾಡಲಿರುವ ಈಡಿಗ ಸಮುದಾಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಜುಲೈ 1ರಿಂದ ಪಡೆದು 30ರ ಒಳಗೆ ಅರ್ಜಿ ಸಲ್ಲಿಸಬಹುದು.

ಅರ್ಜಿಗಳನ್ನು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ನಂ.:185, ಈಡಿಗ ಭವನ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರಂ, ಬೆಂಗಳೂರು – ಇಲ್ಲಿ ಪಡೆಯಬಹುದು. ಮಾಹಿತಿಗೆ 080 48145442, 080 23560574 ಸಂಪರ್ಕಿಸಬಹುದು.

## ಸತ್ಯಸಾಯಿ ಗ್ರಾಮಕ್ಕೆ ರಾಷ್ಟ್ರಪತಿ ಭೇಟಿ; ನಂದಿಬೆಟ್ಟ, ಸ್ಕಂದಗಿರಿ ಪ್ರವೇಶಕ್ಕೆ ನಿಷೇಧ

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದಲ್ಲಿ ಜುಲೈ 3ರಂದು ನಡೆಯುವ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪಾಲ್ಗೊಳ್ಳಲಿದ್ದಾರೆ. ರಾಷ್ಟ್ರಪತಿ ಭೇಟಿ ಹಿನ್ನೆಲೆಯಲ್ಲಿ ಜುಲೈ 2ರ ಬೆಳಿಗ್ಗೆ 6ರಿಂದ ಜುಲೈ 3 ಸಂಜೆ 6ರವರೆಗೆ ಪ್ರಸಿದ್ಧ ಪ್ರವಾಸಿ ತಾಣಗಳಾದ ನಂದಿಗಿರಿಧಾಮ ಮತ್ತು ಸ್ಕಂದಗಿರಿಗೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಆದೇಶ ಹೊರಡಿಸಿದ್ದಾರೆ. ಸತ್ಯಸಾಯಿ ಗ್ರಾಮವಿರುವ ನಂದಿ ಹೋಬಳಿಯಲ್ಲಿಯೇ ಈ ಎರಡೂ ಪ್ರಸಿದ್ಧ ಪ್ರವಾಸಿ ತಾಣಗಳು ಇವೆ.

# ಗೋಪಾಲಕೃಷ್ಣ ನಾಯರಿ ಸ್ಮರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಂಗ ನಿರ್ದೇಶಕ ಗೋಪಾಲಕೃಷ್ಣ ನಾಯರಿ ಅವರು ಇಡೀ ನಾಡು, ನುಡಿಯ ಕೀರ್ತಿಯನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸಿದವರು’ ಎಂದು ರಂಗಕರ್ಮಿ ರಾಘವೇಂದ್ರ ನಾಯರಿ ಬಣ್ಣಿಸಿದರು.

ನಗರದ ನ್ಯಾಷನಲ್ ಕಾಲೇಜಿನಲ್ಲಿ ನಡೆದ ಗೋಪಾಲಕೃಷ್ಣ ನಾಯರಿ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಫ್ಟಾದ ರಾಜ್ಯ ಅಧ್ಯಕ್ಷ ಸಿದ್ದನಗೌಡ ಪಾಟೀಲ್ ಮಾತನಾಡಿ, ‘ನಾಯರಿ ಅವರು ಕರ್ಣಪ್ರಜ್ಞೆ ತುಂಬಿಕೊಂಡ ಅಪರೂಪದ ನಿರ್ದೇಶಕ. ಅವರು ವ್ಯಕ್ತಿ ಮಾತ್ರವಲ್ಲದೇ ಸಮಾಜದ ಶಕ್ತಿಯಾಗಿದ್ದರು’ ಎಂದು ಹೇಳಿದರು.

ಶಿಕ್ಷಣ ತಜ್ಞ ನಿರಂಜನಾರಾಧ್ಯ ಮಾತನಾಡಿ, ‘ಸಾಕ್ಷರತೆ ಕಾಲದಲ್ಲಿ ಕಟ್ಟಿದ ಇಳಿಯಣ್ಣನ ಪ್ರಸಂಗ ಸಾವಿರ ಪ್ರಯೋಗ ಕಂಡಿತ್ತು. ಅವರ ನಿರ್ದೇಶನದ ನಾಟಕಗಳು ಸರ್ಕಾರದ ವಿರುದ್ಧ ಗಟ್ಟಿ ಧ್ವನಿ ಎತ್ತುತ್ತಿದ್ದವು’ ಎಂದರು.



ನಗರದಲ್ಲಿ ನಡೆದ ರಂಗ ನಿರ್ದೇಶಕ ಗೋಪಾಲಕೃಷ್ಣ ನಾಯರಿ ಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ವೈದ್ಯ ಸಾಹಿತಿ ಡಾ. ನಾ.ಸೋಮೇಶ್ವರ ನಮನ ಸಲ್ಲಿಸಿದರು.

ವೈದ್ಯ ನಾ.ಸೋಮೇಶ್ವರ ಮಾತನಾಡಿ, ಕರ್ಣಭಾರ ನಾಟಕಗಳಲ್ಲಿ ಕರ್ಣನ ಪಾತ್ರದಲ್ಲಿ ಅಭಿನಯಿಸಿದ್ದು ಒಂದು ವಿಶಿಷ್ಟ ಪ್ರಯೋಗ. ಆ ನಾಟಕವು ಪ್ರಬಲ ವರ್ಗದ ಪ್ರಭಾವದಿಂದ ಮರು ಪ್ರಯೋಗಗೊಳ್ಳಲಿಲ್ಲ ಎಂದು ವಿಷಾದಿಸಿದರು.

ನಟ ದತ್ತಣ್ಣ, ಶಿಕ್ಷಣ ಇಲಾಖೆ ನಿವೃತ್ತ ಸಹ ನಿರ್ದೇಶಕ ತಿರುಮಲ ರಾವ್, ಡಾ.ಶೋಭಾ, ಡಾ.ರಮೇಶ್‌ಚಂದ್ರ ದತ್ತ, ಬಿ.ಸವಿತಾ, ರಂಗನಿರ್ದೇಶಕಿ ದಾಕ್ಷಾಯಣಿ ಭಟ್, ಸಮುದಾಯ ಗುಂಡಣ್ಣ, ಮೇಳೇಹಳ್ಳಿ, ದೇವರಾಜು ಇದ್ದರು.

# ಹಲವು ಪ್ರಯಾಸ ನಡುವೆ ಖುಷಿಯ ಪ್ರವಾಸ

ಶಕ್ತಿಯೋಜನೆಯಡಿ ಹೆಣ್ಣುಮಕ್ಕಳೆಲ್ಲ ಪ್ರವಾಸ ಹೊರಟರೆ ಅದನ್ನು ಆಡಿಕೊಂಡು ನಗುವುದನ್ನು ಮೊದಲು ನಿಲ್ಲಿಸೋಣ. ಯಾರ ಹಂಗಿಲ್ಲದೆಯೂ ಬದುಕು ಕಟ್ಟಿಕೊಂಡ ಕೆಳ ಹಾಗೂ ಮಧ್ಯಮ ವರ್ಗದ ಹೆಣ್ಣುಮಕ್ಕಳು ಉಚಿತವಿರಲಿ, ಇಲ್ಲದಿರಲಿ; ತಮಗಿರುವ ಪ್ರವಾಸದ ಆಸಕ್ತಿಯನ್ನು ಕಡೆಗಣಿಸಿದವರಲ್ಲ. ಸಣ್ಣ ಉಳಿತಾಯದಲ್ಲಿ ಹೇಗೆಲ್ಲ ಪ್ರವಾಸ ಮಾಡಬಲ್ಲರು ಎಂಬುದರ ಚಿತ್ರಣ ಇಲ್ಲಿದೆ.



ಚಿತ್ರ: ಗುರು ನಾವಳ್ಳಿ

ಶ್ರೀನಿಧಿ ಅಡಿಗ

ದಾವಣಗೆರೆಯಲ್ಲಿರುವ ಚಿಕ್ಕಮ್ಮ ಮನೆಗೆ ಬಂದರೆ ಸ್ವಲ್ಪವೂ ಬಿಡುವಿರದಂತೆ ಆಕೆಯ ಫೋನ್ ಸದಾ ರಿಂಗಣಿಸುತ್ತಿರುತ್ತದೆ. ಆಕೆ ಫೋನ್ ಎತ್ತಿದರೆ ಸಾಮಾನ್ಯವಾಗಿ ಕೇಳಿ ಬರುವ ಮಾತು; 'ಅಕ್ಕಾ ಯಾವತ್ತ್ ಬರ್ತಿಯಾ, ಆ ಸಂಘದಲ್ಲೊಂದು ಲೋನ್ ಬೇಕಿತ್ತಲ್ಲಕ್ಕಾ, ನನ್ ಮಗ ಕೆಲಸ್ಕ್ಕೆ ಹೋಗಕ್ಕೆ ಗಾಡಿ ತೆಕ್ಕೊಡು ಅಂತ ಗಂಟ್ ಬಿದ್ದವ್ನೆ, ಸಂಗದಾಗೆ ಲೋನ್ ಬೇಕಿತ್ತು' .. ಇಂಥವೇ.

ಹಲವು ಸಂಘಗಳಲ್ಲಿರುವ ಚಿಕ್ಕಮ್ಮನಿಗೆ ಬಿಡುವಿರದಷ್ಟು ಕೆಲಸ. 'ನೀನು ಎಲೆಕ್ಷನ್‌ಗೆ ನಿಲ್ಲು ಮಾರಾಯ್ತಿ' ಅಂಥ ತಮಾಷೆ ಮಾಡಿದಾಗ 'ಇಲ್ಲ ಒಬ್ಬರದ್ದು ಟೂರ್ ಚೀಟಿ ದುಡ್ಡು ಕಟ್ಟೊದಿತ್ತು. ಅದಕ್ಕೆ ಫೋನ್ ಮಾಡಿದ್ಲು' ಎನ್ನುವ ಮಾತು ಬಂತು.

'ಇದ್ಯಾವ ಚೀಟಿ?' ಎಂದು ಆಶ್ಚರ್ಯ ವ್ಯಕ್ತಪಡಿಸುವಾಗಲೇ, ಅದೇ ಟೂರಿಗೆ ಹೋಗೋಕೆ ಎಂದು ಹೇಳಿದಾಗ ನನಗೆ ಇದು ಏನು ಎತ್ತ ಅಂಥ ಗೊತ್ತಾಗಲಿಲ್ಲ. ಇದೆಂಥ ಮಾರಾಯ್ತಿ ಟೂರ್ ಚೀಟಿ ಅಂಥ ಕೇಳಿದೆ. ಆಗ ಆಕೆ ತೆರೆದಿಟ್ಟ ವಿವರದಿಂದ ಹೊಸ ಲೋಕದ ಪರಿಚಯವಾಯಿತು. ಈ ಟೂರ್ ಚೀಟಿಯ ಮೂಲಕ ಬಡತನ ರೇಖೆಗಿಂತ ಕೆಳಗಿರುವವರಲ್ಲಿ, ಕೆಳ ಮಧ್ಯಮ ವರ್ಗದವರಲ್ಲಿ ಪ್ರವಾಸದ ಹವ್ಯಾಸಗಳು ಹೇಗಿರುತ್ತವೆ ಎಂಬ ಚಿತ್ರಣ ಸಿಕ್ಕಿತು. ನಿಜಕ್ಕೂ ಅಬ್ಬಾ ಅನಿಸುವಂತೆ ಮಾಡಿತು. ಸದ್ಯಕ್ಕೆ 'ಶಕ್ತಿ' ಯೋಜನೆಯಡಿ ಹೆಣ್ಣುಮಕ್ಕಳೆಲ್ಲ ಪ್ರವಾಸಕ್ಕೆ ಹೊರಡುತ್ತಿರುವುದರ ಬಗ್ಗೆ ಚರ್ಚೆಯಾಗುತ್ತಿರುವ ಹಿನ್ನೆಲೆಯಲ್ಲಿ ಅವರ 'ಟೂರ್ ಪ್ಲಾನ್' ಅನ್ನು ಇಲ್ಲಿ ಹಂಚಿಕೊಳ್ಳಬೇಕೆನಿಸಿತು.

ಹಲವು ಸಂಘಟನೆಗಳಲ್ಲಿ ಸಕ್ರಿಯರಾಗಿರುವ ಈ ಬಡ ಹಾಗೂ ಕೆಳಮಧ್ಯಮ ಹೆಣ್ಣುಮಕ್ಕಳು ಬದುಕಿನ ಅಷ್ಟೂ ಜಂಜಾಟಗಳ ನಡುವೆ ವರ್ಷಕ್ಕೊಂದು ಪ್ರವಾಸ ಹೋಗಬೇಕೆಂದು ನಿಶ್ಚಯಿಸುತ್ತಾರೆ. ನಮ್ಮ ಹಾಗೆ ಗೂಗಲ್ ರೇಟಿಂಗ್ ನೋಡಿ ಹೋಟೆಲ್, ಹೊರಡಲು ಫ್ಲೈಟ್ ಬುಕ್ ಮಾಡುವುದಿಲ್ಲ. ಹಪ್ಪಳ ಮಾಡುವುದು, ಶಾವಿಗೆ ಒಣಗಿಸುವುದು, ರೊಟ್ಟಿ ತಟ್ಟುವುದು, ಚಟ್ನಿಪುಡಿ ಕುಟ್ಟುವುದು, ಹೋಳಿಗೆ ಮಾಡಿ ಮಾರುವುದು, ಹೊಲಿಗೆ, ಮೆಹಂದಿ ಹಾಕುವುದು ಹೀಗೆ ನಾನಾ ಕೆಲಸ ಮಾಡಿ ಹಣ ಸಂಪಾದನೆ ಮಾಡಿ ತಿಂಗಳ ಖರ್ಚು ಕಳೆದು ಉಳಿತಾಯದ ಆ ಹಣವನ್ನು ಟೂರ್ ಚೀಟಿಗೆ ಕಟ್ಟುತ್ತಾರೆ.

ಪರಿಚಯದವರ ಫ್ಯಾಕ್ಟರಿಯಲ್ಲಿ ಖಾರದ ಪುಡಿ, ಸಾರಿನ ಪುಡಿ ಪ್ಯಾಕ್ ಮಾಡುವುದು, ಆಷಾಢದಲ್ಲಿ ಸೀರೆ ಅಂಗಡಿಗೆ ಸೀರೆ ಮಡಚಲಿಕ್ಕೆ ಹೋಗುವುದು, ಅಂಗಡಿಯಲ್ಲಿ ದಿನಸಿ ಸಾಮಾನು ಶುಚಿಗೊಳಿಸುವುದು, ಸರ್ಕಾರದ ಸರ್ವೇಗಳಲ್ಲಿ ಪಾಲ್ಗೊಳ್ಳುವುದು.. ಹೀಗೆ ಇವರು ಯಾವ ಕೆಲಸಕ್ಕೂ ಹಿಂಜರಿದವರಲ್ಲ. ಕೊನೆಗೆ ಹಣಕೊಟ್ಟು ಜನಸೇರಿಸುವ ಚುನಾವಣಾ ಪ್ರಚಾರ ಸಭೆಗಳಾದರೂ ಸರಿಯೇ. ಯಾವುದೇ ಕೆಲಸ ದೊಡ್ಡದಿರಲಿ, ಚಿಕ್ಕದಿರಲಿ ಈ ಹೆಣ್ಣುಮಕ್ಕಳು ದುಡಿದು ಪೈಸೆಗೆ ಪೈಸೆ ಸೇರಿಸಿ ಟೂರ್ ಹೊರಡಲು ರೆಡಿಯಾಗುತ್ತಾರೆ. ಈ ಮಹಿಳೆಯರು ತಾವೇ ಹೋಗುವುದಾದರೆ ಸಾಮಾನ್ಯವಾಗಿ ಅವರ ಆಯ್ಕೆ ರೈಲು. ಅದೂ ಜನರಲ್ ಬೋಗಿಯಲ್ಲಿ. ಇವರಿಗೆ ರೈಲು ಮುಂಗಡ ಕಾದಿರಿಸುವ ಬಗೆಗೆ ಹೆಚ್ಚಿನ ಮಾಹಿತಿ ಇಲ್ಲ. ಇದ್ದರೂ ಅದಕ್ಕೆ ಬೇರೆಯವರ ಸಹಾಯ ಬೇಕು. ಕಾಲು ಇಡಲೂ ಜಾಗ ಇಲ್ಲದ ರೈಲಿನಲ್ಲಿಯೇ ನಿಂತುಕೊಂಡೆ ಕನ್ಯಾಕುಮಾರಿ, ರಾಮೇಶ್ವರ, ಮಧುರೈ, ಕಾಶಿ, ಗಯಾ ಹೀಗೆ ದೂರದ ಊರುಗಳನ್ನು ನೋಡ ಹೊರಡುತ್ತಾರೆ. ರೈಲಿಗೆ ಹೋಗುವುದಕ್ಕೆ ಬೆಲೆ ಕಡಿಮೆ ಎಂಬುದು ಒಂದಾದರೆ ಪ್ರಯಾಣದ ವೇಳೆಯಲ್ಲಿಯೇ ನಿತ್ಯಕರ್ಮಗಳನ್ನು ಮುಗಿಸಿಕೊಳ್ಳಬಹುದು ಎಂಬುದು ಇನ್ನೊಂದು.

'ಬಾಯಿ ಇದ್ರೆ ಬೊಂಬಾಯಿಗೂ ಹೋಯಿಲಕ್ಕ್' ಅನ್ನುವ ಹಾಗೆ ಭಾಷೆ ಬಾರದ, ಗೊತ್ತಿಲ್ಲದ ಊರುಗಳಲ್ಲಿಯೂ ಆತ್ಮವಿಶ್ವಾಸದಿಂದ ಅಡ್ಡಾಡಿ ಬರುತ್ತಾರೆ. ನಮ್ಮ ಹಾಗೆ ಆಯಾ ಊರಿನ ಸಿಗ್ನೇಚರ್ ಡಿಶ್ ಏನಿದೆ ಅಂಥ ಹುಡುಕಿಕೊಂಡು ಊಟಕ್ಕೆ ಸಾವಿರಾರು ರೂಪಾಯಿ ವ್ಯಯಿಸುವುದಿಲ್ಲ. ನಾಲ್ಕು ದಿನದ ಪ್ರವಾಸವಾದರೆ ಮೊದಲಿನ ದಿನಕ್ಕೆ ಎರಡು ಹೊತ್ತಿಗೆ ಆಗುವಷ್ಟು ಚಿತ್ರಾನ್ನ ಕಟ್ಟಿಕೊಂಡು ಬಂದಿರುತ್ತಾರೆ. ಅದರಲ್ಲಿಯೇ ಪ್ರಯಾಣ ಕಳೆದುಹೋಗುತ್ತದೆ. ಮಧ್ಯೆ ಬಾಯಿ ಆಡಿಸಲು ಖಾರಾ ಮಂಡಕ್ಕಿ ಇದ್ದರೆ, ರೈಲಿನಲ್ಲಿ ಬರುವ ಒಂದು ಕಪ್ ಚಹಾ ತೆಗೆದುಕೊಂಡರೆ ಅಲ್ಲಿಗೆ ಮುಗಿಯಿತು.

ಕಟ್‌ಕಲ್ ರೊಟ್ಟಿ ಮತ್ತು ಚಟ್ನಿಪುಡಿ ಈ ರೀತಿ ಪ್ರವಾಸ ಹೊರಡುವವರ ಆಪ್ತ ಸಂಗಾತಿ. ಎಷ್ಟೂ ದಿನ ಇಟ್ಟರೂ ಕೆಡದ ಒಣ ರೊಟ್ಟಿ ಮತ್ತು ಚಟ್ನಿಪುಡಿ ಉಳಿದ ಪ್ರವಾಸದ ದಿನಗಳಿಗೆ ಇವರ ಸಹಾಯಕ್ಕೆ ಒದಗಿ ಬರುತ್ತದೆ. ಒಂದೋ ಮೊಸರಿನ ಪ್ಯಾಕ್ ತಗೊಂಡು ಚಟ್ನಿಪುಡಿಗೆ ಮೊಸರು ಕಲ್ಸಿ ತಿಂತೀವಿ. ಇಲ್ಲಾಂದ್ರೆ ಟ್ರೈನ್‌ನಲ್ಲಿ ಬರೋವಾಗ್ಲೆ ಒಂದು ಡಬ್ಬಿಲಿ ಹೆಸರುಕಾಳು ನೆನೆ ಹಾಕಿರ್ತೀವಿ. ಅದಕ್ಕೆ ಚಟ್ನಿಪುಡಿ ಸೇರಿಸಿ, ಮೊಸರು ಹಾಕಿ ಪಲ್ಯದ ಥರ ಮಾಡ್ಕೊಂಡು ತಿಂತೀವಿ' ಅಂತ ಚಿಕ್ಕಮ್ಮನ ಗೆಳತಿ ಹೇಳಿದಾಗ ಅರೆ ಹೀಗೂ ಇರುತ್ತಾ ಅಂಥ ನನಗೆ ಆಶ್ಚರ್ಯ.

'ಕಳೆದ ಸಾರಿ ಕನ್ಯಾಕುಮಾರಿಗೆ ಹೋದಾಗ ಅಲ್ಲಿ ಬಿಳಿ ಅನ್ನ ಹೋಟೆಲ್‌ನಲ್ಲಿ ಸಿಗುತ್ತೆ ಅದ್ನ ತಗೊಂಡಿದ್ವಿ. ಒಂದು ಕೆಜಿ ಅನ್ನಕ್ಕೆ ನಲ್ವತ್ತೋ-ಐವತ್ತೊ ರೂಪಾಯಿ. ಅದಕ್ಕೆ ನಾವು ಪುಳಿಯೋಗರೆ ತಗೊಂಡು ಹೋಗಿದ್ವಲ್ಲಾ ಅದನ್ನ ಕಲ್ಸ್‌ಕೊಂಡು ತಿಂದ್ವಿ. ಎರಡು ಹೊತ್ತು ಅದೇ ತಿಂದ್ವಿ. ಬರೀ ಟೀ ಗೆ ಅಷ್ಟೆ ನೋಡು ನಾವು ದುಡ್ಡು ಖರ್ಚು ಮಾಡಿದ್ದು' ಅಂದಾಗ ಬೆರಗಾಗುವ ಸರದಿ ನನ್ನದು.

ಇದೇ ಹೆಣ್ಣು ಮಕ್ಕಳೆಲ್ಲ ಸೇರಿ ದುಡಿಮೆಯ ಒಂದು ಭಾಗ ಚೀಟಿ ಕಟ್ಟಿ ಕಳೆದ ಬಾರಿ ಕೋವಿಡ್ ಭಯದ ನಡುವಿನಲ್ಲಿಯೂ ಸರ್ಕಾರ ಒದಗಿಸಿರುವ ಕಾಶಿಯಾತ್ರೆ ಸೌಲಭ್ಯವನ್ನು ಬಳಸಿಕೊಂಡಿದ್ದಾರೆ. ಅತಿ ಪ್ರಯಾಸಕರ ಪ್ರವಾಸ ಕೇದಾರನಾಥ ಯಾತ್ರೆಯನ್ನೂ ಮುಗಿಸಿಬಂದಿದ್ದಾರೆ. ಈ ಬಾರಿ ಗಯಾ ಪ್ರವಾಸಕ್ಕೆ ಸಜ್ಜಾಗಿದ್ದಾರೆ.

ಈ ಪ್ರವಾಸದ ಚಿತ್ರಣವನ್ನು ಯಾಕೆ ಹೇಳಬೇಕಾಯಿತು ಎಂದರೆ ಎಷ್ಟೋ ಊರುಗಳಲ್ಲಿ ಹೆಣ್ಣುಮಕ್ಕಳು ಯಾರ ಅವಲಂಬನೆಯಿಲ್ಲದೇ ಹೊರಗೆ ಹೋಗುವುದೇ ತಪ್ಪು ಎಂಬ ಭಾವನೆಯಿದೆ. ಆಯಾ ಊರಿನಲ್ಲಿರುವ ವಿಶೇಷತೆ ಏನು? ಎಂಬುದನ್ನು ಆಯಾ ಊರಿನ ಹೆಣ್ಣುಮಕ್ಕಳಿಗೇ ಗೊತ್ತಿಲ್ಲದಿರುವಾಗ; ಕಾಸು ಕೂಡಿಟ್ಟೋ ಅಥವಾ ಬಸ್ ಟಿಕೆಟ್ ಉಚಿತವಾಗಿ ಸಿಕ್ಕಿಯೋ ಹೆಣ್ಣುಮಕ್ಕಳೆಲ್ಲ ಗುಂಪು ಗುಂಪಾಗಿ ಪ್ರವಾಸ ಹೊರಟರೆ ತಪ್ಪೇನು?. ಇಷ್ಟೆಲ್ಲ ಕಷ್ಟಗಳ ನಡುವೆ ಹೊರಡುವ ಹೆಣ್ಣುಮಕ್ಕಳ ಪ್ರಯಾಣದ ಖರ್ಚು ಉಚಿತವಾದ ಮಾತ್ರಕ್ಕೆ ಏನೋ ದೊಡ್ಡ ಅನಾಹುತವೇ ಆಯಿತು ಎಂದು ಬೊಬ್ಬೆ ಹೊಡೆಯುವವರನ್ನು ನೋಡುವಾಗ ನಗು ಬರುತ್ತದೆ. ಶಕ್ತಿ ಯೋಜನೆಯಡಿ ಉತ್ತರ ಕರ್ನಾಟಕದಿಂದ ಉಡುಪಿ, ದಕ್ಷಿಣ ಕನ್ನಡದ ಕಡೆ ಚಿಕಿತ್ಸೆಗೆಂದು ಹೋಗುವ ಅದೆಷ್ಟೋ ಕುಟುಂಬದ ಹೆಣ್ಣುಮಕ್ಕಳ ಬಸ್ ಚಾರ್ಜ್ ಉಳಿತಾಯವಾದರೆ ಅವರ ಹೊರೆ ತುಸು ಹಗುರವಾಗುವುದು ದಿಟವಲ್ಲವೇ?.

ಉಚಿತ ಯೋಜನೆಯಡಿ ಪ್ರವಾಸ ಮಾಡುವವರು ಎಂದು ಮೂದಲಿಸುವ ಮೊದಲು ಈ ಬಡ ಹೆಣ್ಣುಮಕ್ಕಳು ಸಣ್ಣ ಉಳಿತಾಯ ಮಾಡಿಯಾದರೂ ಪ್ರವಾಸ ಮಾಡಬೇಕು ಎಂದು ಯೋಜಿಸಿ ಅದನ್ನು ಕಾರ್ಯರೂಪಕ್ಕೆ ತಂದವರು ಎಂಬುದನ್ನು ನೆನಪಿಡೋಣ. ಎಲ್ಲ ಟೀಕೆಗಳ ನಡುವೆಯೂ ಕಷ್ಟಪಟ್ಟು, ಸೀಟು ಹಿಡಿದು ಹೇಗಾದರೂ ಸರಿ ಹೊರಟೇ ಹೊರಡುತ್ತೇನೆ ಎಂದು ಹೊರಟ ಈ ಹೆಣ್ಣುಮಕ್ಕಳದ್ದು ಅಪ್ಪಟ ಜೀವನಪ್ರೀತಿಯಲ್ಲದೇ ಮತ್ತೇನು?

# ಜೆಲ್ಲಿ ಸ್ಪೆಷಲ್

ಹಣ್ಣುಗಳಿಂದ ಜ್ಯೂಸ್ ಮಾಡಬಹುದು. ತಿರುಳಿನಿಂದ ಜಾಮ್ ಮಾಡಬಹುದು. ಅಷ್ಟೇ ಅಲ್ಲ, ವಿಶಿಷ್ಟ ರುಚಿಯಿರುವ 'ಜೆಲ್ಲಿ'ಗಳನ್ನೂ ಮಾಡಬಹುದು. ಅಂಥ 'ಜೆಲ್ಲಿ'ಗಳ ರೆಸಿಪಿಗಳನ್ನು ಪರಿಚಯಿಸಿದ್ದಾರೆ ಕೆ.ವಿ.ರಾಜಲಕ್ಷ್ಮಿ.

ನಳಪಾಕ



## ಮ್ಯಾಂಗೊ ಜೆಲ್ಲಿ

**ಬೇಕಾಗುವ ಸಾಮಗ್ರಿ:** ಮಾವಿನಹಣ್ಣಿನ ತಿಳಿ ರಸ ಅರ್ಧ ಕಪ್, ಸಕ್ಕರೆ ಒಂದು ಕಪ್, ಕಾರ್ನ್ ಫ್ಲೋರ್ ಒಂದು ಚಮಚ, ತುಪ್ಪ ಒಂದು ಚಮಚ.

**ಮಾಡುವ ವಿಧಾನ:** ಅರ್ಧ ಕಪ್ ನೀರಿನಲ್ಲಿ ಕಾರ್ನ್ ಫ್ಲೋರ್ ಸೇರಿಸಿ ಕಲಕಿ. ಈ ಮಿಶ್ರಣವನ್ನು ಮಾವಿನ ಹಣ್ಣಿನ ರಸಕ್ಕೆ ಬೆರೆಸಿಟ್ಟುಕೊಳ್ಳಿ. ಬಾಣಲೆಯಲ್ಲಿ ಸಕ್ಕರೆಗೆ ಒಂದು ಕಪ್ ನೀರು ಸೇರಿಸಿ ಸಣ್ಣ ಉರಿಯಲ್ಲಿಡಿ. ಸಕ್ಕರೆ ಸಂಪೂರ್ಣ ಕರಗಿ ನೊರೆಯಾಡುವಾಗ ಮಾವಿನರಸದ ಮಿಶ್ರಣ, ತುಪ್ಪ ಸೇರಿಸಿ ಕದಡುತ್ತಿರಿ. ಮಿಶ್ರಣ ತಳ ಬಿಡುವಾಗ ಜಿಡ್ಡು ಹಚ್ಚಿದ ತಟ್ಟೆಯಲ್ಲಿ ಸುರಿಯಿರಿ. ತಣಿದ ನಂತರ ಬೇಕಾದ ಆಕಾರಕ್ಕೆ ಕತ್ತರಿಸಿ. ಮ್ಯಾಂಗೊ ಜೆಲ್ಲಿ ಸವಿಯಲು ಸಿದ್ಧ.

## ಲೆಮನ್ ಜೆಲ್ಲಿ

**ಬೇಕಾಗುವ ಸಾಮಗ್ರಿ:** ಮೀಡಿಯಂ ರವೆ ಒಂದು ಕಪ್, ಸಕ್ಕರೆ ಒಂದು ಕಪ್, ನಿಂಬೆ ರಸ ಅರ್ಧ ಚಮಚ, ತುಪ್ಪ ಒಂದು ಚಮಚ.

**ಮಾಡುವ ವಿಧಾನ:** ರವೆಯನ್ನು ಎರಡು ಕಪ್ ನೀರು ಹಾಕಿ ಅರ್ಧ ಗಂಟೆ ನೆನೆಸಿ, ನಂತರ ಮಿಕ್ಸಿಯಲ್ಲಿ ಒಂದು ಸುತ್ತು ಅರೆದು ಹಾಲು ಸೋಸಿಕೊಳ್ಳಿ. ಬಾಣಲೆಯಲ್ಲಿ ಸಕ್ಕರೆಗೆ ಒಂದು ಕಪ್ ನೀರು ಸೇರಿಸಿ ಸಣ್ಣ ಉರಿಯಲ್ಲಿಡಿ. ಸಕ್ಕರೆ ಸಂಪೂರ್ಣ ಕರಗಿ ನೊರೆಯಾಡುವಾಗ ರವೆಹಾಲು,ನಿಂಬೆರಸ ಸೇರಿಸಿ ಕದಡುತ್ತಿರಿ. ಮಿಶ್ರಣ ಚೆನ್ನಾಗಿ ಬೆಂದು ಹಲ್ವದ ಹದ ಬರುವಾಗ ತುಪ್ಪ ಸೇರಿಸಿ ಮತ್ತೊಮ್ಮೆ ಚೆನ್ನಾಗಿ ಗೊಟಾಯಿಸಿ, ಜಿಡ್ಡು ಹಚ್ಚಿದ ತಟ್ಟೆಯಲ್ಲಿ ಸುರಿಯಿರಿ. ತಣಿದ ನಂತರ ಬಿಲ್ಲೆಗಳಾಗಿ ಕತ್ತರಿಸಿ.



## ಆರೆಂಜ್ ಜೆಲ್ಲಿ



**ಬೇಕಾಗುವ ಸಾಮಗ್ರಿ :** ಕಿತ್ತಳೆಹಣ್ಣಿನ ರಸ – ಅರ್ಧ ಕಪ್, ಸಕ್ಕರೆ ಒಂದು ಕಪ್, ಕಾರ್ನ್ ಫ್ಲೋರ್ ಒಂದು ಚಮಚ, ತುಪ್ಪ ಒಂದು ಚಮಚ.

**ಮಾಡುವ ವಿಧಾನ:** ಅರ್ಧ ಕಪ್ ನೀರಿನಲ್ಲಿ ಕಾರ್ನ್ ಫ್ಲೋರ್ ಸೇರಿಸಿ ಕಲಕಿ. ಈ ಮಿಶ್ರಣವನ್ನು ಕಿತ್ತಳೆ ಹಣ್ಣಿನ ರಸಕ್ಕೆ ಬೆರೆಸಿಟ್ಟುಕೊಳ್ಳಿ. ಬಾಣಲೆಯಲ್ಲಿ ಸಕ್ಕರೆಗೆ ಒಂದು ಕಪ್ ನೀರು ಸೇರಿಸಿ ಸಣ್ಣ ಉರಿಯಲ್ಲಿಡಿ. ಸಕ್ಕರೆ ಸಂಪೂರ್ಣ ಕರಗಿ ನೊರೆಯಾಡುವಾಗ ಕಿತ್ತಳೆ ಹಣ್ಣಿನ ರಸ ಮಿಶ್ರಣ, ತುಪ್ಪ ಸೇರಿಸಿ ಕದಡುತ್ತಿರಿ. ಮಿಶ್ರಣ ತಳ ಬಿಡುವಾಗ ಜಿಡ್ಡು ಹಚ್ಚಿದ ತಟ್ಟೆಯಲ್ಲಿ ಸುರಿದು, ತಣಿದ ನಂತರ ಬೇಕಾದ ಆಕಾರಕ್ಕೆ ಕತ್ತರಿಸಿ.

# ಇನ್ನು ಮುಟ್ಟಾಗಿಲ್ಲ ಏನು ಮಾಡಲಿ?

ಸ್ಪಂದನ



ಡಾ. ವೀಣಾ ಎಸ್. ಭಟ್

**1. ನನಗೆ ಹೆರಿಗೆಯಾಗಿ ಏಳು ತಿಂಗಳು ಕಳೆಯಿತು. ಇನ್ನೂ ಮುಟ್ಟು ಆಗಿಲ್ಲ. ಏನಾದರೂ ತೊಂದರೆ ಇದೆಯೇ?**

**ಹೆಸರು,** ಊರು ತಿಳಿಸಿಲ್ಲ.

**ಉತ್ತರ:** ನಿಮಗೆ ಹೆರಿಗೆಯಾಗಿ ಕೇವಲ ಏಳು ತಿಂಗಳಷ್ಟೇ ಆಗಿದೆ. ಇದು ಮೊದಲನೆಯದೋ ಅಥವಾ ಎರಡನೇ ಮಗುವೋ ಎಂದು ನೀವು ತಿಳಿಸಿಲ್ಲ. ಮಗುವಿಗೆ ಆರು ತಿಂಗಳವರೆಗೆ ಎದೆಹಾಲನ್ನಷ್ಟೇ ಕುಡಿಸುತ್ತಿದ್ದೀರಾ? ಇನ್ನೂ ಮುಂದುವರಿಸುತ್ತಿದ್ದೀರಾ? ಜೊತೆಗೆ ಪೂರಕ ಆಹಾರವನ್ನು ಕೊಡುತ್ತಿದ್ದೀರಾ...? ಈ ಮಾಹಿತಿಗಳನ್ನು ನೀವು ತಿಳಿಸಿಲ್ಲ.



ಏಕೆಂದರೆ, ಮಗುವಿಗೆ ಮೊದಲ ಆರು ತಿಂಗಳು ಕೇವಲ ಎದೆಹಾಲನ್ನಷ್ಟೇ ಕುಡಿಸುತ್ತಿದ್ದರೆ ಹೆಚ್ಚಿನ ಮಹಿಳೆಯರಿಗೆ ಮಾಸಿಕ ಮುಟ್ಟು ಆಗುವುದಿಲ್ಲ. ಇದನ್ನು ಲ್ಯಾಕ್ಟೇಶನಲ್ ಅಮೇನೋರಿಯಾ ಎನ್ನುತ್ತೇವೆ. ಇದೊಂದು ಸಹಜವಾದ ಸಂತಾನ ನಿಯಂತ್ರಣ ವಿಧಾನ. ಆದರೆ, ಹೆರಿಗೆಯಾಗಿ ಕೇವಲ ಆರು ತಿಂಗಳೊಳಗಾಗಿ ಮಾತ್ರ ಇದು ಶೇ 99.5ರಷ್ಟು ಸುರಕ್ಷಿತವಾದ ನೈಸರ್ಗಿಕ ಸಂತಾನ ನಿರೋಧಕ ಕ್ರಮವಾಗಿ ಕೆಲಸಮಾಡುತ್ತದೆ. ನಿಮಗೀಗ ಏಳನೇ ತಿಂಗಳು ನಡೆಯುತ್ತಿದೆ ಎಂದಿದ್ದೀರಿ. ನಿಮಗೆ ಸಹಜ ಮಾಸಿಕ ಋತುಚಕ್ರ ಬರದಿದ್ದರೂ, ಇನ್ನು ಮುಂದೆ ಯಾವಾಗ ಬೇಕಾದರೂ ಬರಬಹುದು. ಒಂದು ವೇಳೆ ಬರದಿದ್ದರೂ ಮಗುವಿಗೆ ಕನಿಷ್ಠ ಎರಡು ವರ್ಷಗಳಾಗುವವರೆಗೂ ನೀವು ಸಂತಾನ ನಿಯಂತ್ರಣ ಕ್ರಮವನ್ನು ಅನುಸರಿಸಿ. ನಿಮ್ಮ ಪತಿ ಕಾಂಡೋಮ್‌ಗಳ ಬಳಕೆ ಮಾಡಬಹುದು ಅಥವಾ ನೀವೇ ಕಾಪರ್ಟಿ ಅಳವಡಿಸಿ ಕೊಳ್ಳಬಹುದು. ಇಲ್ಲವೇ ನೀವು ಸಂತಾನ ನಿಯಂತ್ರಣ ಮಾತ್ರೆಗಳನ್ನು ಬಳಸಬಹುದು. ನಿಮ್ಮ ಹತ್ತಿರದ ವೈದ್ಯರನ್ನು ಕಂಡು ಸೂಕ್ತಸಲಹೆಗಳನ್ನು ಪಡೆಯಿರಿ.

ಕೆಲವರಿಗೆ ಹೆರಿಗೆಯಾಗಿ ಒಂದು ವರ್ಷವಾದರೂ ಮುಟ್ಟು ಬರದೇ ಇರಬಹುದು. ಆದರೆ ಅಂಡೋತ್ಪತ್ತಿಯ ಪ್ರಕ್ರಿಯೆ ಉಂಟಾಗಿ ಗರ್ಭಧಾರಣೆ ಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಜಾಗ್ರತೆ ಇರಲಿ. ಸೂಕ್ತ ಸಂತಾನ ನಿಯಂತ್ರಣ ಕ್ರಮಗಳನ್ನು ಅನುಸರಿಸಿ. ಈಗಾಗಲೇ ನಿಮಗೆ ಎರಡು ಮಕ್ಕಳಾಗಿದ್ದರೆ ಶಾಶ್ವತ ಸಂತಾನ ಶಕ್ತಿ ಹರಣ ಚಿಕಿತ್ಸೆಯನ್ನು ನೀವು ಅಥವಾ ನಿಮ್ಮ ಪತಿ ಮಾಡಿಸಿಕೊಳ್ಳಬಹುದು.

**2. ನನ್ನ ಮಗಳು ಮೊದಲ ಬಾರಿಗೆ 15 ನೇ ವರ್ಷಕ್ಕೆ ಮುಟ್ಟಾಗಿದ್ದಾಳೆ. ಈಗ ಅವಳಿಗೆ ತಿಂಗಳಿಗೆ ಸರಿಯಾಗಿ ಮುಟ್ಟಾಗುತ್ತಿಲ್ಲ. ಕೆಲವೊಮ್ಮೆ ಎರಡು ತಿಂಗಳಿಗೆ, ಇನ್ನೂ ಕೆಲವೊಮ್ಮೆ 28 ದಿನಕ್ಕೆ ಮುಟ್ಟಾಗುತ್ತಿದ್ದಾಳೆ. ಇದಕ್ಕೆ ಏನು ಪರಿಹಾರ?**

**ಹೆಸರು,** ಊರು ತಿಳಿಸಿಲ್ಲ.

**ಉತ್ತರ:** ಈಗಷ್ಟೇ ನಿಮ್ಮ ಮಗಳಿಗೆ ಋತುಚಕ್ರ ಆರಂಭವಾಗಿದೆ. ಹೀಗೆ ಋತುಚಕ್ರ ಆರಂಭವಾದ ಮೊದಲ 2 ವರ್ಷಗಳಲ್ಲಿ ಋತುಚಕ್ರದ ಅವಧಿಯಲ್ಲಿ ಏರುಪೇರುಗಳಾಗುವುದು ಸಹಜ. ಏಕೆಂದರೆ ಹೈಪೋಥಲಾಮಸ್/ಪಿಟ್ಯೂಟರಿ/ಅಂಡಾಶಯದ ಅಕ್ಷ(ಹೆಚ್.ಪಿ.ಎ.ಆಕ್ಸಿಸ್) ಸರಿಯಾಗಿ ಪಕ್ವವಾಗಿರುವುದಿಲ್ಲ. ಹಾಗಾಗಿ ಇನ್ನೆರಡು ವರ್ಷದ ನಂತರವೂ ಅನಿಯಮಿತ ಋತುಚಕ್ರ ಉಂಟಾದರೆ ಮಾತ್ರ ನೀವು ವೈದ್ಯರ ಸಲಹೆಯ ಮೇರೆಗೆ ಚಿಕಿತ್ಸೆ ಪಡೆಯಿರಿ.

**ಹೆಚ್ಚಿನ ಪ್ರಶ್ನೋತ್ತರಗಳಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ**

**ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು**

# ಸ್ವೀಝಲ್ ಫ್ಯಾಷನ್ ಝಲಕ್

ದಕ್ಷಿಣ ಅಮೆರಿಕದ ಪೆರುವಿನಲ್ಲಿ ಈಚೆಗಷ್ಟೆ ಮುಕ್ತಾಯಗೊಂಡ ಅಂತರರಾಷ್ಟ್ರೀಯ ಮಟ್ಟದ ಸೌಂದರ್ಯ ಸ್ಪರ್ಧೆಯಲ್ಲಿ 'ಮಿಸ್ ಟೀನ್ ಯೂನಿವರ್ಸಲ್–2023'ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವ ಹದಿನೆಂಟರ ಹರೆಯದ ಸ್ವೀಝಲ್ ಫುರ್ಟಾಡೊ ಉಡುಪಿಯ ಬಾರ್ಕೂರಿನ ಬೆಣ್ಣೆಕುದ್ರು ಮೂಲದವರು. ಫ್ಯಾಷನ್ ಲೋಕದಲ್ಲಿ ದೃಢವಾದ ಹೆಜ್ಜೆಗಳನ್ನು ಇಡಲು ಮುಂದಾಗಿರುವ ಅವರು 'ಭೂಮಿಕಾ'ದ ಜತೆ ಮನಸ್ಸಿನ ಮಾತುಗಳನ್ನು ಹಂಚಿಕೊಂಡಿದ್ದಾರೆ.



ಸ್ವೀಝಲ್

ರೂಪಾ ಕೆ.ಎಂ.

**● 'ಮಿಸ್ ಟೀನ್ ಇಂಟರ್‌ನ್ಯಾಷನಲ್ ಪ್ರಿನ್ಸೆಸ್' ಕಿರೀಟ ಸಿಕ್ಕ ಕ್ಷಣದ ಬಗ್ಗೆ ಹೇಳಿ?**

ಜೀವನದಲ್ಲಿ ಮರೆಯಲಾಗದ ಒಂದು ಕ್ಷಣ. ಹಲವು ದೇಶಗಳ ಸ್ಪರ್ಧಿಗಳ ನಡುವೆ ಈ ಕಿರೀಟ ಗೆದ್ದಿರುವುದಕ್ಕೆ ತುಂಬಾ ಖುಷಿ ಇದೆ. ಇದೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿ, ಟೀನ್ ವಿಭಾಗದಲ್ಲಿ ಮೊದಲ ಬಾರಿಗೆ ಪ್ರಶಸ್ತಿ ಗೆದ್ದಿರುವುದಕ್ಕೆ ಹೆಮ್ಮೆ ಎನಿಸಿದೆ. ಕುಟುಂಬದವರೆಲ್ಲ ಈ ಕಾರ್ಯಕ್ರಮವನ್ನು ಲೈವ್ ಆಗಿ ನೋಡ್ತಿದ್ದರು ಅದೂ ನನ್ನ ಸಂತೋಷನ್ನು ಇಮ್ಮಡಿಗೊಳಿಸಿತ್ತು.

**● ಅಂತರರಾಷ್ಟ್ರೀಯ ವೇದಿಕೆ ತಲುಪುವ ಮುನ್ನ ದಿನಗಳು ಹೇಗಿದ್ದವು?**

ಫ್ರೆಶ್ ಫೇಸ್ ಆಫ್ ಇಗ್ನೈಟ್ ಇಂಡಿಯಾ 2021ರ ಪ್ರಶಸ್ತಿ ಸಿಕ್ಕಿತು. ನಂತರ ಮಿಸ್ ಸೂಪರ್ ಮಾಡೆಲ್ ಆಫ್ ಇಂಡಿಯಾ –2022 ರನ್ನರ್ ಅಪ್ ಆಗಿ ಸಾಧನೆ ಮಾಡಿದೆ. ಹಂತ ಹಂತವಾಗಿ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರಿಂದ ಮಿಸ್ ಟೀನ್ ಇಂಟರ್‌ನ್ಯಾಷನಲ್‌ನಲ್ಲಿ ಭಾಗವಹಿಸಲು ಅನುಕೂಲವಾಯಿತು.

**● ನಿಮ್ಮ ಪ್ರಕಾರ ಸೌಂದರ್ಯ ಅಂದರೆ?**

ಸೌಂದರ್ಯ ಕೇವಲ ಬಾಹ್ಯವಾಗಿರುವ ಸಂಗತಿ ಎಂದು ಅನಿಸುವುದಿಲ್ಲ. ಜೀವನದಲ್ಲಿ ಯಾವುದೇ ಬಗೆಯ ಸಾಧನೆ ಮಾಡಲಿ; ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಎಷ್ಟು ಸೌಜನ್ಯಯುತವಾಗಿ ನಡೆಸಿಕೊಳ್ಳುತ್ತಾನೆ ಎಂಬ ನಡವಳಿಕೆಯೇ ನಿಜವಾದ ಸೌಂದರ್ಯ. ದಯೆ, ಕರುಣೆ, ಪ್ರೀತಿ ವಿಶ್ವಾಸ ಇವೆಲ್ಲವೂ ಅಡಕವಾಗಿರುವ ಮನುಷ್ಯ ಸಹಜವಾಗಿಯೇ ಸುಂದರವಾಗಿ ಕಾಣುತ್ತಾನೆ. ಬಾಹ್ಯ ಸೌಂದರ್ಯದಷ್ಟೆ ಇವೆಲ್ಲವೂ ಮುಖ್ಯವೆಂದು ಅನಿಸುತ್ತದೆ.

**● ಫ್ಯಾಷನ್ ಲೋಕಕ್ಕೆ ಬರಲು ಕಾರಣ ಮತ್ತು ಪ್ರೇರಣೆ ಏನು?**

ಚಿಕ್ಕವಳಿದ್ದಾಗಲೇ ಎಲ್ಲರಿಗೂ ಇರುವಂತೆ ಸಹಜವಾಗಿ ನನಗೂ ಫ್ಯಾಷನ್ ಲೋಕದಲ್ಲಿ ಮಿಂಚಬೇಕು ಎಂಬ ಆಸೆಯಿತ್ತು. ಆದರೆ ಅದರ ತೀವ್ರತೆ ಅರಿವಾಗಿದ್ದು 7ನೇ ತರಗತಿಯಲ್ಲಿದ್ದಾಗ. ಈ ಸಂದರ್ಭದಲ್ಲಿ ಮಕ್ಕಳ ವಿಭಾಗದಲ್ಲಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದಾಗ ಆತ್ಮವಿಶ್ವಾಸ ಬಂತು. 10ನೇ ತರಗತಿಯಲ್ಲಿ ಇರುವಾಗ ಇದೇ ಕ್ಷೇತ್ರದಲ್ಲಿ ಮುಂದುವರಿಯಬೇಕೆಂಬುದು ನಿಕ್ಕಿಯಾಯಿತು. ನನಗೆ ಸುಶ್ಮಿತಾ ಸೇನ್ ಬಹುದೊಡ್ಡ ಪ್ರೇರಣೆ.

**● ನಿಮ್ಮ ಬಗ್ಗೆ ಹೇಳುವುದಾದರೆ..**

ಕುಟುಂಬದ ಬೇರುಗಳೆಲ್ಲ ಬಾರ್ಕೂರಿನ ಬೆಣ್ಣೆಕುದ್ರುವಿನಲ್ಲಿದೆ. ನೆಲೆಸಿರುವುದು ಬೆಂಗಳೂರಿನಲ್ಲಿ. ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಬಿಬಿಎ ಓದುತ್ತಿದ್ದೇನೆ. ವಿದ್ಯಾಭ್ಯಾಸದಲ್ಲಿಯೂ ಆಸಕ್ತಿ ಇದೆ. ನೃತ್ಯ ಹಾಗೂ ಚಿತ್ರಕಲೆ ನನ್ನಿಷ್ಟದ ಸಂಗತಿಗಳು.

**● ಭವಿಷ್ಯದ ಯೋಜನೆಗಳು ಏನು?**

ವಿದ್ಯಾಭ್ಯಾಸ ಮುಂದುವರಿಸುತ್ತೇನೆ. ಜತೆಗೆ ಈಗ ಟೀನ್ ಕೆಟಗರಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದೇನೆ. ಇದೇ ರೀತಿ ಮುಂದಿನ ಕೆಟಗರಿಗೂ ಸ್ಪರ್ಧೆ ನೀಡುತ್ತೇನೆ. ಅದಕ್ಕಾಗಿ ನಿತ್ಯ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಜತೆಗೆ ಸ್ಟಾರ್ಟ್ ಅಪ್ ಮಾಡುವ ಇರಾದೆಯಿದೆ.




**● ಯಶಸ್ಸು ಸಿಗದೇ ಇರುವವರಿಗೆ ಏನು ಹೇಳುತ್ತೀರಿ?**

ಯಶಸ್ಸು ಒಂದೇ ಬಾರಿಗೆ ಯಾರಿಗೂ ಸಿಗುವುದಿಲ್ಲ. ಅದು ಹಂತ ಹಂತವಾಗಿ ಸಾಗಬೇಕಾದ ಮೆಟ್ಟಿಲು. ಯಶಸ್ವಿಯಾಗಿಲ್ಲವೆಂದರೆ ಸಾಗಬೇಕಾದ ಮೆಟ್ಟಿಲು ಇನ್ನೂ ಇದೆ ಎಂದರ್ಥ ಅಷ್ಟೆ. ಯಾವುದೇ ಕ್ಷೇತ್ರವಿರಲಿ; 'ನೆವರ್ ಗೀವ್ ಅಪ್' ಮನೋಭಾವ ಬೆಳೆಸಿಕೊಳ್ಳಿ. ಎಲ್ಲ ಕ್ಷೇತ್ರಗಳಲ್ಲಿಯೂ ಕಷ್ಟವಿರುತ್ತದೆ. ನಮಗೆ ನಾವೇ ಪ್ರೇರಕರಾದರೆ ಸಾಧನೆಗೆ ಹುರಿದುಂಬಿಸಲು ಬೇರೆಯವರ ಅಗತ್ಯವಿರುವುದಿಲ್ಲ.

ಜಾಲತಾಣಗಳ 'ಪ್ರಭಾವಿ' ಚಾನಲ್‌ಗಳಿಗೂ ಜಾಹೀರಾತು, ರಾಜಸ್ಥಾನ ಸರ್ಕಾರದ ಅಧಿಸೂಚನೆ

# ಜಾಲತಾಣ: ಹೊಸ ಪ್ರಚಾರ ವೇದಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣಾ ಅವಧಿಯಲ್ಲಿ ಜನರ ಮೇಲೆ ಪ್ರಭಾವ ಬೀರುವ ಹಾಗೂ ಇನ್‌ಸ್ಟಾಗ್ರಾಂ, ಯೂಟ್ಯೂಬ್, ಫೇಸ್‌ಬುಕ್, ಟ್ವಿಟರ್‌ಗಳಲ್ಲಿ ಹೆಚ್ಚಿನ ಫಾಲೋವರ್‌ಗಳಿರುವ 'ಪ್ರಭಾವಿ'ಗಳಿಗೆ ಜಾಹೀರಾತು ನೀಡಲು ರಾಜಸ್ಥಾನ ಸರ್ಕಾರ ನೀತಿ ರೂಪಿಸಿದೆ.

ಮುದ್ರಣ ಮತ್ತು ಪ್ರಸಾರ ಮಾಧ್ಯಮಗಳ ಜೊತೆಗೆ ಫಾಲೋವರ್‌ಗಳ ಸಂಖ್ಯೆ ಆಧರಿಸಿ ಜಾಹೀರಾತು ನೀಡಲು ತೀರ್ಮಾನಿಸಿದೆ.

ಅಶೋಕ್ ಗೆಹಲೋತ್ ನೇತೃತ್ವದ ರಾಜ್ಯ ಸರ್ಕಾರ ಈ ಸಂಬಂಧ ಜೂನ್ 26ರಂದು ಅಧಿಸೂಚನೆ ಹೊರಡಿಸಿದೆ. ಅದರ ಪ್ರಕಾರ, ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರಲು ಶಕ್ತರಾದವರಿಗೆ, ತಮ್ಮ ಚಾನಲ್‌ಗಳಲ್ಲಿ ಸರ್ಕಾರದ ಜಾಹೀರಾತು ಪ್ರಕಟಿಸಲು ಮಾಸಿಕ ₹ 10 ಸಾವಿರದಿಂದ ₹ 5 ಲಕ್ಷದವರೆಗೂ ನೀಡಲು ತೀರ್ಮಾನಿಸಲಾಗಿದೆ.

ರಾಜ್ಯ ವಿಧಾನಸಭೆಗೆ ಈ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿದೆ. ಅದಕ್ಕಾಗಿ ಸಿದ್ಧತೆ ಆರಂಭಿಸಿರುವ ಸರ್ಕಾರ ಪ್ರಚಾರಕ್ಕಾಗಿ ಸಾಮಾಜಿಕ ಜಾಲತಾಣಗಳ ವೇದಿಕೆಯನ್ನು ಆದಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಈ ಮೂಲಕ ಮುಂದಾಗಿದೆ.

ಅಧಿಸೂಚನೆ ಪ್ರಕಾರ, ಜಾಲತಾಣಗಳಲ್ಲಿ ವೀಕ್ಷಕರ ಮೇಲೆ ಪ್ರಭಾವ ಬೀರಲು ಶಕ್ತರಾದವರನ್ನು ಸರ್ಕಾರ 4 ವರ್ಗಗಳಾಗಿ ವಿಂಗಡಿಸಿದೆ.

'ಎ' ವರ್ಗದಲ್ಲಿ ಕನಿಷ್ಠ 10 ಲಕ್ಷ ಫಾಲೋವರ್ ಉಳ್ಳವರು, ಜಾಹೀರಾತು ಪ್ರಕಟಣೆಗೆ ಮಾಸಿಕ ಗರಿಷ್ಠ ₹ 5 ಲಕ್ಷ ಪಡೆಯಲಿದ್ದಾರೆ. 5–10 ಲಕ್ಷ ಫಾಲೋವರ್ ಉಳ್ಳವರು 'ಬಿ' ವರ್ಗದಲ್ಲಿದ್ದು, ಮಾಸಿಕ ಗರಿಷ್ಠ ₹ 2 ಲಕ್ಷ ಪಡೆಯುವರು. 1.5 ಲಕ್ಷ ಫಾಲೋವರ್ ಉಳ್ಳವರು 'ಸಿ' ವರ್ಗದಲ್ಲಿದ್ದು ಮಾಸಿಕ ₹ 50 ಸಾವಿರ ಪಡೆದರೆ, 10 ಸಾವಿರಕ್ಕೂ ಅಧಿಕ ಫಾಲೋವರ್ ಉಳ್ಳವರು 'ಡಿ' ವರ್ಗದಲ್ಲಿದ್ದು ಮಾಸಿಕ ಗರಿಷ್ಠ ₹ 50 ಸಾವಿರದವರೆಗೂ ಪಡೆಯಲಿದ್ದಾರೆ.

ಇತ್ತೀಚಿನ ದಿನಗಳಲ್ಲಿ ರಾಜಕೀಯ ಪಕ್ಷಗಳು ಹಾಗೂ ಸರ್ಕಾರಗಳು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಪ್ರಭಾವ ಬೀರಬಲ್ಲವರ ಮೂಲಕವೇ ಜನರನ್ನು ತಲುಪಲು ಯತ್ನಿಸುತ್ತಿವೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇತ್ತೀಚಿನ 'ಭಾರತ್ ಜೋಡೊ ಯಾತ್ರೆ' ವೇಳೆ ಮುಖ್ಯವಾಹಿನಿ ಪತ್ರಿಕೆಗಳ ಬದಲಿಗೆ ಯೂಟ್ಯೂಬ್‌ನ ಪ್ರಮುಖ ಪ್ರಭಾವಿಗಳಿಗೆ ಸಂದರ್ಶನ ನೀಡಿದ್ದರು.

ಇದು ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಕರನ್ನೂ ತಲುಪಿತ್ತು.

## ಅಮರನಾಥ ಯಾತ್ರೆಗೆ ಚಾಲನೆ

ಜಮ್ಮು(ಪಿಟಿಐ): ಅಮರನಾಥ ಯಾತ್ರೆಗೆ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಶುಕ್ರವಾರ, ಇಲ್ಲಿನ ಭಗವತಿ ನಗರದಲ್ಲಿರುವ ಶಿಬಿರದಲ್ಲಿ ಚಾಲನೆ ನೀಡಿದರು. 3,400 ಯಾತ್ರಿಗಳ ಮೊದಲ ತಂಡವು ಬೇಸ್ ಕ್ಯಾಂಪ್‌ನಿಂದ ಪ್ರಯಾಣ ಆರಂಭಿಸಿತು.

# ಏಕರೂಪ ನಾಗರಿಕ ಸಂಹಿತೆ ಶೀಘ್ರ ಜಾರಿ: ಉತ್ತರಾಖಂಡ ಮುಖ್ಯಮಂತ್ರಿ

ಡೆಹ್ರಾಡೂನ್ (ಪಿಟಿಐ): 'ಉತ್ತರಾಖಂಡದಲ್ಲಿ ಶೀಘ್ರದಲ್ಲೇ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಶುಕ್ರವಾರ ತಿಳಿಸಿದ್ದಾರೆ.

'ಪ್ರಸ್ತಾವಿತ ಯುಸಿಸಿ ಕರಡು ಸಿದ್ಧಗೊಂಡಿದ್ದು, ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಕರಡು ರಚನಾ ಸಮಿತಿ ಪ್ರಕಟಿಸಿದ ನಂತರ ಮುಖ್ಯಮಂತ್ರಿ ಈ ಹೇಳಿಕೆ ನೀಡಿದ್ದಾರೆ.

'ಯುಸಿಸಿ ಕರಡು ಸಿದ್ಧಪಡಿಸಲು ರಚಿಸಲಾಗಿದ್ದ ಸಮಿತಿ ತನ್ನ ಕೆಲಸವನ್ನು ಜೂನ್ 30ರಂದು ಪೂರ್ಣಗೊಳಿಸಿದೆ. ರಾಜ್ಯದ ಜನರಿಗೆ ನೀಡಿದ್ದ ಭರವಸೆಯಂತೆ ದೇವಭೂಮಿ ಉತ್ತರಾಖಂಡದಲ್ಲಿ ಶೀಘ್ರದಲ್ಲೇ ಏಕರೂಪ ನಾಗರಿಕ ಸಂಹಿತೆ ಜಾರಿಯಾಗಲಿದೆ' ಎಂದು ಧಾಮಿ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

**'ಯುಸಿಸಿ ಕರಡು ಸಿದ್ಧ':** ಉತ್ತರಾಖಂಡಕ್ಕೆ ಸಂಬಂಧಿಸಿದ ಪ್ರಸ್ತಾವಿತ ಏಕರೂಪ ನಾಗರಿಕ ಸಂಹಿತೆಯ ಕರಡು ಸಿದ್ಧವಾಗಿದ್ದು, ರಾಜ್ಯ ಸರ್ಕಾರಕ್ಕೆ ಶೀಘ್ರವೇ ಸಲ್ಲಿಸಲಾಗುವುದು ಎಂದು ಕರಡು ರಚನಾ ಸಮಿತಿ ಅಧ್ಯಕ್ಷೆ, ನಿವೃತ್ತ ನ್ಯಾಯಮೂರ್ತಿ ರಂಜನಾ ದೇಸಾಯಿ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂಹಿತೆಯ ಕರಡು ಪ್ರತಿಯ ಜೊತೆಗೆ ಯುಸಿಸಿಗೆ ಸಂಬಂಧಿಸಿದ ಸಮಿತಿಯ ವರದಿಯನ್ನು ಸಹ ಸಲ್ಲಿಸಲಾಗುವುದು' ಎಂದರು.

## ಅಜಿತ್ ರೈ ಆಸ್ತಿ ತನಿಖೆಗೆ ಎಸ್‌ಐಟಿ

ಒಂದನೇ ಪುಟದಿಂದ...

11 ಸ್ಥಳಗಳಲ್ಲಿ ಶೋಧ ಸಂದರ್ಭದಲ್ಲಿ ಸಾವಿರಾರು ಪುಟಗಳಷ್ಟು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವುಗಳನ್ನು ಪರಿಶೀಲಿಸಿ, ವಿಂಗಡಿಸುವ ಕೆಲಸವನ್ನು ತನಿಖಾ ತಂಡ ಮಾಡುತ್ತಿದೆ. ಬೇನಾಮಿಗಳ ಜತೆ ಅಜಿತ್ ರೈ ನಿಕಟ ನಂಟು ಹೊಂದಿರುವುದಕ್ಕೆ ಹಲವು ಪುರಾವೆಗಳೂ ಲಭಿಸಿವೆ. ಈ ಎಲ್ಲ ದಾಖಲೆಗಳ ಆಧಾರದಲ್ಲಿ ತನಿಖೆಯನ್ನು ಮತ್ತಷ್ಟು ವಿಸ್ತರಿಸಲು ಸಿದ್ಧತೆ ನಡೆದಿದೆ.

**ಬೇನಾಮಿದಾರರ ವಿಚಾರಣೆಗೆ ಸಿದ್ಧತೆ:** ಆರೋಪಿಯ ಸಹೋದರ ಆಶಿತ್ ರೈ, ನಿಕಟವರ್ತಿಗಳಾದ ಗೌರವ್ ಶೆಟ್ಟಿ ಮತ್ತು ಕೃಷ್ಣಪ್ಪ ಸೇರಿದಂತೆ ಕೆಲವರ ಹೆಸರಿನಲ್ಲಿ ಹೆಚ್ಚಿನ ಸ್ಥಿರಾಸ್ತಿಗಳಿವೆ. ಬೇನಾಮಿಗಳೆಂದು ಗುರುತಿಸಿರುವ ಎಲ್ಲ ವ್ಯಕ್ತಿಗಳನ್ನೂ ವಿಚಾರಣೆ ನಡೆಸಲು ತನಿಖಾ ತಂಡ ಮುಂದಾಗಿದೆ. ಒಂದೆರಡು ದಿನಗಳಲ್ಲಿ ಎಲ್ಲರಿಗೂ ನೋಟಿಸ್ ಜಾರಿ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

# ಟ್ವಿಟರ್‌ಗೆ ₹50 ಲಕ್ಷ ದಂಡ ವಿಧಿಸಿದ ಹೈಕೋರ್ಟ್

ಒಂದನೇ ಪುಟದಿಂದ...

ಈ ಸಂಬಂಧ ಕೇಂದ್ರ ಸರ್ಕಾರ ನೀಡಿದ್ದ ನೋಟಿಸ್‌ಗಳನ್ನು ಪ್ರಶ್ನಿಸಿ ಟ್ವಿಟರ್‌ನ ಅಧಿಕೃತ ಪ್ರತಿನಿಧಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿದೆ.

'ಸುಳ್ಳು ಮತ್ತು ಉದ್ದೇಶಪೂರ್ವಕವಾದ ಅಸಂಬದ್ಧ ಮಾಹಿತಿ ಹಂಚಿಕೆಯನ್ನು ನಿಯಂತ್ರಿಸಲು ಟ್ವಿಟರ್‌ನಂತಹ ಸಾಮಾಜಿಕ ಜಾಲತಾಣಗಳು ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತಿಲ್ಲ. ದೇಶದ ಸಮಗ್ರತೆ, ಸಾರ್ವಭೌಮತೆ, ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ತಪ್ಪು ಮಾಹಿತಿಯ ಬಳಕೆ ಹೆಚ್ಚಳವಾಗುತ್ತಿದೆ. ಸೀಮಿತ ಪದಮಿತಿ ಹೊಂದಿರುವ ಟ್ವಿಟರ್ ತಪ್ಪು ಮಾಹಿತಿ ಪಸರಿಸಿರುವ ವ್ಯಾಪಕ ಶಕ್ತಿ ಹೊಂದಿದೆ' ಎಂಬ ಕೇಂದ್ರದ ನಿಲುವನ್ನು ನ್ಯಾಯಪೀಠ ಮನ್ನಿಸಿದೆ. ಕೇಂದ್ರದ ಪರ, ದಕ್ಷಿಣ ವಲಯದ ಹೆಚ್ಚುವರಿ ಸಾಲಿಸಿಟರ್ ಜನರಲ್ ಶಂಕರ ನಾರಾಯಣನ್ ಮತ್ತು ಎಂ.ಎನ್.ಕುಮಾರ್ ವಾದ ಮಂಡಿಸಿದ್ದರು.

**₹ 50 ಲಕ್ಷ ದಂಡ:** 'ಅರ್ಜಿದಾರರು ಕಾರ್ಪೊರೇಟ್ ದಾವೆದಾರರಾಗಿದ್ದು ಸರಿಸುಮಾರು 5 ಬಿಲಿಯನ್ ಡಾಲರ್‌ನಷ್ಟು ವಾರ್ಷಿಕ ವಹಿವಾಟು ಹೊಂದಿದವರಾಗಿದ್ದಾರೆ. ಈ ರಿಟ್ ಅರ್ಜಿಯ ಸುದೀರ್ಘ ವಿಚಾರಣೆ ವೇಳೆ ನಮ್ಮ ಸ್ಥಳೀಯ ಕಕ್ಷಿದಾರರಾದ ಕಾರ್ಮಿಕರು, ದಲಿತರು, ಬಡವರು, ಮಹಿಳೆಯರು ತಮ್ಮ ವ್ಯಾಜ್ಯಗಳ ವಿಚಾರಣೆಯಲ್ಲಿ ವಿಳಂಬ ಅನುಭವಿಸುವಂತಾಗಿದೆ. ಆದ್ದರಿಂದ, ₹50 ಲಕ್ಷ ದಂಡ ವಿಧಿಸಲಾಗುತ್ತಿದೆ' ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

'ದಂಡದ ಮೊತ್ತವನ್ನು 45 ದಿನಗಳ ಒಳಗೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಪಾವತಿಸಬೇಕು. ಒಂದೊಮ್ಮೆ ವಿಫಲವಾದರೆ 45 ದಿನಗಳ ಬಳಿಕ ಪ್ರತಿದಿನ ಹೆಚ್ಚುವರಿಯಾಗಿ ₹5 ಸಾವಿರ ನೀಡಬೇಕು' ಎಂದು ಆದೇಶಿಸಿದೆ.

**ನಿರ್ಬಂಧ ಸಲ್ಲ:** 2021ರ ಫೆಬ್ರುವರಿಯಿಂದ 2022ರ ಫೆಬ್ರುವರಿ ಮಧ್ಯದ ಅವಧಿಯಲ್ಲಿ ಒಂದು ಸಾವಿರಕ್ಕೂ ಅಧಿಕ ಟ್ವಿಟರ್ ಖಾತೆಗಳನ್ನು ನಿರ್ಬಂಧಿಸುವಂತೆ ಆದೇಶಿಸಿರುವ ಕೇಂದ್ರ ಸರ್ಕಾರ, ಇದಕ್ಕೆ ಸಕಾರಣ ನೀಡಿಲ್ಲ. ಇದು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ನಿರ್ಬಂಧ' ಎಂದು ಆಕ್ಷೇಪಿಸಿ ಈ ಅರ್ಜಿ ಸಲ್ಲಿಸಲಾಗಿತ್ತು. ಸಂಸ್ಥೆಯ ಪರ ಹಿರಿಯ ವಕೀಲರಾದ ಅರವಿಂದ ದಾತಾರ್, ಅಶೋಕ್ ಹಾರನಹಳ್ಳಿ ವಾದ ಮಂಡಿಸಿದ್ದರು. ಮನು ಪಿ.ಕುಲಕರ್ಣಿ ವಕಾಲತ್ತು ವಹಿಸಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





**ಸುಭಾಷಿತ**

ಗಾಳಿಗೆ ಪರ್ವತವನ್ನು ಅಲುಗಾಡಿಸಲು ಸಾಧ್ಯವಿಲ್ಲ. ಹಾಗೆಯೇ ವಿವೇಕಿಯಾದ ಒಬ್ಬ ವ್ಯಕ್ತಿಯು ಹೊಗಳಿಕೆ ಅಥವಾ ತೆಗಳಿಕೆಯಿಂದ ವಿಚಲಿತನಾಗಲಾರ.

-ಗೌತಮ ಬುದ್ಧ

# ಧಾನ್ಯ, ತರಕಾರಿ ಬೆಲೆ ಏರಿಕೆ ನಿಭಾಯಿಸಲು ಸರ್ಕಾರ ಸಜ್ಜಾಗಬೇಕು

ನಿತ್ಯದ ಬದುಕಿಗೆ ತೀರಾ ಅಗತ್ಯವಾಗಿರುವ ಆಹಾರ ವಸ್ತುಗಳ ಬೆಲೆ ಮತ್ತೆ ಗಗನಮುಖಿಯಾಗಿದೆ. ಇದು ಜನರ ಕೈಸುಡುವಂತೆ ಮಾಡುತ್ತಿದೆ. ಆಹಾರ ವಸ್ತುಗಳ ಬೆಲೆಯಲ್ಲಿ ಆಗುತ್ತಿರುವ ಏರಿಕೆಯನ್ನು ಗಮನಿಸಿದರೆ, ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಕಡಿಮೆ ಆಗಿದೆ ಎಂದು ಕೇಂದ್ರ ಸರ್ಕಾರವು ಹೇಳಿದಾಗ ಮನಸ್ಸಿನಲ್ಲಿ ಮೂಡಿದ್ದ ಸಮಾಧಾನ ಭಾವವು ಹೆಚ್ಚು ಕಾಲ ಉಳಿಯುವುದಿಲ್ಲ ಎಂದು ಅನಿಸುತ್ತಿದೆ. ತರಕಾರಿ ಹಾಗೂ ಧಾನ್ಯಗಳ ಬೆಲೆಯಲ್ಲಿ ಆಗಿರುವ ಹೆಚ್ಚಳವು ಮುಂಗಾರು ಮಳೆಯಲ್ಲಿ ಆಗಿರುವ ವ್ಯತ್ಯಾಸದ ಮೊದಲ ಪರಿಣಾಮವೂ ಆಗಿರಬಹುದು. ಟೊಮೆಟೊ ಬೆಲೆಯು ದೇಶದ ಕೆಲವೆಡೆ ಕೆ.ಜಿ.ಗೆ ₹ 135ಕ್ಕಿಂತ ಹೆಚ್ಚಾಗಿದೆ. ಈರುಳ್ಳಿ, ಆಲೂಗಡ್ಡೆ, ಬದನೆಕಾಯಿ, ಶುಂಠಿ, ಮೆಣಸು ದುಬಾರಿ ಆಗುತ್ತಿವೆ. ಮಳೆ ಸಕಾಲದಲ್ಲಿ ಆಗದೆ ಇರುವ ಕಾರಣ ದೇಶದ ಹಲವೆಡೆ ಕೃಷಿ ಬೆಳೆಗಳಿಗೆ ಏಟು ಬಿದ್ದಿದೆ. ಇದರ ಪರಿಣಾಮವಾಗಿ ತರಕಾರಿಗಳು ಮಾರುಕಟ್ಟೆಗೆ ಅಗತ್ಯ ಪ್ರಮಾಣದಲ್ಲಿ ಬಂದಿಲ್ಲ. ಬೇಡಿಕೆ ಹಾಗೂ ಪೂರೈಕೆಯ ನಡುವಿನ ವ್ಯತ್ಯಾಸವು ಬೆಲೆ ಏರಿಕೆಗೆ ಕಾರಣವಾಗಿದೆ. ಆದರೆ ಬೆಲೆ ಏರಿಕೆಯನ್ನು ಮುಂಗಾರು ಮಳೆ ಹಾಗೂ ಸಾಗಣೆಗೆ ಮಾತ್ರ ಸಂಬಂಧಿಸಿದ ಸಮಸ್ಯೆಯನ್ನಾಗಿ ಕಾಣಬಾರದು. ಬೆಲೆ ಏರಿಕೆಗೆ ಇಂಬು ಕೊಡುತ್ತಿರುವ ಹಲವು ಇತರ ಕಾರಣಗಳೂ ಇವೆ.



ಹಣ್ಣುಗಳು ಹಾಗೂ ತರಕಾರಿಗಳು ಹವಾಮಾನ ವೈಪರೀತ್ಯವನ್ನು ತಾಳಿಕೊಳ್ಳುವಂತೆ ಮಾಡುವ ದಿಸೆಯಲ್ಲಿ ಹೆಚ್ಚಿನ ಸಂಶೋಧನೆಗಳ ಅಗತ್ಯ ಇದೆ

ಚೀನಾ ಹೊರತುಪಡಿಸಿದರೆ ಹಣ್ಣು ಮತ್ತು ತರಕಾರಿಗಳನ್ನು ಜಗತ್ತಿನಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವ ದೇಶ ಭಾರತ. ಇಲ್ಲಿನ ಬೆಳೆಗಳಲ್ಲಿ ಅಪಾರ ವೈವಿಧ್ಯವಿದೆ, ಬೇರೆ ಬೇರೆ ಹವಾಗುಣ ಇರುವ ಪ್ರದೇಶಗಳಲ್ಲಿ ಇವುಗಳನ್ನು ಬೆಳೆಯಲಾಗುತ್ತಿದೆ. ಇದು ದೇಶಕ್ಕೆ ಒಂದು ಅನುಕೂಲವನ್ನು ಕಲ್ಪಿಸುವಂತಿದೆ. ಒಂದು ಬೆಳೆಯು ಒಂದು ಪ್ರದೇಶದಲ್ಲಿ ವಿಫಲವಾದರೆ, ಇನ್ನೊಂದೆಡೆ ಅದು ಅಗತ್ಯ ಪ್ರಮಾಣದಲ್ಲಿ ಲಭ್ಯವಾಗಿ ದೇಶದ ಮಾರುಕಟ್ಟೆಗಳಲ್ಲಿ ಸ್ಥಿರ ಪೂರೈಕೆ ಇರುವಂತೆ ಆಗಬಹುದು. ಇದು ಸಾಧ್ಯವಾಗಬೇಕು ಎಂದಾದರೆ ಸರಕು ಸಾಗಣೆ ಹಾಗೂ ದಾಸ್ತಾನು ವ್ಯವಸ್ಥೆಯು ಚೆನ್ನಾಗಿರಬೇಕು. ಈ ವ್ಯವಸ್ಥೆಗಳು ಅತ್ಯಗತ್ಯ ಎಂಬ ಮಾತನ್ನು ದಶಕಗಳಿಂದ ಹೇಳಲಾಗುತ್ತಿದ್ದರೂ ದೇಶದ ಬಹುತೇಕ ಪ್ರದೇಶಗಳಲ್ಲಿ ಈ ಕೃಷಿ ಮೂಲಸೌಕರ್ಯದ ಕೊರತೆ ಇದ್ದೇ ಇದೆ. ಟೊಮೆಟೊ ಹಾಗೂ ಇತರ ಹಲವು ಬಗೆಯ ಹಣ್ಣುಗಳ ಸಂಗ್ರಹಕ್ಕೆ ಶೈತ್ಯಗೃಹಗಳ ಅಗತ್ಯ ತೀರಾ ಇದೆ. ಅಗತ್ಯಕ್ಕಿಂತ ಹೆಚ್ಚಿನ ಉತ್ಪಾದನೆ ಇರುವ ಸಂದರ್ಭಗಳಲ್ಲಿ ಅವುಗಳನ್ನು ಕೆಡದಂತೆ ಇರಿಸಿಕೊಳ್ಳಬೇಕಾಗುತ್ತದೆ. ಆಗ ಈ ಉತ್ಪನ್ನಗಳನ್ನು ಕೆಡದಂತೆ ರಕ್ಷಿಸಿಕೊಳ್ಳಲು ಹಾಗೂ ಅವುಗಳ ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ತರಕಾರಿ ಹಾಗೂ ಹಣ್ಣು ಪ್ರತಿವರ್ಷವೂ ಭಾರಿ ಪ್ರಮಾಣದಲ್ಲಿ ಕೊಳೆತು ಹಾಳಾಗುತ್ತಿವೆ. ಟೊಮೆಟೊ ಬೆಳೆಗೆ ಸರಿಯಾಗಿ ಬೆಲೆ ಸಿಗುತ್ತಿಲ್ಲ ಎಂದು ರೈತರು ಅದನ್ನು ರಸ್ತೆಗೆ ಚೆಲ್ಲುವುದು ಮಾಧ್ಯಮಗಳ ಮೂಲಕ ಆಗಾಗ ವರದಿಯಾಗುತ್ತಲೇ ಇರುತ್ತದೆ.

ಕೃಷಿ ಬೆಳೆಗಳು, ಅದರಲ್ಲೂ ಮುಖ್ಯವಾಗಿ ಹಣ್ಣುಗಳು ಹಾಗೂ ತರಕಾರಿಗಳು, ಹವಾಮಾನ ವೈಪರೀತ್ಯವನ್ನು ತಾಳಿಕೊಳ್ಳುವ ಮಾರ್ಗವೊಂದನ್ನು ಕಂಡುಕೊಳ್ಳುವ ಅಗತ್ಯ ಇದೆ. ಹಣ್ಣುಗಳು ಹಾಗೂ ತರಕಾರಿಗಳು ಹವಾಮಾನದ ವೈಪರೀತ್ಯಗಳಿಗೆ ಬಹಳ ಬೇಗನೆ ತುತ್ತಾಗುತ್ತಿವೆ. ಬಿಸಿ ಗಾಳಿಯ ಕಾರಣದಿಂದಾಗಿ ಟೊಮೆಟೊ ಬೆಳೆಗೆ ಮೊದಲು ಹಾನಿಯಾಯಿತು. ನಂತರದಲ್ಲಿ, ಅಕಾಲಿಕ ಮಳೆಯಿಂದಾಗಿಯೂ ಈ ಬೆಳೆ ತೊಂದರೆಗೆ ಒಳಗಾಯಿತು. ಕರ್ನಾಟಕ ಹಾಗೂ ಆಂಧ್ರಪ್ರದೇಶದಲ್ಲಿ ಟೊಮೆಟೊ ಬೆಳೆಯನ್ನು ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಮುಂಗಾರು ಮಳೆಯ ಕೊರತೆಯು ತೀವ್ರವಾದರೆ ಅಥವಾ ಅತಿವೃಷ್ಟಿ ಎದುರಾದರೆ ಎಲ್ಲ ಬಗೆಯ ಬೆಳೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಆಹಾರ ವಸ್ತುಗಳ ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸುವುದು ದೊಡ್ಡ ಸವಾಲು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈಚೆಗಷ್ಟೇ ಹೇಳಿದೆ. ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಕಷ್ಟದ ಪರಿಸ್ಥಿತಿಯನ್ನು ನಿಭಾಯಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸನ್ನದ್ಧವಾಗಿ ಇರಬೇಕು.

## ದಿನದ ಟ್ವೀಟ್

### ಸರಿಯಾದ ಕ್ರಮ




**ಬಾಟಲಿ ಅಥವಾ ಮದ್ಯವನ್ನು ಒಯ್ಯುವ ಪ್ರತಿ ವ್ಯಕ್ತಿಯೂ ನಿಯಂತ್ರಣಕ್ಕೆ ಸಿಗದ ಕುಡುಕ ಮತ್ತು ಆತ ಸಮಾಜಕ್ಕೆ ಅಪಾಯ ಉಂಟುಮಾಡುವವನು ಎಂಬ ಓಬಿರಾಯನ ಕಾಲದ ನಂಬಿಕೆಯಿಂದ ನಾವು ಹೊರಬರಬೇಕು. ಮೆಟ್ರೊದಲ್ಲಿ ಎರಡು ಬಾಟಲಿಗಳನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಿರುವುದು ಸರಿಯಾದ ಕ್ರಮ. ಅಸಭ್ಯ ವರ್ತನೆ ತೋರುವವರ ಮೇಲೆ ಭದ್ರತಾ ಸಿಬ್ಬಂದಿ ಗಮನ ಇಡಲಿ.**

(ಸೀಲ್ ಆದ ಎರಡು ಮದ್ಯದ ಬಾಟಲಿಗಳನ್ನು ಪ್ರಯಾಣಿಕರು ಜೊತೆಯಲ್ಲಿ ಕೊಂಡೊಯ್ಯಲು ದೆಹಲಿ ಮೆಟ್ರೊ ಅನುಮತಿ ನೀಡಿರುವುದಕ್ಕೆ ಪ್ರತಿಕ್ರಿಯೆ)

**ಯಶೋವರ್ಧನ್ ಝಾ ಆಜಾದ್**
ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

## ಕಿಡಿನುಡಿ



**ಬೆಂಗಳೂರಿನಿಂದ ಕೂಗಳತೆ ದೂರದಲ್ಲಿರುವ, ಜೀವವೈವಿಧ್ಯ ಉಳ್ಳ ಬನ್ನೇರುಘಟ್ಟದ ಕಾಡಿನ ಕಾಂಪೌಂಡು ಬುಡಕ್ಕೇ ಟನ್‌ಗಟ್ಟಲೆ ಪ್ಲಾಸ್ಟಿಕ್ ಕಸ ಸುರಿಯಲಾಗುತ್ತಿದೆ. ನಂದಿಬೆಟ್ಟದ್ದೂ ಇದೇ ಕಥೆ. ಸುಶಿಕ್ಷಿತರೇ ಖಾಲಿ ಜಾಗ ಕಂಡಲ್ಲಿ ಕಸ ಸುರಿಯುತ್ತಿದ್ದಾರೆ. ನಗರೀಕರಣದಿಂದಾಗುತ್ತಿರುವ ಈ ವಿಕೃತಿಯನ್ನು ಸರ್ಕಾರ ಕಠಿಣ ಕಾನೂನು ಪ್ರಯೋಗಿಸಿ ತಡೆಗಟ್ಟಬೇಕು.**

**ನಾಗತಿಹಳ್ಳಿ ಚಂದ್ರಶೇಖರ,** ಚಲನಚಿತ್ರ ನಿರ್ದೇಶಕ

## 25 ವರ್ಷಗಳ ಹಿಂದೆ

ಬುಧವಾರ, 1-7-1998

- **ಕೇಂದ್ರಕ್ಕೆ ಬೆಂಬಲ: ಇಂದು ಜಯಾ ನಿರ್ಧಾರ ಸಂಭವ**

ಚೆನ್ನೈ, ಜೂನ್ 30– ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಜಯಲಲಿತಾ ಅವರು ತಮ್ಮ ಪಕ್ಷದ ಲೋಕಸಭಾ ಸದಸ್ಯರ ಸಭೆಯನ್ನು ನಾಳೆ ಇಲ್ಲಿ ತಮ್ಮ ನಿವಾಸದಲ್ಲಿ ಕರೆದಿದ್ದಾರೆ.

ಜೂನ್ 27ರಂದು ನಡೆದ, ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಭಾರತೀಯ ಜನತಾ ಪಕ್ಷ ನೇತೃತ್ವದ ಪಾಲುದಾರರ ಸಮನ್ವಯ ಸಮಿತಿ ಸಭೆಯಲ್ಲಿ ಜಯಲಲಿತಾ ಹಾಗೂ ಅವರ ಮಿತ್ರಕೂಟ ಭಾಗವಹಿಸದೇ ಇರುವ ಹಿನ್ನೆಲೆಯಲ್ಲಿ, ನಾಳಿನ ಸಭೆ ಮಹತ್ವ ಪಡೆದುಕೊಂಡಿದೆ.

ನಾಳೆ ಸಂಸತ್ ಸದಸ್ಯರೊಡನೆ ನಡೆಸಲಿರುವ ಸಭೆಯ ಮಾತುಕತೆಯ ಫಲಿತಾಂಶ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಸರ್ಕಾರದ ಮೇಲೆ ನೇರ ಪರಿಣಾಮ ಬೀರಲಿದೆ. ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಎಐಎಡಿಎಂಕೆ ಔಪಚಾರಿಕವಾಗಿ ವಾಪಸ್ ಪಡೆಯುವಂಥ ಪ್ರಮುಖ ತೀರ್ಮಾನ ತೆಗೆದುಕೊಳ್ಳುವ ನಿರೀಕ್ಷೆಯಿದೆ ಎಂದು ಜಯಲಲಿತಾ ನೇತೃತ್ವದ ಮಿತ್ರಕೂಟದ ಮೂಲಗಳು ತಿಳಿಸಿವೆ.

- **ಕಳಪೆ ಬೀಜ, ಕೀಟನಾಶಕ ಅತ್ಯುಗ್ರ ಶಿಕ್ಷೆಗೆ ಸಲಹೆ**

ಬೆಂಗಳೂರು, ಜೂನ್ 30– ಕಳಪೆ ಬೀಜ ಮತ್ತು ಕ್ರಿಮಿನಾಶಕಗಳ ಮಾರಾಟಗಾರರ ವಿರುದ್ಧ ಮರಣದಂಡನೆ ಹೊರತುಪಡಿಸಿ ಬೇರೆ ಯಾವ ರೀತಿಯಲ್ಲಿ ಉಗ್ರ ಕ್ರಮ ಕೈಗೊಳ್ಳಲು ಸಾಧ್ಯ ಎಂಬುದರ ಬಗ್ಗೆ ಕೀಟನಾಶಕಗಳು ಮತ್ತು ಬೀಜಗಳ ಕಾಯ್ದೆಗೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವವೊಂದನ್ನು ಸಲ್ಲಿಸುವುದಾಗಿ ಕೃಷಿ ಸಚಿವ ಸಿ.ಬೈರೇಗೌಡ ಇಂದು ಇಲ್ಲಿ ತಿಳಿಸಿದರು.

ಕಳಪೆ ಬೀಜ ಮತ್ತು ಕ್ರಿಮಿನಾಶಕಗಳ ಮಾರಾಟಗಾರರ ವಿರುದ್ಧ ಕ್ರಮಕ್ಕೆ ಕೇಂದ್ರದ ಹಾಲಿ ಕಾಯ್ದೆಗೆ ನಿರೀಕ್ಷಿತ ಶಕ್ತಿ ಇಲ್ಲ ಎಂದರು.

## 50 ವರ್ಷಗಳ ಹಿಂದೆ

ಭಾನುವಾರ, 1-7-1973

- **ಶಾಂತಿಯುತ, ಯಶಸ್ವಿ ಬೆಂಗಳೂರು ಬಂದ್**

ಬೆಂಗಳೂರು, ಜೂನ್ 30– ಬಸ್ಸುಗಳ ಮೇಲೆ ಕಲ್ಲೆಸೆತಗಳನ್ನು ಬಿಟ್ಟರೆ ಇಂದು ಬೆಂಗಳೂರು ನಗರ ಶಾಂತಿಯುತವಾಗಿ ಬಂದ್ ಆಚರಿಸಿ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿತು.

ಸಂಜೆಯ ಹೊತ್ತಿಗೆ ಸಂಸತ್‌ನ ಕಾಂಗ್ರೆಸ್ ಸದಸ್ಯ ಡಿ.ಬಿ. ಚಂದ್ರೇಗೌಡ, ವಿಧಾನಸಭೆಯ ಕಮ್ಯುನಿಸ್ಟ್ ಸದಸ್ಯ ಎಂ.ಎಸ್. ಕೃಷ್ಣನ್, ಜನತಾ ಪಕ್ಷದ ಟಿ.ಆರ್. ಶಾಮಣ್ಣ ಹಾಗೂ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಅವರೂ ಸೇರಿ 150 ಮಂದಿಯನ್ನು ಪೊಲೀಸರು ನಿಷೇಧಾಜ್ಞೆ ಕಾರಣ ಬಂಧಿಸಿದರು.

ಬಿಟಿಎಸ್ ಬಸ್ ಒಂದರಲ್ಲಿ ಪ್ರಯಾಣ ಮಾಡುತ್ತಿದ್ದ ಮಹಿಳೆಯೊಬ್ಬರಿಗೆ ಕಲ್ಲೊಂದು ಕಣ್ಣಿಗೆ ಬಿದ್ದು ಆಕೆ ಕಣ್ಣನ್ನು ಕಳೆದುಕೊಂಡ ವಿಷಾದಕರ ಘಟನೆ ನಡೆಯಿತು.

- **ಕಾರು ಬೆಲೆಗಳಲ್ಲಿ ತುಸು ಏರಿಕೆ**

ನವದೆಹಲಿ, ಜೂನ್ 30– ಪ್ರೀಮಿಯರ್ ಪ್ರೆಸಿಡೆಂಟ್ ಹಾಗೂ ಸ್ಟ್ಯಾಂಡರ್ಡ್ ಕಾರುಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿರುವುದಾಗಿ ಸರ್ಕಾರ ಪ್ರಕಟಿಸಿದೆ.

ಪ್ರೀಮಿಯರ್ ಪ್ರೆಸಿಡೆಂಟ್ ಕಾರಿನ ಬೆಲೆ 223 ರೂಪಾಯಿ ಹೆಚ್ಚಾಗಿದೆ. ಈಗ ಅದರ ಬೆಲೆ 16,679 ರೂಪಾಯಿ. ಸ್ಟ್ಯಾಂಡರ್ಡ್ ಹೆರಾಲ್ಡ್ ಮತ್ತು ಸ್ಟ್ಯಾಂಡರ್ಡ್ ಗಜೆಲ್ ಕಾರುಗಳ ಬೆಲೆ ಒಂದಕ್ಕೆ 127 ರೂಪಾಯಿ ಹೆಚ್ಚಾಗಿದೆ. ಅವೆರಡರಲ್ಲಿ ಈಗ ಯಾವುದನ್ನು ಕೊಳ್ಳಬೇಕಾದರೂ 16,666 ರೂಪಾಯಿ ಆಗುತ್ತದೆ. ಅಂಬಾಸಡರ್ ಕಾರಿನ ಬೆಲೆ ಬದಲಾಗಿಲ್ಲ. ಅದರ ಬೆಲೆ 17,170 ರೂಪಾಯಿಯೇ ಇದೆ.

ಸಮಾಜದ ಬದಲಾದ ಆದ್ಯತೆಗಳು ವೈದ್ಯರ ಆದ್ಯತೆಗಳನ್ನೂ ಬದಲಿಸುತ್ತಿವೆ

# ವೈದ್ಯಕೀಯ ಶಿಕ್ಷಣ ಎತ್ತ ಸಾಗುತ್ತಿದೆ?



ವಿಶ್ಲೇಷಣೆ

**ಡಾ. ಎಚ್.ಎಸ್.ಅನುಪಮಾ**

**ಈ** ಬಾರಿಯ ರಾಷ್ಟ್ರೀಯ ವೈದ್ಯಕೀಯ ಅರ್ಹತಾ ಪ್ರವೇಶ ಪರೀಕ್ಷೆಯ (ನೀಟ್) ಫಲಿತಾಂಶವನ್ನು ಗಮನಿಸಿರುತ್ತೀರಿ. ಪರೀಕ್ಷೆ ಬರೆದ 20.36 ಲಕ್ಷ ಯುವಜನರಲ್ಲಿ 11.46 ಲಕ್ಷ ಮಂದಿ ಅರ್ಹತೆ ಗಳಿಸಿದರು. ಕಷ್ಟಕುಲಗಳ, ಬಡತನದ ಮನೆಗಳ ಮಕ್ಕಳು ಹಣ, ಪ್ರಭಾವವಿಲ್ಲದಿದ್ದರೂ ಸ್ವಯಂ ಪರಿಶ್ರಮದಿಂದ ಉತ್ತಮ ರ್‍ಯಾಂಕ್ ಗಳಿಸಿರುವ ಸುದ್ದಿ-ತುಣುಕುಗಳು ಕೆಳವರ್ಗಗಳ ವಿದ್ಯಾರ್ಥಿಗಳಲ್ಲಿ ಭರವಸೆ, ಕನಸುಗಳನ್ನು ಬಿತ್ತಿವೆ. ಆದರೆ ಸೀಟು ಹಂಚಲು ರೂಪಿಸಿದ ರ್‍ಯಾಂಕಿಂಗ್ ವ್ಯವಸ್ಥೆಯೇ ಏಣಿಶ್ರೇಣಿ, ಮೇಲರಿಮೆ, ಕೀಳರಿಮೆಗಳನ್ನು ಸೃಷ್ಟಿಸಿರುವುದು ಗಾಬರಿ ಹುಟ್ಟಿಸುವಂತಿದೆ.

ನೀಟ್‌ನಲ್ಲಿ ಅರ್ಹತೆ ಗಳಿಸದವರ ಪಾಲಕರಲ್ಲಿ ನಿರಾಸೆ, ಬೇರೆ ದಾರಿ ಅರಸುವ ಅನಿವಾರ್ಯ ಉಂಟಾಗಿದೆ. ಅರ್ಹತೆ ಪಡೆದವರ ಕೆಲ ಕುಟುಂಬಗಳಲ್ಲಿ ಮೊದಲ ಬಾರಿ ಡಾಕ್ಟರಾಗಲಿರುವ ತಮ್ಮ ಕುಟುಂಬ ಸದಸ್ಯರ ಬಗ್ಗೆ ಹೆಮ್ಮೆ, ನಿರೀಕ್ಷೆ ತುಂಬಿಕೊಂಡಿದೆ. ಕೆಲವರು ತಮ್ಮ ವರ್ಗ, ಜಾತಿ, ಸಿರಿವಂತಿಕೆಯ ಗರ್ವಕ್ಕೆ ತಕ್ಕಂತೆ ಮಕ್ಕಳಿಗೆ ಮೆಡಿಕಲ್ ಸೀಟು ಸಿಕ್ಕಿತೆಂದು ಹಿಗ್ಗಿದ್ದಾರೆ. ಸರ್ಕಾರಿ ಸೀಟು ಸಿಗದಿದ್ದರೇನು, ಕ್ಯಾಪಿಟೇಷನ್ ಕೊಟ್ಟಾದರೂ ಮಕ್ಕಳು 'ಡಾ.' ಆಗಬೇಕೆಂದು ಸೈಟು, ಬಂಗಾರ ಮಾರಿ ಸಿದ್ಧರಾದವರಿದ್ದಾರೆ. ದುಡ್ಡಿನ ರಾಶಿಯ ಮೇಲೆ ಕುಳಿತವರಿಗೆ ಸೀಟಿನ ಚಿಂತೆಯಿಲ್ಲ. ಇವೆಲ್ಲದರ ನಡುವೆ ಜನಸೇವೆ ಮಾಡಲೆಂದೇ ವೈದ್ಯರಾಗುವ, ವೈದ್ಯರನ್ನಾಗಿಸುವ ಕನಸು ಕಂಡವರು ಎಷ್ಟಿರಬಹುದು ಎನ್ನುವುದು ನಮ್ಮ ಊಹೆಗೆ ಬಿಟ್ಟದ್ದು.

ಭಾರತದಲ್ಲಿ ಸುಮಾರು 700 ಮೆಡಿಕಲ್ ಕಾಲೇಜುಗಳಿವೆ. ಅತಿಹೆಚ್ಚು (68) ಕಾಲೇಜುಗಳಿರುವ ಕರ್ನಾಟಕದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯಿಂದ (ಎಂಸಿಐ) ಮಾನ್ಯತೆ ಪಡೆದ 21 ಸರ್ಕಾರಿ ಕಾಲೇಜುಗಳಿವೆ. ಮೊದಲ ಸರ್ಕಾರಿ ಮೆಡಿಕಲ್ ಕಾಲೇಜು ಮೈಸೂರಿನಲ್ಲಿ (1924) ಶುರುವಾಯಿತು. ನಂತರ ಬೆಂಗಳೂರು (1955), ಹುಬ್ಬಳ್ಳಿ (1957), ಬಳ್ಳಾರಿಯಲ್ಲಿ (1961) ಶುರುವಾದವು. ಅದಾದ ಮೇಲೆ 40 ವರ್ಷ ಒಂದೇ ಒಂದು ಹೊಸ ಸರ್ಕಾರಿ ಮೆಡಿಕಲ್ ಕಾಲೇಜೂ ತೆರೆಯಲಿಲ್ಲ. ಆ ಅವಕಾಶವನ್ನು ಖಾಸಗಿಯವರು ಬಳಸಿಕೊಂಡರು. ಜಾತಿ, ಧರ್ಮ, ಪಕ್ಷ, ರಾಜಕಾರಣಿ, ಸ್ವಾಮಿಯ ಹೆಸರಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳು ಪುತುಪುತನೆದ್ದವು. ಹೊಸಹೊಸ ಕಾಲೇಜುಗಳು ಈಗಲೂ ಆರಂಭವಾಗುತ್ತಲೇ ಇವೆ. ಅದರ ಜೊತೆಗೆ ಪ್ರತಿ ಜಿಲ್ಲೆಗೊಂದು ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪಿಸುವ ಗುರಿಯಿಂದ 17 ಹೊಸ ಸರ್ಕಾರಿ ಮೆಡಿಕಲ್ ಕಾಲೇಜುಗಳು ಆರಂಭವಾಗಿವೆ.

ಆಗಸ್ಟ್ 2022ರ ಮಾಹಿತಿಯಂತೆ, ದೇಶದಾದ್ಯಂತ 48,028 ಸರ್ಕಾರಿ ಸೀಟುಗಳು, 44,765 ಖಾಸಗಿ ಸೀಟುಗಳು (ಒಟ್ಟು 92,793) ನೀಟ್ ಬರೆದವರಿಗೆ ಲಭ್ಯವಿವೆ (ಏಮ್ಸ್, ಜಿಪ್ಮರ್, ಸಶಸ್ತ್ರ ಸೇನಾಪಡೆಗಳ ಮೆಡಿಕಲ್ ಕಾಲೇಜು, ನಿಮ್ಹಾನ್ಸ್, ಇಎಸ್‌ಐನಂತಹ ಸ್ವಾಯತ್ತ ಸಂಸ್ಥೆಗಳಲ್ಲಿ ಮತ್ತು ಡೀಮ್ಡ್-ಟು-ಬಿ ಯೂನಿವರ್ಸಿಟಿಗಳಲ್ಲಿ 28,920 ಸರ್ಕಾರಿ, 17,915 ಖಾಸಗಿ ಸೀಟುಗಳಿವೆ. ಅದಕ್ಕೆ ಅವರದೇ ಪರೀಕ್ಷೆ ಬರೆಯಬೇಕು). ಕರ್ನಾಟಕದ 10,395 ಮೆಡಿಕಲ್ ಸೀಟುಗಳಲ್ಲಿ 21 ಸರ್ಕಾರಿ ಮೆಡಿಕಲ್ ಕಾಲೇಜುಗಳ 3,200ರಷ್ಟು ಸೀಟುಗಳು ಲಭ್ಯವಿವೆ. ಉಳಿದವು ಖಾಸಗಿ ಮತ್ತು ಸ್ವಾಯತ್ತ ವಿದ್ಯಾಲಯಗಳಲ್ಲಿವೆ.

ಭಾರತದಾದ್ಯಂತ 1.39 ಲಕ್ಷದಷ್ಟು ವೈದ್ಯರು ಪ್ರತಿ ವರ್ಷ ಹೊರಬರುತ್ತಾರೆ. ಅಷ್ಟಾದರೂ ಗ್ರಾಮೀಣ ಪ್ರದೇಶಗಳಿಗೆ, ಬಡವರಿಗೆ ಆರೋಗ್ಯ ಸೇವೆ ನೀಡಲು ವೈದ್ಯರಿಲ್ಲ ಎಂಬ ಕೂಗು ಕೇಳಿಬರುತ್ತಿದೆ. ಹೀಗೇಕೆ?

ಸೇವಾಕ್ಷೇತ್ರದಿಂದ ಉದ್ಯಮದ ಮಟ್ಟಕ್ಕಿಳಿದಿರುವ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯ ಆಳ-ಅಗಲ ಅರಿತರೆ ಇದಕ್ಕೆ ಕಾರಣಗಳು ಸ್ಪಷ್ಟವಾಗುತ್ತವೆ. ಮೊದಲೆಲ್ಲ ವೈದ್ಯರಾಗಲು ರಾತ್ರಿ ಹಗಲೆನ್ನದೆ ರೋಗಿಗಳನ್ನು ನೋಡಲು ಸಿದ್ಧರಿರುವ, ರಕ್ತ, ಕೀವಿಗೆ ಹೇಸದ, ಸೇವಾ ಮನೋಭಾವವಿರುವ ವ್ಯಕ್ತಿತ್ವ ಬೇಕು ಎಂಬ ನಿರೀಕ್ಷೆಯಿತ್ತು. ಈಗ ವೈದ್ಯಕೀಯ ಎಂದರೆ, ಅತಿ ಸ್ಪರ್ಧಾತ್ಮಕವಾಗಿ ಗೆಲ್ಲಬೇಕಿರುವ, ಅತಿ ಹೆಚ್ಚು ಭದ್ರತೆ, ಅವಕಾಶ, ಗಳಿಕೆ, ಗೌರವ ತಂದುಕೊಡುವ ಉದ್ಯೋಗ ಎನಿಸಿಕೊಂಡಿದೆ. ರೋಗಿಗಳಿಲ್ಲಿ ಗ್ರಾಹಕರು. ಫಾರ್ಮಾ ಕಂಪನಿಗಳ ಪ್ರಾಡಕ್ಟ್‌ಗಳನ್ನು ಜನರಿಗೆ ಮುಟ್ಟಿಸಲು ವೈದ್ಯರು, ದಾದಿಯರು ಮತ್ತು ಆಸ್ಪತ್ರೆಗಳು ಉಪಕರಣಗಳಷ್ಟೇ.

ಅತಿ ಶ್ರೇಣೀಕೃತ ವ್ಯವಸ್ಥೆಯಾದ ವೈದ್ಯಕೀಯ ಶಿಕ್ಷಣವು ಹೆಚ್ಚು ಖಾಸಗೀಕರಣಗೊಂಡಿದೆ. ಸರ್ಕಾರಿ ಸೀಟುಗಳ ಮೂರು ಪಟ್ಟು ಅವಕಾಶ ಖಾಸಗಿ ಕಾಲೇಜುಗಳಲ್ಲಿದೆ. ಖಾಸಗಿ ಕಾಲೇಜುಗಳ ಶೇ 25ರಷ್ಟು ಸೀಟುಗಳನ್ನು ಸರ್ಕಾರಿ ಕೋಟಾದಲ್ಲಿ ಭರ್ತಿ ಮಾಡುತ್ತಾರೆ. ಅಲ್ಲಿನ ದುಬಾರಿ ಫೀಸು ತೆತ್ತು ಸರ್ಕಾರಿ ಸೀಟಿನ ವಿದ್ಯಾರ್ಥಿಗಳು ಓದಬೇಕು. ಉಳಿದ ಶೇ 75ರಷ್ಟು ಸೀಟುಗಳಿಗೆ ಪ್ರವೇಶ ಪಡೆಯಲು ಇರಬೇಕಾದ ಮುಖ್ಯ ಅರ್ಹತೆ ಹಣ.

ಆಯಾ ಕಾಲೇಜಿನ ನಿಯಮಗಳಿಗೆ ತಕ್ಕಂತೆ ₹ 80 ಲಕ್ಷದಿಂದ ಒಂದೆರಡು ಕೋಟಿಯತನಕ ಬೇಕಾಗುತ್ತದೆ. ನಂತರ ಐದೂವರೆ ವರ್ಷದ ಓದಿನ ಖರ್ಚು ನಿಭಾಯಿಸಿ, ಬಳಿಕ ದುಬಾರಿ ಬೆಲೆಗೆ ಪಿ.ಜಿ. ಸೀಟು ಪಡೆಯಬೇಕು. ಅದನ್ನೂ ಕ್ಯಾಪಿಟೇಷನ್ ಕೊಟ್ಟೇ ಪಡೆಯುವುದಾದರೆ ಮೂರ್ನಾಲ್ಕೈದು ಕೋಟಿ ಖರ್ಚು ಮಾಡಿ ಎಂಡಿ/ಎಂಎಸ್ ಪಡೆಯಬೇಕು. ಅಂದರೆ ತಜ್ಞವೈದ್ಯರಾಗಲು ಕನಿಷ್ಠ 9-10 ವರ್ಷ ಮತ್ತು 7-8 ಕೋಟಿ ರೂಪಾಯಿ ಬೇಕು. ಯಾವ ತಾಯ್ತಂದೆಯಾದರೂ ಜನಸೇವೆ ಮಾಡಲಿ ಎಂದು ಇಷ್ಟು ಹಣ ಸುರಿದು ಮಕ್ಕಳನ್ನು ಓದಿಸುತ್ತಾರೆಯೇ? ಅತ್ಯಾಧುನಿಕ ಆಸ್ಪತ್ರೆಗಳಲ್ಲಿ, ಸಿರಿವಂತರ ನಡುವೆ ಕಲಿತ ಆ ಯುವವೈದ್ಯರು ಅತಿ ಕಡಿಮೆ ಸೌಲಭ್ಯವಿರುವ, ಕಡಿಮೆ ಆದಾಯದ ಗ್ರಾಮೀಣ, ಸರ್ಕಾರಿ ಕೆಲಸಗಳಿಗೆ ಹೋಗಲು ಇಚ್ಛಿಸಿಯಾರೇ? ಹೀಗೆ ವೈದ್ಯಕೀಯ ಶಿಕ್ಷಣವನ್ನು ದುಬಾರಿ ವ್ಯವಹಾರವನ್ನಾಗಿಸಿರುವ ವ್ಯವಸ್ಥೆ ಒಂದೆಡೆ; ವೈದ್ಯರು ಉದಾರಿಗಳೂ ಉದಾತ್ತ ಗುಣದವರೂ ಸೇವಾಮನೋಭಾವ ಇರುವವರೂ ಆಗಿರಬೇಕೆಂದು ಬಯಸುವ ಸಮಾಜ ಇನ್ನೊಂದೆಡೆ.



ಕೆಲ ವರ್ಷಗಳ ಹಿಂದಿನತನಕ ಮಕ್ಕಳ ತಜ್ಞರು, ಸರ್ಜರಿ, ಸ್ತ್ರೀರೋಗ, ಎಲುಬುಕೀಲು, ಹೃದ್ರೋಗ ತಜ್ಞತೆಗಳು ಬಹುಬೇಡಿಕೆಯ ಸ್ನಾತಕೋತ್ತರ ಪದವಿಗಳಾಗಿದ್ದವು. ಈಗ ಅತಿಹೆಚ್ಚು ಡಿಮ್ಯಾಂಡ್ ಇರುವುದು ಚರ್ಮರೋಗ ತಜ್ಞರಾಗಲು! ಜೀವನ್ಮರಣದ ಪ್ರಶ್ನೆ ಅಲ್ಲದಿದ್ದರೂ 'ಚೆಂದ' ಕಾಣುವುದು ಜನರ ಪ್ರಾಥಮಿಕ ಆದ್ಯತೆಯಾಗಿದೆ. ಮಾರುಕಟ್ಟೆಯ ವ್ಯಾಖ್ಯಾನಕ್ಕೆ ತಕ್ಕಂತೆ ಜನರನ್ನು ಚೆಲುವ ಚೆಲುವೆಯರನ್ನಾಗಿಸಲು ವೈದ್ಯಕೀಯ ರಂಗ ಟೊಂಕಕಟ್ಟಿ ನಿಂತಿದೆ! ಈ ಕಾಲದ ಮೌಲ್ಯಗಳ ವೈರುಧ್ಯಕ್ಕೆ, ಆಷಾಢಭೂತಿತನಕ್ಕೆ, ಸಮಾಜದ ಬದಲಾದ ಆದ್ಯತೆಗಳು ವೈದ್ಯರ ಆದ್ಯತೆಗಳನ್ನೂ ಬದಲಿಸುತ್ತಿವೆ ಎನ್ನಲಿಕ್ಕೆ ಇದಕ್ಕಿಂತ ಉದಾಹರಣೆ ಬೇಕೇ?

ಮೆಡಿಕಲ್ ಪ್ರವೇಶ ಪಡೆಯುವುದು ಅತ್ಯಂತ ಹೆಗ್ಗಳಿಕೆಯ ವಿಷಯ ಎಂಬಂತೆ ಮಾಧ್ಯಮಗಳ ಮೂಲಕ ಬಿಂಬಿಸಲಾಗುತ್ತಿದೆ. ಹೀಗೆ ಶುರುವಾಗುವ ಮೆಡಿಕಲ್ ಹೈಪ್, 'ಅಪರೂಪದಲ್ಲಿ ಅಪರೂಪದ ಅವಕಾಶ ಪಡೆದವರು ನಾವು' ಎಂಬ ಅಹಮನ್ನು ವೈದ್ಯ ವಿದ್ಯಾರ್ಥಿಗಳಲ್ಲಿ ಬೆಳೆಸುತ್ತದೆ. ವೈದ್ಯರಾದರೂ ಅದು ಮುಂದುವರಿಯುತ್ತದೆ.

ಅಹಂ ನಿರಸನ ಅಷ್ಟೇನೂ ಸುಲಭವಲ್ಲ. ಅದಕ್ಕೆ ನಮ್ಮನ್ನು ನಿರಂತರವಾಗಿ ದಿವ್ಯಕ್ಕೆ ಒಡ್ಡಿಕೊಳ್ಳಬೇಕು. ರೋಗಿಗಳಂತೆ ತಾವೂ ಮರಣಾಧೀನರೇ ವಿನಾ ಸರ್ವ-ಶಕ್ತರಲ್ಲ ಎಂಬ ಪ್ರಜ್ಞಾ (ವಿನಯ), ಅಸಹಾಯಕತೆಯಲ್ಲಿ ಇರುವವರಿಗೆ ತನ್ನ ಬಳಿ ಸಾಧ್ಯವಿರುವ ಸಹಾಯವನ್ನೆಲ್ಲ ಮಾಡಬೇಕು ಎಂಬ ಕರುಣಾ, ಜಾತಿ, ಲಿಂಗ ಮತ್ತು ವರ್ಗಪ್ರಜ್ಞೆಗಳ ಮೀರಿದ ಸಮತಾ- ಇವೇ ಆ ದಿವ್ಯಗಳು.

'ಜನಕೆ ಸಂತಸವೀವ/ ಘನನು ನಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ
ವನಸುಮದೊಳೆನ್ನ ಜೀವನವು ವಿಕಸಿಸುವಂತೆ
ಮನವನನುಗೊಳಿಸು...' -(ಡಿವಿಜಿ)

ಎಲ್ಲಕ್ಕಿಂತ ಮುಖ್ಯವಾದದ್ದು ನಮ್ಮ 'ಗಳಿಕೆ'ಯ ದುಡ್ಡಿಗೆ ಉತ್ತರದಾಯಿತ್ವ ಆರೋಪಿಸಿಕೊಳ್ಳುವುದು. ನಮ್ಮ ಬಳಿ ಹೊಟ್ಟೆತುಂಬ ಉಂಡು ಮಿಗುವಷ್ಟು ಇದೆಯೆಂದರೆ, ಅದಕ್ಕೆ ಹಸಿದವರ ಅನ್ನ ಕಸಿದುಕೊಂಡ ಕಳಂಕ ಅಂಟಿರುತ್ತದೆ. ವೈದ್ಯರ ಯೋಚನೆ ಈ ದಿಕ್ಕಿನಲ್ಲಿ ಕೊಂಚ ಹರಿದರೂ ಸಾಕು, ತಂತಾನೇ ಅವರ ಸ್ಟ್ಯಾಂಡರ್ಡ್‌ಗಳು, ಫೀಸುಗಳು, ಚಿಕಿತ್ಸೆ- ತಪಾಸಣೆಯ ಯಾದಿಗಳು ಬದಲಾಗಿಬಿಡುತ್ತವೆ.

ಹೀಗೆ ಜನರ ಋಣಭಾರವನ್ನು ನೆನಪಿಸುವಂತಹ ಶಿಕ್ಷಣವು ವೈದ್ಯಕೀಯವಷ್ಟೇ ಅಲ್ಲ, ಎಲ್ಲ ಕ್ಷೇತ್ರಗಳಲ್ಲೂ ಅವಶ್ಯವಾಗಿದೆ. ಅದರಲ್ಲಿ ಸಮಾಜದ ಪಾತ್ರವೂ ಮಹತ್ವದ್ದಾಗಿದೆ.

ಲೇಖಕಿ: ವೈದ್ಯೆ, ಕವಲಕ್ಕಿ, ಹೊನ್ನಾವರ

## ಚುರುಮುರಿ



### ಸರ್ಕಾರಿ ಸಾಂಬಾರ್

• ಮಣ್ಣೆ ರಾಜು

'ಇವತ್ತೂ ಮೊಸರನ್ನನಾ?...' ಊಟಕ್ಕೆ ಕುಳಿತ ಶಂಕ್ರಿ ಮುಖ ಕಿವುಚಿಕೊಂಡ.

'ತರಕಾರಿ ಬೆಲೆ ಕಡಿಮೆಯಾಗುವವರೆಗೂ ಸಾಂಬಾರ್ ಮಾಡುವುದಿಲ್ಲ, ಮೊಸರು, ಮಜ್ಜಿಗೆಯೇ ಗತಿ. ಒಲ್ಲದ ಗಂಡನಂತೆ ಮೊಸರಿನಲ್ಲಿ ಕಲ್ಲು ಹುಡುಕಬೇಡಿ ಸುಮ್ನೆ ತಿನ್ನಿ...' ಸುಮಿ ಸಿಡುಕಿದಳು.

'ಅನ್ನಭಾಗ್ಯದ ಮೊದಲ ತುತ್ತಿನಲ್ಲೇ ಕಲ್ಲು ಸಿಕ್ಕಿದೆ ಎಂದು ಬಿಜೆಪಿಯವರು ಸಿಟ್ಟಿಗೆದ್ದಿದ್ದಾರೆ'.

'ಅಕ್ಕಿಗೆ ಕಲ್ಲು ಹಾಕಿದ್ದು ಬಿಜೆಪಿಯವರೇ ಅಂತ ಕಾಂಗ್ರೆಸ್‌ನವರು ಕಿಡಿಕಾರಿದ್ದಾರೆ'.

'ಕೇಂದ್ರದವರು ಅಕ್ಕಿ ಕೊಡುತ್ತಿಲ್ಲ, ರಾಜ್ಯದವರು ಬಿಡುತ್ತಿಲ್ಲ. ಎರಡೂ ಪಕ್ಷದವರು ಒಂದೇ ಅಕ್ಕಿಗೆ ಕಲ್ಲು ಹೊಡೆದುಕೊಂಡು ಕಾದಾಡುತ್ತಿದ್ದಾರೆ'.

'ಕೊಟ್ಟ ಮಾತಿನಂತೆ ರಾಜ್ಯ ಸರ್ಕಾರ ಹತ್ತು ಕೆ.ಜಿ. ಅಕ್ಕಿ ಕೊಡಬೇಕಾಗಿತ್ತು'.

'ಇಲ್ಲದ ಅಕ್ಕಿಯನ್ನು ಎಲ್ಲಿಂದ ತರ್ತಾರೆ? ರಾಜ್ಯದ ಖಜಾನೆಯಲ್ಲಿ ದುಡ್ಡಿದೆಯಂತೆ, ಗೋದಾಮಿನಲ್ಲಿ ಅಕ್ಕಿ ಇಲ್ಲವಂತೆ. ಅದಕ್ಕೆ ಅಕ್ಕಿ ಬದಲು ದುಡ್ಡು ಹಂಚಲು ಸರ್ಕಾರ ತೀರ್ಮಾನ ಮಾಡಿದೆ'.

'ಒಳ್ಳೆಯದಾಯ್ತು ಬಿಡಿ'.

'ಮನೆ ಯಜಮಾನಿಗೆ ಗೃಹಲಕ್ಷ್ಮಿ ಹಣ ಕೊಡುವಂತೆ ಯಜಮಾನನಿಗೆ ಅಕ್ಕಿ ದುಡ್ಡು ಕೊಟ್ಟು ಸರ್ಕಾರ ಗಂಡಸರ ಕಷ್ಟಸುಖಕ್ಕೆ ನೆರವಾಗುತ್ತದೆ'.

'ನಿಮ್ಮ ಖರ್ಚುವೆಚ್ಚಕ್ಕೆ ಅಕ್ಕಿ ದುಡ್ಡು ಕೊಡ್ತಿಲ್ಲಾರೀ, ತರಕಾರಿ ಬೆಲೆ ಕಮ್ಮಿ ಆಗೋವರೆಗೂ ಸಾಂಬಾರಿಗೆ ಸಹಾಯ ಆಗಲೆಂದು ಸರ್ಕಾರ ದುಡ್ಡು ಕೊಡ್ತಿದೆ'.

'ಆಗಲಿಬಿಡು, ಅಕ್ಕಿ ಜೊತೆಗೆ ತರಕಾರಿ ನೆರವಿನ ಯೋಜನೆಯನ್ನು ಸರ್ಕಾರ ಮುಂದುವರಿಸಲಿ. ಇದೇ ರೀತಿ, ಪಾರ್ಲಿಮೆಂಟ್ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಮತ್ತಷ್ಟು ಗ್ಯಾರಂಟಿಗಳನ್ನು ಘೋಷಣೆ ಮಾಡಬಹುದು' ಶಂಕ್ರಿ ಪುಳಕಿತನಾದ.

'ಹೆಚ್ಚೇನೂ ಬೇಡಾರೀ, ಕೇಂದ್ರ ಸರ್ಕಾರ ಉಚಿತವಾಗಿ ಹತ್ತು ಕೆ.ಜಿ. ಅಕ್ಕಿ ಕೊಡಲಿ, ತರಕಾರಿ ಖರೀದಿಗೆಂದು ರಾಜ್ಯ ಸರ್ಕಾರ ಹತ್ತು ಕೆ.ಜಿ. ಅಕ್ಕಿಯ ದುಡ್ಡು ಕೊಡಲಿ... ಕೇಂದ್ರದ ಅಕ್ಕಿಯ ಅನ್ನವನ್ನು ರಾಜ್ಯದ ಸಾಂಬಾರಿನಲ್ಲಿ ಕಲಸಿ ಆನಂದವಾಗಿ ಉಣ್ಣಬಹುದು...' ಎಂದಳು ಸುಮಿ.

## ಸಂಗತ

# ಎಥೆನಾಲ್: ಬೇಕು ಜನಪರ ನೀತಿ

ಪ್ರಮುಖ ಆಹಾರ ಪದಾರ್ಥವಾದ ಗುಣಮಟ್ಟದ ಅಕ್ಕಿಯನ್ನು ಎಥೆನಾಲ್ ಉತ್ಪಾದನೆಗೆ ಬಳಸುವುದು ಸರಿಯಾದ ಕ್ರಮವಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ

**ಪೆಟ್ರೋಲ್‌ಗೆ** ಎಥೆನಾಲ್ ಮಿಶ್ರಣ ಮಾಡಿ ವಾಹನಗಳಿಗೆ ಇಂಧನವಾಗಿ ಬಳಸುವುದು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಇದರಿಂದಾಗಿ ಕಚ್ಚಾ ತೈಲದ ಆಮದು ವೆಚ್ಚ ಗಣನೀಯವಾಗಿ ತಗ್ಗುತ್ತದೆ ಮತ್ತು ವಾಯುಮಾಲಿನ್ಯ ಕಡಿಮೆ ಆಗುತ್ತದೆ. ಆದರೆ ಪ್ರಮುಖ ಆಹಾರ ಪದಾರ್ಥವಾದ ಗುಣಮಟ್ಟದ ಅಕ್ಕಿಯನ್ನು ಎಥೆನಾಲ್ ಉತ್ಪಾದನೆಗೆ ಬಳಸುವುದು ಸರಿಯಾದ ಕ್ರಮವಲ್ಲ.

ರಾಜ್ಯ ಸರ್ಕಾರಗಳಿಗೆ ಅವಶ್ಯವಿರುವ ಹೆಚ್ಚುವರಿ ಅಕ್ಕಿಯನ್ನು ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ (ಒಎಂಎಸ್‌ಎಸ್) ಅಡಿಯಲ್ಲಿ ಪೂರೈಸುವುದನ್ನು ಕೇಂದ್ರ ಸರ್ಕಾರ ಏಕಾಏಕಿ ನಿಲ್ಲಿಸಿ, ಎಥೆನಾಲ್ ಉತ್ಪಾದನೆಗೆ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡುತ್ತಿರುವುದು ಆಹಾರ ಭದ್ರತಾ ಕಾಯ್ದೆಗೆ ವ್ಯತಿರಿಕ್ತವಾಗಿದೆ ಮಾತ್ರವಲ್ಲ, ಜನವಿರೋಧಿಯಾಗಿದೆ.

ಎಥೆನಾಲ್ ಉತ್ಪಾದನೆಗೆ ಕೇಂದ್ರ ಸರ್ಕಾರ 2022-23ನೇ ಆರ್ಥಿಕ ವರ್ಷದಲ್ಲಿ ಸುಮಾರು 16 ಲಕ್ಷ ಟನ್ ಉತ್ತಮ ಗುಣಮಟ್ಟದ ಅಕ್ಕಿಯನ್ನು ಬಳಸಲು ಅವಕಾಶ ಕೊಟ್ಟಿದೆ. ಖಾಸಗಿ ಕಂಪನಿಗಳಿಗೆ ಗುಣಮಟ್ಟದ ಅಕ್ಕಿಯನ್ನು ಎಥೆನಾಲ್ ಉತ್ಪಾದನೆಗೆ ಪೂರೈಸತೊಡಗಿದ್ದರಿಂದ, ಇನ್ನು ಮುಂದೆ ರಾಜ್ಯ ಸರ್ಕಾರಗಳು ಹೆಚ್ಚುವರಿ ಅಕ್ಕಿಯನ್ನು ಪಡೆಯುವುದು ಕಷ್ಟಸಾಧ್ಯ.

ಮಾನವ ಬಳಕೆಗೆ ಯೋಗ್ಯವಲ್ಲದ ಅಕ್ಕಿ, ಜೋಳದಂತಹ ಆಹಾರಧಾನ್ಯವನ್ನು ಎಥೆನಾಲ್ ಉತ್ಪಾದನೆಗೆ ಬಳಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿತ್ತು. ಆದರೆ ಕೇಂದ್ರ ಸರ್ಕಾರ 2020ರಲ್ಲಿ ಈ ಕಾನೂನಿಗೆ ತಿದ್ದುಪಡಿ ತಂದು, ಗುಣಮಟ್ಟದ ಅಕ್ಕಿಯನ್ನು ಕೂಡ ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ, ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ ಅಕ್ಕಿ ವಿತರಿಸುವ ಯೋಜನೆಗೆ ಕರ್ನಾಟಕ ಸರ್ಕಾರಕ್ಕೆ ಹೆಚ್ಚುವರಿ ಅಕ್ಕಿ ದೊರೆಯಲಿಲ್ಲ.

ಪಂಜಾಬ್, ತೆಲಂಗಾಣ, ಆಂಧ್ರಪ್ರದೇಶ ಮತ್ತು ಛತ್ತೀಸಗಢ ರಾಜ್ಯಗಳಿಂದ ಅಕ್ಕಿ ಖರೀದಿಸಲು ಸರ್ಕಾರ ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲ. ಕೆಲವು ರಾಜ್ಯಗಳು ತಮ್ಮ ಬಳಿ ಇಲ್ಲ ಎಂದು ಹೇಳಿದರೆ, ಇನ್ನುಳಿದ ರಾಜ್ಯಗಳು ಬೆಲೆ ಹೆಚ್ಚಿಗೆ ಬೇಕು ಎಂದು ಬೇಡಿಕೆ ಮಂಡಿಸಿದವು. ಹೀಗಾಗಿ, ರಾಜ್ಯ ಸರ್ಕಾರ ಜನರ ಕೈಗೆ ದುಡ್ಡು ಕೊಟ್ಟು 'ನೀವೇ ಖರೀದಿಸಿ, ಊಟ ಮಾಡಿ' ಎಂದು ಹೇಳಬೇಕಾದ ಪರಿಸ್ಥಿತಿ ಬಂದಿದೆ. ಅಕ್ಕಿಯ ಬೆಲೆ ಕೂಡ ಹೆಚ್ಚಾಗುವ ಭೀತಿ ಇದೆ.

ಎಥೆನಾಲ್ ಸರಳ ಜೈವಿಕ ಇಂಧನ. ಕಬ್ಬು, ಸಕ್ಕರೆ, ಅಕ್ಕಿ, ಗೋಧಿ, ಬಿದಿರು, ಬೆಳೆಗಳ ಹುಲ್ಲು, ಕೊಳೆತ ಅಥವಾ ಕೆಟ್ಟ ಆಹಾರಧಾನ್ಯ, ಬಯೊಮಾಸ್‌ನಿಂದ ಎಥೆನಾಲ್ ಉತ್ಪಾದಿಸಬಹುದಾಗಿದೆ.

ಕಬ್ಬು ಅಥವಾ ಸಕ್ಕರೆಯಿಂದ ಎಥೆನಾಲ್ ಉತ್ಪಾದಿಸುವುದು ಅತ್ಯಂತ ಸರಳ ಮತ್ತು ಕಡಿಮೆ ವೆಚ್ಚದ್ದಾಗಿದೆ. ದೇಶದಲ್ಲಿ ಕಬ್ಬಿನ ಬೆಳೆ ಹೆಚ್ಚಿಗೆ ಇದೆ. ಇನ್ನೂ ಹೆಚ್ಚಿಗೆ ಕಬ್ಬು ಬೆಳೆಯಲು ರೈತರು ಸಿದ್ಧರಿದ್ದಾರೆ. ದೇಶದಲ್ಲಿ ಸಕ್ಕರೆ ಉತ್ಪಾದನೆ ಅವಶ್ಯಕತೆಗಿಂತ ಬಹಳ ಹೆಚ್ಚಿಗಿದೆ. 55 ಲಕ್ಷ ಟನ್ ಸಕ್ಕರೆಯು ಗೋದಾಮುಗಳಲ್ಲಿ ಶೇಖರವಾಗಿ ಉಳಿದಿದೆ. ಪ್ರತಿ ವರ್ಷ ಈ ಪ್ರಮಾಣ ಬೆಳೆಯುತ್ತಿದೆ. ರಫ್ತು ಮಾರುಕಟ್ಟೆ ಬೇಡಿಕೆ ಕಡಿಮೆಯಾಗಿದೆ.

ಇಡೀ ಕಬ್ಬನ್ನು ನೇರವಾಗಿ ಬಳಸಿ ಎಥೆನಾಲ್ ಉತ್ಪಾದಿಸಬಹುದು. ಇದರಿಂದ ಶೇ 70ರಷ್ಟು ಎಥೆನಾಲ್ ಉತ್ಪಾದನೆಯಾಗುತ್ತದೆ. ಅಕ್ಕಿಯಿಂದ ಎಥೆನಾಲ್ ಉತ್ಪಾದಿಸುವ ವೈಜ್ಞಾನಿಕ ವಿಧಾನ ದೀರ್ಘವಾಗಿದೆ. ಇಳುವರಿ ಕೂಡ ಕಡಿಮೆ. ಆದ್ದರಿಂದಲೇ ಕೇಂದ್ರ ಸರ್ಕಾರ ಅಕ್ಕಿಯ ಬೆಲೆಯನ್ನು ಪ್ರತಿ ಕಿಲೊಗೆ ಹತ್ತು ರೂಪಾಯಿ ಕಡಿಮೆ ಮಾಡಿ ಕಂಪನಿಗಳಿಗೆ ಮಾರಾಟ ಮಾಡುತ್ತಿದೆ.

ದೇಶದಲ್ಲಿ 750 ಸಕ್ಕರೆ ಕಾರ್ಖಾನೆಗಳು ಕಾರ್ಯ-ನಿರ್ವಹಿಸುತ್ತಿವೆ. ಇವುಗಳಲ್ಲಿ ಅರ್ಧಕ್ಕೂ ಹೆಚ್ಚು ಕಾರ್ಖಾನೆಗಳು ಎಥೆನಾಲ್ ಉತ್ಪಾದನೆಯಲ್ಲಿ ತೊಡಗಿವೆ. 2025ರ ವೇಳೆಗೆ ದೇಶದ ಎಲ್ಲ ಸಕ್ಕರೆ ಕಾರ್ಖಾನೆಗಳು ಎಥೆನಾಲ್ ಉತ್ಪಾದನೆಗೆ ಸಜ್ಜಾಗುತ್ತವೆ.

ದೇಶದ ಸಹಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳಗಳು ಸಂಯುಕ್ತವಾಗಿ ಸರ್ಕಾರಕ್ಕೆ 2025ರ ವೇಳೆಗೆ ಒಟ್ಟು ಬೇಕಾಗುವ ಒಂದು ಸಾವಿರ ಕೋಟಿ ಲೀಟರ್ ಎಥೆನಾಲ್ ಪೂರೈಸಲು ಒಪ್ಪಂದ ಮಾಡಿಕೊಂಡಿವೆ. ಕರ್ನಾಟಕದಲ್ಲಿ 37 ಸಕ್ಕರೆ ಕಾರ್ಖಾನೆಗಳು ನೇರವಾಗಿ ಕಬ್ಬಿನಿಂದ ಎಥೆನಾಲ್ ಉತ್ಪಾದಿಸುತ್ತಿವೆ. ರಾಜ್ಯದ ಉಳಿದ ಕಾರ್ಖಾನೆಗಳು ಕೂಡ ಉತ್ಪಾದನೆಗೆ ಸಿದ್ಧತೆ ಮಾಡಿಕೊಳ್ಳತೊಡಗಿವೆ.



ಕಬ್ಬಿನಿಂದ ಎಥೆನಾಲ್ ಮಾತ್ರ ಉತ್ಪಾದಿಸುವ ಕಾರ್ಖಾನೆಗಳನ್ನು ಕಟ್ಟುವ ಕೆಲಸ ದೇಶದಲ್ಲಿ ಆರಂಭವಾಗಿದೆ. ರಾಜ್ಯದಲ್ಲಿ 30 ಹೊಸ ಘಟಕಗಳು ನಿರ್ಮಾಣವಾಗತೊಡಗಿವೆ. ದೇಶದಲ್ಲಿ 2025ರ ವೇಳೆಗೆ ಬಹಳಷ್ಟು ಎಥೆನಾಲ್ ಘಟಕಗಳು ಬರಲಿವೆ.

ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಗೋಧಿ, ಭತ್ತದ ಹುಲ್ಲಿನಿಂದ ಎಥೆನಾಲ್ ಉತ್ಪಾದಿಸುವ ಘಟಕಗಳು ನಿರ್ಮಾಣವಾಗತೊಡಗಿವೆ. ಹರಿಯಾಣದ ಪಾಣಿಪತ್‌ನಲ್ಲಿ ಹುಲ್ಲಿನಿಂದ ಎಥೆನಾಲ್ ಉತ್ಪಾದಿಸುವ ದೊಡ್ಡ ಘಟಕ ಕಾರ್ಯ ಆರಂಭ ಮಾಡಿದೆ. ಇದೇ ಮಾದರಿಯಲ್ಲಿ ಗ್ರಾಮೀಣ ಭಾಗದಲ್ಲಿ ಎಥೆನಾಲ್ ಉತ್ಪಾದನೆಯ ಸಣ್ಣ ಸಣ್ಣ ಘಟಕಗಳನ್ನು ಕಟ್ಟುವುದಕ್ಕೆ ಸರ್ಕಾರ ನೆರವಾಗಬೇಕು. ಇದು ಕಡಿಮೆ ವೆಚ್ಚದಲ್ಲಿ ಎಥೆನಾಲ್ ಉತ್ಪಾದನೆಯ ಸರಳ ಮಾರ್ಗವಾಗಿದೆ ಮಾತ್ರವಲ್ಲ, ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಷ್ಟಿ ಮತ್ತು ಕೃಷಿ ಚಟುವಟಿಕೆಗೆ ನೆರವಾಗುತ್ತದೆ.

ಯಾವುದೇ ಒಂದು ಯೋಜನೆ ಉತ್ತಮವಾಗಿದ್ದರೆ ಮಾತ್ರ ಸಾಲದು. ಅದನ್ನು ಸಮರ್ಪಕವಾಗಿ, ಜನಪರವಾಗಿ, ಆರ್ಥಿಕ ಶಿಸ್ತಿನಿಂದ, ಕಾಲಮಿತಿಯಲ್ಲಿ ಕಾರ್ಯರೂಪಕ್ಕೆ ತರಬೇಕು. ಹೀಗೆ ಅನುಷ್ಠಾನಕ್ಕೆ ಬಂದ ಯೋಜನೆಗಳು ಅಭಿವೃದ್ಧಿಗೆ ಮುನ್ನುಡಿ ಬರೆಯುತ್ತವೆ. ಜನರ ಅನ್ನವನ್ನು ಎಥೆನಾಲ್ ಹೊಟ್ಟೆಗೆ ಹಾಕುವುದು ಹಿಂಸೆ ಎನಿಸುತ್ತದೆ.

## ವಾಚಕರ ವಾಣಿ

### ಹಣದ ಬದಲು ಬೇರೆ ಧಾನ್ಯ ಕೊಡಿ

ರಾಜ್ಯ ಸರ್ಕಾರವು ಅನ್ನಭಾಗ್ಯ ಯೋಜನೆಯಡಿ ನೀಡಬೇಕಾದ 5 ಕೆ.ಜಿ. ಹೆಚ್ಚುವರಿ ಅಕ್ಕಿಯ ಬಾಬ್ತು ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡಲು ನಿರ್ಧರಿಸಿದೆ. ಆದರೆ ಅದೇ ಹಣದ ಬದಲು ರಾಜ್ಯದಾದ್ಯಂತ ಪ್ರಾಂತೀಯವಾಗಿ ಜನಸಾಮಾನ್ಯರು ಉಪಯೋಗಿಸುವ ಆಹಾರಧಾನ್ಯಗಳಾದ ರಾಗಿ, ಜೋಳ, ಗೋಧಿಯಂಥವುಗಳನ್ನು ನೀಡಬಹುದಲ್ಲವೇ? ಇದರಿಂದ ಇವುಗಳನ್ನು ಬೆಳೆಯುವ ರೈತರಿಗೂ ಉತ್ತಮ ಬೆಲೆ ಸಿಕ್ಕಂತಾಗುತ್ತದೆ. ಜೊತೆಗೆ ಖಾತೆಗೆ ಜಮೆ ಮಾಡುವ ಹಣವನ್ನು ಫಲಾನುಭವಿಗಳು ಇತರ ಅಗತ್ಯಗಳಿಗೆ ಬಳಸಿಕೊಳ್ಳುವುದನ್ನು ಮತ್ತು ದುರುಪಯೋಗ ಪಡಿಸಿಕೊಳ್ಳಬಹುದಾದ ಸಾಧ್ಯತೆಯನ್ನು ತಪ್ಪಿಸಿದಂತೆಯೂ ಆಗುತ್ತದೆ.

**ಸುರೇಶ್ ಹೆಬ್ಬಲಗುಪ್ಪೆ,** ಎಚ್‌.ಡಿ.ಕೋಟೆ

### ಹಂಪಿ ಕನ್ನಡ ವಿ.ವಿ: ಈಡೇರಿತೇ ಉದ್ದೇಶ?

ಕನ್ನಡ ಭಾಷೆಯ ಸರ್ವತೋಮುಖ ಅಭಿವೃದ್ಧಿಗೆಂದೇ ಸ್ಥಾಪಿಸಲಾದ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ವಿದ್ಯುತ್ ಬಿಲ್ ಕಟ್ಟಲೂ ಹಣವಿಲ್ಲ, ಕುಡಿಯಲು ನೀರಿಲ್ಲ ಮತ್ತು ತುರ್ತು ಕಾರ್ಯನಿರ್ವಹಣೆಗೆ ಬಳಸಲು ಕೂಡಾ ಕಾಸಿಲ್ಲವಂತೆ. ಮಾಧ್ಯಮದ ಈ ವರದಿಯನ್ನು ನೋಡಿದ ಕನ್ನಡಿಗರಿಗೆ ಆಘಾತವಾಗಿದೆ ಮತ್ತು ತಲೆತಗ್ಗಿಸುವಂತಾಗಿದೆ.

ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿಯನ್ನು ಯಾವುದೇ ಪಕ್ಷ ಹಿಡಿಯಲಿ, ಅದಕ್ಕೆ ಸಂಬಂಧ ಇಲ್ಲದಂತೆ ಸರ್ಕಾರವು ಕನ್ನಡದ ಬಗೆಗೆ ಒಲವು ತೋರುತ್ತದೆ. ಆದರೆ ವಾಸ್ತವದಲ್ಲಿ ಅದಕ್ಕೆ ಪೂರಕವಾದ ಬದ್ಧತೆ ಕಾಣುವುದಿಲ್ಲ. ದೇಶದ ಯಾವ ರಾಜ್ಯದಲ್ಲೂ ಪ್ರಾದೇಶಿಕ ಭಾಷೆಯ ಬಗ್ಗೆ ಇಂತಹ ನಿರ್ಲಕ್ಷ್ಯ ಕಾಣುವುದಿಲ್ಲವೇನೊ. ನಮ್ಮ ಭಾಷೆಯ ಬಗೆಗೆ ನಾವೇ ಇಂತಹ ಅನಾದರ ತೋರಿಸಿದರೆ ಕನ್ನಡ ವಿಶ್ವವಿದ್ಯಾಲಯದ ಉದ್ದೇಶ ಈಡೇರಬಹುದೇ? ಕನ್ನಡ ಬದುಕಿ ಬೆಳೆಯಬಹುದೇ?

**ರಮಾನಂದ ಶರ್ಮಾ,** ಬೆಂಗಳೂರು

### ಮರಗಳಿಲ್ಲ, ಮಳೆಯೂ ಇಲ್ಲ

ಮೋಡ ತುಂಬಿ ಬರುತ್ತಿದೆ, ಗಾಳಿಯ ಅನುಭವ, ಇನ್ನೇನು ಮಳೆ ಸುರಿಯುತ್ತದೆ ಎಂದು ಹುಬ್ಬಿಗೆ ಕೈ ಕೊಟ್ಟು ಆಕಾಶ ನೋಡುವ, ಹೊಲ, ಗದ್ದೆ ಹದ ಮಾಡಿಟ್ಟುಕೊಂಡು ಬಿತ್ತನೆಗೆ ಕಾಯುತ್ತಿರುವ ರೈತಾಪಿ ವರ್ಗ ಬಹಳಷ್ಟು ಪ್ರಮಾಣದಲ್ಲಿ ಸಿಗುವುದು ಕಿತ್ತೂರು ಕರ್ನಾಟಕ ಭಾಗದಲ್ಲಿ. ಇಲ್ಲಿ ಕೃಷಿಯು ಬಹುತೇಕ ಮಳೆಯನ್ನೇ ಅವಲಂಬಿಸಿದೆ. 'ಬರ'ದ ಅನುಭವ ಹೆಚ್ಚಾಗಿ ಈ ಭಾಗದಲ್ಲಿ ಕಾಣಸಿಗಲು, ತುಂಬಿ ಬರುವ ಮೋಡದಿಂದ ಮಳೆ ಸುರಿಯದಿರಲು ಕಾರಣ ಇಷ್ಟೇ, ಈ ಭಾಗದಲ್ಲಿ ಮರಗಳ ಸಂಖ್ಯೆ ಕಡಿಮೆ. ಇದ್ದ ಮರಗಳನ್ನು ರೈತರು ಬೆಳೆಯ ನೆಪದಲ್ಲಿ, ಇತರರು ಕಾಮಗಾರಿ ನೆಪದಲ್ಲಿ ಕಡಿದಿದ್ದಾರೆ (ಉದಾಹರಣೆಗೆ, ಕುಂದಗೋಳ ತಾಲ್ಲೂಕಿನ ನನ್ನ ಗ್ರಾಮ ಯರಗುಪ್ಪಿಯ ರೈತರ ಜಮೀನಿನಲ್ಲಿ ಅಬ್ಬಾ ಎಂದರೆ ಒಂದೊಂದು ಮರ ಕಾಣಸಿಗುತ್ತದೆ).

ಮರಗಳನ್ನು ಬೆಳೆಸುವ ಪ್ರಯತ್ನ ಈ ಭಾಗದಲ್ಲಿ ಭಗೀರಥ ಯತ್ನದಂತೆ. ಮರಗಳು ಸಮೃದ್ಧಿಯಾಗಿ ಬೆಳೆದರೆ ಮಾತ್ರ ಮೋಡವನ್ನು ಆಕರ್ಷಿಸಿ ಮಳೆ ತರುತ್ತವೆ. ಇನ್ನು ಅರಣ್ಯ ಇಲಾಖೆ ರಸ್ತೆಬದಿ ನೆಟ್ಟಿರುವ ಗಿಡಗಳನ್ನು ದೇವರೇ ಕಾಯಬೇಕು. ಈ ಭಾಗದಲ್ಲಿ ಅರಣ್ಯವನ್ನು ಕಾಪಾಡುವುದು, ಮರಗಳನ್ನು ಬೆಳೆಸುವ ಕಾರ್ಯ ವೇಗ ಪಡೆದರೆ ಮುಂದಿನ ಪೀಳಿಗೆ ಬರದ ಛಾಯೆಯಿಂದ ತಪ್ಪಿಸಿಕೊಳ್ಳಬಹುದು. ಇಲಾಖೆ ಮೈ ಕೊಡವಿ ಎದ್ದು ಈ ಭಾಗದ ಜನರಿಗೆ ಅರಣ್ಯದ ಮಹತ್ವವನ್ನು ಮನದಟ್ಟು ಮಾಡಿಕೊಡಬೇಕು.

**ಬಸನಗೌಡ ಪಾಟೀಲ,** ಯರಗುಪ್ಪಿ

### ಹಾಕಬೇಕು ಬರೆ!

ಅಲ್ಲಿಷ್ಟು ಇಲ್ಲಿಷ್ಟು
ಸಿಕ್ಕಷ್ಟು ಕೆರೆ!
ನುಂಗು ಕೆರೆ
ಮಾಡಿಕೋ ನಿನ್ನ ಹೆಸರಿಗೆ
ನೂರಾರು ಎಕರೆ
ಎನ್ನುವ ಲಂಚಕೋರರಿಗೆ
ಲೋಕಾಯುಕ್ತ
ಹಾಕಬೇಕು ಬರೆ.

**ಎಲ್.ಎನ್.ಪ್ರಸಾದ್,** ತುರುವೇಕೆರೆ

### ಕುಟುಂಬದ ಜತೆ ದೇಶದ ಸಮೀಕರಣ ಸಲ್ಲ

ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಬಗೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಭೋಪಾಲ್‌ನಲ್ಲಿ ಮಾತನಾಡಿದ ಮೇಲೆ ರಾಜನಾಥ್ ಸಿಂಗ್ ಅವರು ರಾಜಸ್ಥಾನದಲ್ಲಿ ಅದರ ಕೆಲವು ಅಂಶಗಳನ್ನು ಪುನರುಚ್ಚರಿಸಿ-ದ್ದಾರೆ. ಬಿಜೆಪಿಯು ಮೋದಿಯವರ ಆಡಳಿತಾವಧಿ ಒಂಬತ್ತು ವರ್ಷ ಪೂರೈಸಿರುವುದನ್ನು ಸಂಭ್ರಮಿಸುವ ನೆಪದಲ್ಲಿ ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆ ಹಾಗೂ ಮುಂದಿನ ಲೋಕಸಭಾ ಚುನಾವಣೆಗೆ ತಯಾರಾಗುತ್ತ ಜನರನ್ನು ಧ್ರುವೀಕರಿಸಬಹುದಾದ ವಿಷಯಗಳಿಗಾಗಿ ಅನ್ವೇಷಣೆ ಆರಂಭಿಸಿರುವಂತಿದೆ. ಪೌರತ್ವ ತಿದ್ದುಪಡಿ ಕಾನೂನಿನ (ಸಿಎಎ) ವಿಷಯದಲ್ಲಿ ಏನಾಯಿತು ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ಡಿಸೆಂಬರ್ 2019ರಿಂದ ಮಾರ್ಚ್ 2020ರ ಅವಧಿಯಲ್ಲಿ ಈ ಕಾರಣಕ್ಕಾಗಿ ಹಲವರು ಸಾವಿಗೀಡಾದರು. ಈಗಲೂ ಸಿಎಎ ಬಗ್ಗೆ ನಿಯಮಗಳನ್ನು ರೂಪಿಸಲಾಗದೆ ಅದನ್ನು ಲಾಗೂ ಮಾಡಲಾಗಿಲ್ಲ.

ದೇಶವನ್ನು ಕುಟುಂಬದ ಜತೆ ಸಮೀಕರಿಸುವುದು ಸರಿಯಾಗಲಾರದು. ಕ್ರಿಮಿನಲ್, ಸಿವಿಲ್ ವಿಷಯಗಳಿಗೆ ಸೆಕ್ಯುಲರ್ ಕಾನೂನುಗಳಿವೆ. ವೈಯಕ್ತಿಕ ಕಾನೂನು ಎಂಬುದು ಧರ್ಮ, ನಂಬಿಕೆ, ಸಂಸ್ಕೃತಿ ಆಧರಿಸಿ ಕೆಲವು ಸೀಮಿತ ವಿಷಯಗಳಿಗೆ ಅನ್ವಯವಾಗುತ್ತದೆ. ಇದನ್ನು 'ಫ್ಯಾಮಿಲಿ ಆ್ಯಂಡ್ ಮ್ಯಾಟ್ರಿಮೋನಿಯಲ್ ಲಾ' ಎಂದೂ ಹೇಳಲಾಗುತ್ತದೆ. ಜನಜಾತಿಗಳನ್ನು ಹಿಂದೂ ಎಂದು ಕರೆದರೂ ಅವುಗಳ ಆಚರಣೆಗಳಲ್ಲಿ ಏಕರೂಪತೆ ತರಲಾಗದು. ಮೇಘಾಲಯದ ಬುಡಕಟ್ಟು ಸಮಿತಿಯು ಯುಸಿಸಿಯನ್ನು ವಿರೋಧಿಸಿರುವುದು ಗಮನಾರ್ಹ.

ಹಿಂದೂ ಅವಿಭಜಿತ ಕುಟುಂಬಗಳು ಈಗ ಎಷ್ಟಿವೆ? ಕರ್ತ ಎಂದು ದಾಖಲೆ ತಯಾರಿಸಿ ಪಾಲಿಸುವವರು ಅಪರೂಪ. ಆದರೆ ಈ ಆಧಾರದಲ್ಲಿ ನಡೆಯುತ್ತಿರುವ ಆಸ್ತಿ ಪಾಲು ಸಂಬಂಧಿತ ಖಟ್ಲೆಗಳು ಅನೇಕ. ಮಧ್ಯಪ್ರದೇಶ, ರಾಜಸ್ಥಾನದಲ್ಲಿ ಈ 'ಹವಾ' ನಡೆದರೆ ಕರ್ನಾಟಕದಲ್ಲೂ ಪ್ರಯೋಗಿಸಬಹುದು. ನಮ್ಮ ಕರಾವಳಿ ಹಾಗೂ ಅಲ್ಪಸಂಖ್ಯಾತರು ಗಮನಾರ್ಹ ಸಂಖ್ಯೆಯಲ್ಲಿರುವ ಇತರ ಪ್ರದೇಶಗಳು ಇದರಿಂದ ಪ್ರಭಾವಿತವಾಗದಂತೆ ಈಗಿನಿಂದಲೇ ಕನಿಷ್ಠ ಒಂದು ವರ್ಷ ಎಲ್ಲರೂ ಎಚ್ಚರ ವಹಿಸಬೇಕಾಗಿದೆ.

**ಎಚ್.ಎಸ್.ಮಂಜುನಾಥ,** ಗೌರಿಬಿದನೂರು


Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

# ರಾಷ್ಟ್ರೀಯ ವೈದ್ಯರ ದಿನ



ರಾಷ್ಟ್ರೀಯ ವೈದ್ಯರ ದಿನ ಇಂದು. ರೋಗಗಳಿಗೆ ಚಿಕಿತ್ಸೆ ನೀಡುತ್ತಾ, ರೋಗಿಗಳ ನೋವನ್ನು ದೂರ ಮಾಡುವ ವೈದ್ಯರು ಮತ್ತು ಅವರ ಸೇವೆಗೆ ಅಭಿನಂದನೆ ಸಲ್ಲಿಸಲು ಇದೊಂದು ಅವಕಾಶ. ವೈದ್ಯರಾಗಿದ್ದುಕೊಂಡು ಜನಸೇವೆಯ ಜತೆಗೆ, ಸ್ವಾತಂತ್ರ್ಯ ಹೋರಾಟದಲ್ಲೂ ಭಾಗಿಯಾಗಿದ್ದ ಡಾ.ಬಿ.ಸಿ.ರಾಯ್ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯೂ ಆಗಿದ್ದರು. ವೈದ್ಯರಾಗಿದ್ದುಕೊಂಡು ಅವರು ಮಾಡಿದ ಜನಸೇವೆಗೆ ಗೌರವ ಸಲ್ಲಿಸುವ ಸಲುವಾಗಿ ಅವರ ಜನ್ಮದಿನವಾದ ಜುಲೈ 1 ಅನ್ನು ಪ್ರತಿ ವರ್ಷ ರಾಷ್ಟ್ರೀಯ ವೈದ್ಯರ ದಿನವನ್ನಾಗಿ ಆಚರಿಸಲಾಗುತ್ತದೆ. ಇದು 32ನೇ ರಾಷ್ಟ್ರೀಯ ವೈದ್ಯರ ದಿನ. ರಾಜ್ಯದ ಯಾವುದೋ ಒಂದೆಡೆ ಜನಸೇವೆಯಲ್ಲಿ ತೊಡಗಿದ ವೈದ್ಯರು ಈ ನೆಪದಲ್ಲಿ ತಮ್ಮ ವೃತ್ತಿಬದುಕಿನ ಅನುಭವವನ್ನು ಹಂಚಿಕೊಂಡಿದ್ದಾರೆ. ಕಾದಂಬರಿಕಾರ ಕುಂ ವೀರಭದ್ರಪ್ಪ (ಕುಂವೀ) ಅವರು ತಮ್ಮ ನೆಚ್ಚಿನ ವೈದ್ಯ ಮಿತ್ರನನ್ನು ನೆನಪಿಸಿಕೊಂಡಿದ್ದಾರೆ

## ಇರುಳಿಗರನ್ನು ಪಳಗಿಸಿದ್ದೇ ರೋಚಕ



ರಾಮನಗರ ಸುತ್ತಮುತ್ತ ಇರುವ ಬುಡಕಟ್ಟು ಸಮುದಾಯವಾದ ಇರುಳಿಗರದ್ದು ಒಂದು ರೀತಿಯ ವಿಭಿನ್ನ ಬದುಕು. ಆರೋಗ್ಯ ಸಮಸ್ಯೆಯಾದರೂ ಅವರು ಆಸ್ಪತ್ರೆಗಳತ್ತ ಸುಳಿಯದೇ ತಮ್ಮಲ್ಲೇ ಔಷಧ ಮಾಡಿಕೊಂಡು ಸುಮ್ಮನಾಗುತ್ತಿದ್ದರು. ವಾಸಿಯಾದರೆ ಆಯಿತು, ಇಲ್ಲಾಂದ್ರೆ ಹಾಗೆಯೇ ನರಳುತ್ತಿದ್ದರು. ರಾಮನಗರದಲ್ಲಿ ನಾನು ಕ್ಲಿನಿಕ್ ಶುರು ಮಾಡಿದ ಬಳಿಕ, ಆಗಾಗ ಅವರಿರುವ ಗುಡಿಸಲುಗಳಿಗೆ ಒಂದಿಷ್ಟು ಔಷಧ ತುಂಬಿಕೊಂಡು ಹೋಗಿ ಉಚಿತವಾಗಿ ಚಿಕಿತ್ಸೆ ನೀಡಲು ಶುರು ಮಾಡಿದೆ.

ಆಧುನಿಕ ಜಗತ್ತಿನಿಂದ ದೂರವೇ ಉಳಿದಂತಿದ್ದ ಅವರು, ಆರಂಭದಲ್ಲಿ ನನ್ನನ್ನು ಖಳನಂತೆ ನೋಡುತ್ತಿದ್ದರು. ಆರೋಗ್ಯ ಸಮಸ್ಯೆ ಹೇಳಿಕೊಳ್ಳಲು ಮುಂದೆ ಬರುತ್ತಿರಲಿಲ್ಲ. ರೋಗಿಗಳಿಗೆ ಬಲವಂತವಾಗಿ ಚಿಕಿತ್ಸೆ ನೀಡುತ್ತಿದ್ದೆ. ಅದಕ್ಕೂ ಅವರು ಸಹಕರಿಸುತ್ತಿರಲಿಲ್ಲ. ಕೇಳಿದ್ದಕ್ಕೆ ಸರಿಯಾಗಿ ಪ್ರತಿಕ್ರಿಯಿಸುತ್ತಿರಲಿಲ್ಲ.

ಹೀಗೆ; ಸುಮಾರು ಹತ್ತು ವರ್ಷ ಅವರಿರುವ ಸ್ಥಳಕ್ಕೆ ಹೋಗಿ ಚಿಕಿತ್ಸೆ ಕೊಟ್ಟಿದ್ದೆ. ವೈದ್ಯಕೀಯ ತಪಾಸಣೆ ಶಿಬಿರ ಆಯೋಜಿಸುತ್ತಾ ಬಂದೆ. ಕ್ರಮೇಣ ಅವರು ಹೊಂದಿಕೊಳ್ಳಲಾರಂಭಿಸಿದರು. ಈಗ, ಅವರಿರುವ ಜಾಗಕ್ಕೆ ಹೋಗಬೇಕಿಲ್ಲ. ನನ್ನ ಕ್ಲಿನಿಕ್‌ಗೆ ಅವರೇ ಹುಡುಕಿಕೊಂಡು ಬಂದು ಚಿಕಿತ್ಸೆ ಪಡೆಯುತ್ತಾರೆ. ಇರುಳಿಗರು ಸೇರಿದಂತೆ ಕ್ಲಿನಿಕ್‌ಗೆ ಬರುವ ಬಡವರು ತಮ್ಮ ಕೈಲಿದ್ದ ಹಣ ಕೊಡುತ್ತಾರೆ. ನನ್ನ ಕ್ಲಿನಿಕ್‌ನಲ್ಲಿ ಹಣಕ್ಕಿಂತ ಚಿಕಿತ್ಸೆಗೆ ಆದ್ಯತೆ.

ಬಡವರ ಬಂಧು: ಬಡವರ ಬಗ್ಗೆ ವಿಶೇಷ ಕಾಳಜಿ ಹೊಂದಿರುವ 76 ವರ್ಷದ ಡಾ.ಕೆ.ಪಿ.ಹೆಗಡೆ, ರಾಮನಗರದಲ್ಲಿ 'ಬಡವರ ಬಂಧು' ಎಂದೇ ಪ್ರಸಿದ್ಧರು. ಇರುಳಿಗರು, ಕೂಲಿ ಕಾರ್ಮಿಕರು, ನಿರ್ಗತಿಕರ ಪಾಲಿನ ಆಪತ್ಬಾಂಧವರಾದ ಇವರ ಕ್ಲಿನಿಕ್‌ಗೆ ಬರುವವರಿಗೆ, ಚಿಕಿತ್ಸೆ ಜೊತೆಗೆ ಔಷಧವೂ ಉಚಿತ. ಉಳ್ಳವರು ಶುಲ್ಕ ಕೊಡುತ್ತಾರೆ. ಇಲ್ಲದವರು 'ನಮಸ್ಕಾರ' ಹೇಳಿ ಹೋಗುತ್ತಾರೆ.

**ಡಾ.ಕೆ.ಪಿ.ಹೆಗಡೆ**, ಪ್ರಗತಿ ಚಿಕಿತ್ಸಾಲಯ, ರಾಮನಗರ

## ತಾಯಿ ಉಳಿಸಿ, ಮಗುವನ್ನು ಮಡಿಲು ಸೇರಿಸಿದ ತೃಪ್ತಿ




ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಬರುವ ಪ್ರತಿ ಕ್ಯಾನ್ಸರ್ ರೋಗಿಯದ್ದೂ ಒಂದೊಂದು ಕಥೆ ಇರುತ್ತದೆ. ಹೆಚ್ಚಿನವರು ಕ್ಯಾನ್ಸರ್ ಉಲ್ಬಣಗೊಂಡ ಬಳಿಕ ಬರುವುದರಿಂದ ಚಿಕಿತ್ಸೆ ಸವಾಲಿನಿಂದಲೇ ಕೂಡಿರುತ್ತದೆ. ನಾವು ಭಾವುಕರಾದಲ್ಲಿ ರೋಗಿಗಳು ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಾರೆ. ಹಾಗಾಗಿ, ಎಲ್ಲರನ್ನೂ ಒಂದೇ ರೀತಿಯಲ್ಲಿ ಕಾಣುತ್ತೇವೆ. ಆದರೆ, ಇತ್ತೀಚೆಗೆ ದಾಖಲಾಗಿದ್ದ 22 ವರ್ಷದ ಮಹಿಳೆಯೊಬ್ಬಳ ಪ್ರಕರಣ ವೃತ್ತಿ ಜೀವನದಲ್ಲಿ ಮೊದಲ ಬಾರಿ ನನ್ನನ್ನು ಭಾವುಕಗೊಳಿಸಿತು. ಇದಕ್ಕೆ ಕಾರಣ, ಕ್ಯಾನ್ಸರ್ ಪೀಡಿತ ಆ ಮಹಿಳೆಗೆ ಎರಡು ವಾರಗಳ ನವಜಾತ ಶಿಶುವಿತ್ತು. ತಾಯಿ ಹೊರತುಪಡಿಸಿದರೆ ಆ ಮಹಿಳೆ ಜತೆಗೆ ಯಾರೂ ಇರಲಿಲ್ಲ. ಚಿಕಿತ್ಸೆಗೆ ಕೈಯಲ್ಲಿ ಹಣವೂ ಇರಲಿಲ್ಲ. ಮಂಡ್ಯದ ಕೋಣನಹಳ್ಳಿಯ ಮಹಿಳೆಗೆ ಅವಧಿಪೂರ್ವ ಮಗು ಜನಿಸಿತ್ತು. ಅವಳಿಗೆ ಸಿಸೇರಿಯನ್ ಮಾಡಲಾಗಿತ್ತು. ಆ ವೇಳೆ ಹೊಟ್ಟೆಯಲ್ಲಿ ಗಡ್ಡೆ ಇರುವುದನ್ನು ಗುರುತಿಸಿದ ಸ್ಥಳೀಯ ವೈದ್ಯರು, ನಮ್ಮ ಸಂಸ್ಥೆಗೆ ಶಿಫಾರಸು ಮಾಡಿದ್ದರು.

ಅವಳ ಸ್ಥಿತಿ ಕ್ಲಿಷ್ಟಕರವಾಗಿತ್ತು. ಅವಳಿಗೆ ಶಸ್ತ್ರಚಿಕಿತ್ಸೆ ಮಾಡುವ ಸ್ಥಿತಿಯೂ ಇರಲಿಲ್ಲ. ಗಡ್ಡೆ ದೊಡ್ಡದಾಗಿ ಬೆಳೆಯುತ್ತಿದ್ದುದರಿಂದ ಕಿಮೋಥೆರಪಿ ಮಾಡುವಂತೆಯೂ ಇರಲಿಲ್ಲ. ರೋಗಿಗೆ ಹೆಚ್ಚು ಕಡಿಮೆ ಆದರೆ, ಮಗುವಿನ ಕಥೆಯೇನು ಎಂಬ ಕಳವಳವಿತ್ತು. ಉಳಿಸಿಕೊಡುವಂತೆ ಅವಳ ತಾಯಿ ನಿತ್ಯ ಕಣ್ಣೀರು ಹಾಕುತ್ತಿದ್ದರು. ಅಂತಿಮವಾಗಿ ರಿಸ್ಕ್ ತೆಗೆದುಕೊಂಡು, ಅರಿವಳಿಕೆ ತಜ್ಞರ ನೆರವಿನಿಂದ ಶಸ್ತ್ರಚಿಕಿತ್ಸೆ ಮಾಡಿದೆವು. ಈಗ ಮಹಿಳೆ ಚೇತರಿಸಿಕೊಂಡಿದ್ದಾಳೆ. ಈ ಪ್ರಕರಣ ನನ್ನ ವೃತ್ತಿ ಜೀವನದಲ್ಲಿ ವಿಶೇಷ ಸ್ಥಾನ ಪಡೆದಿದೆ. ಈಗ ತಾಯಿ–ಮಗುವನ್ನು ನೋಡಿದರೆ ಖುಷಿ ಆಗುತ್ತದೆ. ಈ ಪ್ರಕರಣದಲ್ಲಿ ಮಹಿಳೆಗೆ ಸರ್ಕಾರಿ ಯೋಜನೆಯಡಿ ಉಚಿತ ಚಿಕಿತ್ಸೆ ಒದಗಿಸಲು ಬಿಪಿಎಲ್ ಕಾರ್ಡ್ ಸಹ ಇರಲಿಲ್ಲ. ಇದರಿಂದ ಆಸ್ಪತ್ರೆ, ಸಾಮಾಜಿಕ ಕಾರ್ಯಕರ್ತರ ನೆರವಿನಿಂದ ಚಿಕಿತ್ಸೆಯ ಅಷ್ಟೂ ವೆಚ್ಚವನ್ನು ಭರಿಸಲಾಯಿತು.

**ಡಾ.ಪಲ್ಲವಿ ವಿ.ಆರ್.**, ಸ್ತ್ರೀ ಗಂಥಿ ವಿಭಾಗದ ಮುಖ್ಯಸ್ಥೆ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

## ಶ್ವಾಸನಾಳದಲ್ಲಿ ಸಿಲುಕಿತ್ತು ಅಡಿಕೆ ಗೋಟು!



ದಶಕದ ಹಿಂದಿನ ಮಾತು. ಜುಲೈ ತಿಂಗಳ ರಾತ್ರಿ. ಧೋ ಮಳೆ. ರಾತ್ರಿ ಊಟ ಮಾಡಿ, ಮಲಗುವ ಮುನ್ನ ಹವ್ಯಾಸದಂತೆ ಪುಸ್ತಕವೊಂದನ್ನು ತಿರುವಿ ಹಾಕುತ್ತಾ ಕುಳಿತಿದ್ದೆ. ಸಹೋದ್ಯೋಗಿಯೊಬ್ಬರು ಕರೆ ಮಾಡಿ ತುರ್ತಾಗಿ ಆಸ್ಪತ್ರೆಗೆ ಬರುವಂತೆ ಕೋರಿದರು.


ವಿಷಯ ತುರ್ತು ಎಂದು ಅವರು ಹೇಳಿದ್ದರಿಂದ ರೇನ್‌ಕೋಟ್ ಧರಿಸಿದವನೇ ಮಳೆಯಲ್ಲೇ ಆಸ್ಪತ್ರೆಯತ್ತ ಸ್ಕೂಟರ್ ತಿರುಗಿಸಿದೆ. ತುರ್ತು ಚಿಕಿತ್ಸೆ ಕೊಠಡಿಯಲ್ಲಿ ಮಂಚದ ಮೇಲೆ ಮಲಗಿದ್ದ ಪುಟ್ಟ ಮಗು ಉಸಿರಾಡಲು ಕಷ್ಟಪಡುತ್ತಿತ್ತು. ಪಕ್ಕದಲ್ಲಿ ನಿಂತಿದ್ದ ಪಾಲಕರು ದುಃಖದ ಮಡುವಿನಲ್ಲಿದ್ದರು. ಮಗಳ ಮುಖ ನೋಡುತ್ತಾ ಆಕೆ ಉಸಿರಾಡಲೂ ಪಡುತ್ತಿದ್ದ ಕಷ್ಟ ಕಂಡು ಕಣ್ಣೀರು ಸುರಿಸುತ್ತಿದ್ದರು. ವಿಷಯ ಏನೆಂದು ಸಹೋದ್ಯೋಗಿಯನ್ನು ವಿಚಾರಿಸಿದೆ. ಆಗ ಮಗುವಿನ ತಂದೆಯು ನಡೆದ ವೃತ್ತಾಂತ ವಿವರಿಸಿದರು.

ಒಂದೂವರೆ ವರ್ಷದ ಆ ಪುಟ್ಟ ಬಾಲೆ ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಬಳಿಯ ಹಳ್ಳಿಯೊಂದರ ದಂಪತಿಯ ಒಬ್ಬಳೇ ಮಗಳು. ಬಹಳ ವರ್ಷದ ನಂತರ ಹುಟ್ಟಿದ್ದರಿಂದ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಆದರೆ, ಆ ರಾತ್ರಿ ಮನೆಯ ವರಾಂಡದಲ್ಲಿ ಒಣಹಾಕಿದ್ದ ಅಡಿಕೆ ಗೋಟನ್ನು ಮಗು ಆಟವಾಡುತ್ತಾ ಆಕಸ್ಮಿಕವಾಗಿ ಬಾಯಲ್ಲಿ ಹಾಕಿಕೊಂಡು ನುಂಗಿತ್ತು. ಅಡಿಕೆ ಗೋಟು ಸೀದಾ ಬಾಲಕಿಯ ಶ್ವಾಸನಾಳದಲ್ಲಿ ಸಿಲುಕಿಕೊಂಡಿತ್ತು. ಅಳುತ್ತಾ ಒದ್ದಾಡುತ್ತಿದ್ದ ಮಗುವಿಗೆ ಉಸಿರಾಡಲು ಕಷ್ಟವಾಗಿದೆ. ಅಡಿಕೆ ಗೋಟು ತೆಗೆಯಲು ಎಲ್ಲ ಪ್ರಯತ್ನ ನಡೆಸಿದ್ದ ಪಾಲಕರು, ಮಗುವಿನ ಉಸಿರಾಟ ಕ್ಷೀಣವಾಗುತ್ತಿರುವುದನ್ನು ಕಂಡು ಆಸ್ಪತ್ರೆಗೆ ಧಾವಿಸಿದ್ದರು.

ಮಗುವಿನ ಸ್ಥಿತಿ ಗಮನಿಸಿದವನೇ ತುರ್ತಾಗಿ ಅದೊಂದು ಕ್ಲಿಷ್ಟಕರ ಚಿಕಿತ್ಸೆಗೆ ಮುಂದಾದೆ. ಶ್ವಾಸನಾಳದ ಎಂಡೊಸ್ಕೋಪಿ ಮಾಡಿ ಬ್ರಾಂಕೊಸ್ಕೋಪಿ ಚಿಕಿತ್ಸೆ ಮೂಲಕ ಅಡಿಕೆ ಗೋಟು ಹೊರಗೆ ತೆಗೆಯಲಾಯಿತು. ಮಧ್ಯರಾತ್ರಿ ವೇಳೆಗೆ ಆ ಮಗು ಸಹಜ ಸ್ಥಿತಿಗೆ ಬಂತು. ಮಗಳು ಪ್ರಾಣಾಪಾಯದಿಂದ ಪಾರಾಗಿದ್ದಾಳೆ ಎಂಬ ವಿಷಯ ತಿಳಿದಾಗ ಆ ದಂಪತಿಯ ಮುಖದಲ್ಲಿ ಮೂಡಿದ ಸಂತಸ, ಕಣ್ಣಲ್ಲಿನ ಕೃತಜ್ಞತೆಯ ಹೊಳಪು ನನಗೆ ಈಗಲೂ ನೆನಪಿದೆ. ನನ್ನ ವೈದ್ಯಕೀಯ ವೃತ್ತಿ ಬದುಕಿನಲ್ಲಿ ಅದೊಂದು ಮರೆಯಲಾಗದ ಕ್ಷಣ.

**ಡಾ.ಎಸ್.ಶ್ರೀಧರ್**, ವೈದ್ಯಕೀಯ ಅಧೀಕ್ಷಕರು, ಮೆಗ್ಗಾನ್ ಆಸ್ಪತ್ರೆ, ಶಿವಮೊಗ್ಗ

## ವೈದ್ಯ ಮಿತ್ರನಿಗೆ ಕುಂವೀ ಪತ್ರ



ನನ್ನ ಪ್ರೀತಿಯ ಸ್ನೇಹಿತರೂ, ನನ್ನ ನೆಚ್ಚಿನ ವೈದ್ಯ ಮಿತ್ರರೂ ಆದ ಡಾ. ಎಚ್. ಆರ್. ಬಸವನಗೌಡ ಅವರಿಗೆ ಡಾ. ಬಿ.ಸಿ. ರಾಯ್ ಜನ್ಮ ದಿನದ ಹಾಗೂ ವೈದ್ಯರ ದಿನಾಚರಣೆ ಶುಭಾಶಯಗಳು, ಹೇಗಿರುವಿರಿ ಸಾರ್! ನೀವೆಲ್ಲರೂ ಸೌಖ್ಯವೆಂದು ಭಾವಿಸುತ್ತೇನೆ, ವೈದ್ಯರಾಗಿ ಗೆಳೆಯರಾಗಿ ನೀವು ನನ್ನನ್ನು ತುಂಬಾ ಕಾಡುತ್ತಿರುವಿರಿ, ನಮ್ಮಿಬ್ಬರ ಪರಿಚಯಕ್ಕೆ ನಾಲ್ಕು ದಶಕಗಳ ಇತಿಹಾಸವಿದೆ. ಮಯೂರದಲ್ಲಿ ಪ್ರಕಟವಾಗುತ್ತಿದ್ದ ನನ್ನ ಕಥೆಗಳನ್ನು ಓದಿ ನನ್ನನ್ನು ಅಭಿಮಾನಿಸಲಾರಂಭಿಸಿದಿರಿ. ಆಗಿನ್ನು ನೀವು ಬಳ್ಳಾರಿ ಮೆಡಿಕಲ್ ಕಾಲೇಜಲ್ಲಿ ಹೌಸ್ ಸರ್ಜನ್ ಆಗಿದ್ದಿರಿ, ಕಾಣಲೆಂದೇ ನಾನು ನೀವು ಇರುವಲ್ಲಿಗೆ ಬರುತ್ತಿದ್ದೆ. ಸಣ್ಣಪುಟ್ಟ ನ್ಯೂನತೆಗಳ ಕುರಿತು ಚರ್ಚಿಸುತ್ತಿದ್ದೆ. ಸಾಹಿತ್ಯ ಲಲಿತ ಕಲೆಗಳ ಕುರಿತು ವಿಶೇಷ ಒಲವು ಇರಿಸಿಕೊಂಡಿದ್ದ ನೀವು ಅತ್ಯಂತ ಆಸಕ್ತಿಯಿಂದ ಸಮಸ್ಯೆಗಳನ್ನು ಆಲಿಸುತ್ತಿದ್ದಿರಿ, ಕೂಡಲೆ ಸ್ಪಂದಿಸುತ್ತಿದ್ದಿರಿ. ಪೇಷೆಂಟ್ಸ್ ಕಡೆ ಮಾಂತ್ರಿಕ ದೃಷ್ಟಿ ಬೀರುತ್ತಿದ್ದಿರಿ, ಮುಂಗೈ ಹಿಡಿದು ರೋಗಿಯ ನಾಡಿ ಪರೀಕ್ಷಿಸುತ್ತಿದ್ದಿರಿ, ಗುಳಿಗೆ ಚೀಟಿ ಬರೆದು ಕೊಡುತ್ತಿದ್ದಿರಿ, ಮುಖ ಓದಿ ರೋಗಿಯ ಜೇಬಲ್ಲಿ ಹಣವಿರುವುದೋ ಇಲ್ಲವೋ ಎಂದು ಪರಿಶೀಲಿಸುತ್ತಿದ್ದಿರಿ. ಬಡರೋಗಿಗಳ ಔಷಧಿ ಖರ್ಚಿಗೆ ಐವತ್ತೋ ನೂರೋ ಬಡಕಲು ಕೈಗಳಿಗೆ ಇಕ್ಕುತ್ತಿದ್ದಿರಿ, ಜಠರದ ಮೇಲೆ ಕೈಯಾಡಿಸಿ ರೋಗಿ ಉಂಡಿರುವನೋ ಉಪವಾಸ ಇರುವನೋ ಎಂದು ಅರ್ಥ ಮಾಡಿಕೊಳ್ಳುತ್ತಿದ್ದಿರಿ, ಟಿಫನ್ ಮಾಡ್ಕೊಂಡು ಬಾ ಅಂತ ಹೇಳಿ ಹಸಿದ ರೋಗಿಗಳಿಗೆ ಹತ್ತಿಪ್ಪತ್ತು ರೂಪಾಯಿ ಕೊಡುತ್ತಿದ್ದಿರಿ. ಅವರೆಲ್ಲ ನಮ್ಮ ಡಾಕುಟ್ರು ದ್ಯಾವರಂತ ಮನ್ಸಾ ಎಂದು ಬಾಯಿ ತುಂಬಾ ಹಾರೈಸುತ್ತಿದ್ದುದನ್ನು ನಾನು ಕಿವಿಯಾರೆ ಕೇಳಿಸಿಕೊಳ್ಳುತ್ತಿದ್ದೆ.

ಡಾಕ್ಟರೆ ನೀವು ಈಎನ್ಟಿ ಸ್ಪೆಶಲಿಸ್ಟು. ಆದರೆ ನೀವು ಆಲ್ ಇನ್ ಒನ್. ನಾನೇ ನಿಮ್ಮಿಂದ ಎಲ್ಲಾ ರೋಗಗಳಿಗೆ ಇಲಾಜು ಮಾಡಿಸಿಕೊಂಡಿರುವೆ. ನನಗೆ ಹಣದ ಅಡಚಣೆ ಇದ್ದಾಗ ನನ್ನ ಪತ್ನಿಗೆ ಗರ್ಭದ ಶಸ್ತ್ರ ಚಿಕಿತ್ಸೆಗೆ ನೆರವಾದಿರಿ. ಕೊಟ್ಟಷ್ಟು ಇಸಿದುಕೊಂಡಿರಿ. ಈಗಲೂ ನೀವು ನನ್ನ ಪಾಲಿನ ಆನ್‌ಲೈನ್ ಡಾಕ್ಟರ್. ನೆಗಡಿ ಜಡ್ದು ಬಂದರೆ ನಾನು ನಿಮಗೆ ಎಲ್ಲೆಲ್ಲಿಂದನೋ ಹಲೋ ಅಂತೀನಿ, ನೀವು ಅಲ್ಲಲ್ಲಿಂದಲೇ ಔಷಧಿ ಮಾತ್ರೆ ಸೂಚಿಸುವಿರಿ. ನೀವು ನಿಜವಾಗಲೂ ಗ್ರೇಟ್ ಸಾರ್, ನಿಮ್ಮ ಪ್ರೀತಿಯ ಡಾಕ್ಟರಕಿಯ ನಿರಂತರ ಫಲಾನುಭವಿ ನಾನು. ಈ ದಿವಸ ನಿಮ್ಮನ್ನೂ ಬೆಂಗಾಲ ರಾಜ್ಯದ ಎರಡನೇ ಮುಖ್ಯಮಂತ್ರಿ ಡಾ. ಬಿಪಿನ್ ಚಂದ್ರರಾಯ್‌ರನ್ನು ಒಟ್ಟಿಗೆ ಜ್ಞಾಪಿಸಿಕೊಂಡೆ. ಅವರಲ್ಲಿನ ಮಾನವೀಯ ಗುಣಗಳು ನಿಮ್ಮಲ್ಲೂ ಇವೆ. ನೀವು ರೋಗಿಗಳಿಂದ ಶ್ಲಾಘಿಸಿಕೊಳ್ಳುವ ಡಾಕ್ಟರ್. ಬಳ್ಳಾರಿಯಲ್ಲಿನ ನಿಮ್ಮ ಶಕ್ತಿ ನರ್ಸಿಂಗ್ ಹೋಂ ಬಡರೋಗಿಗಳ ಪ್ರೀತಿಯ ಮನೆ. ಆ ಕಾಲದಿಂದ ನೋಡುತ್ತಿರುವೆ ನೀವು ಆರಕ್ಕೇರಿಲ್ಲ, ಮೂರಕ್ಕಿಳಿದಿಲ್ಲ, ಒಂದೇ ಥರ ಇರುವಿರಿ. ಯು ಆರ್ ಆಲ್ವೇಸ್ ಗ್ರೇಟ್ ಸರ್.

ನಿಮ್ಮ

**ಕುಂವೀ**

## ಮೂತ್ರ ಪರೀಕ್ಷೆಯ ಗೊಂದಲ

ಹೇಳುವುದು ಕೇಳುವುದು ಮುಖ್ಯವಾದದ್ದು. ವೈದ್ಯಕೀಯ ವೃತ್ತಿಯಲ್ಲಿ ಹೇಳುವುದೇ ಒಂದು, ಅರ್ಥ ಮಾಡಿಕೊಳ್ಳುವುದೇ ಇನ್ನೊಂದು. ಆದರೆ, ಅದು ಹಲವು ಆಭಾಸಗಳನ್ನು ಸೃಷ್ಟಿಸುತ್ತದೆ.

ಒಮ್ಮೆ ನೌಕರಸ್ಥ ತರುಣ ಪತಿಯೊಬ್ಬ ತಪ್ಪಿತಸ್ಥನ ಮೋರೆ ಹಾಕಿಕೊಂಡು ಬಂದ. 'ನಮಗೆ ಇಷ್ಟು ಬೇಗ ಮಕ್ಕಳು ಬೇಡಾಗಿತ್ತು ಮೇಡಂ. ಅವಳೊಂದು ಪರೀಕ್ಷೆ ಕಟ್ಟಿದಾಳೆ. ಮದುವೆಯಾಗಿ ಎರಡು ತಿಂಗಳಾಯಿತಷ್ಟೇ. ಈ ತಿಂಗಳು ಋತುಸ್ರಾವ ಆಗಿಲ್ಲ. ಅಳತಾ ಕೂತಿದ್ದಾಳೆ. ನಂದೇ ತಪ್ಪು, ಇದೊಂದು ಸಾರಿ ಅಬಾರ್ಷನ್ ಮಾಡಿಸ್ಕೊಡಿ' ಎಂದು ಅಳುವ ದನಿಯಲ್ಲಿ ಹೇಳಿದ.

ಮೊದಲನೆಯ ಗರ್ಭವನ್ನು ಅಬಾರ್ಷನ್ ಮಾಡುವುದು ಒಳ್ಳೆಯ ದಲ್ಲ ಎಂದು ಹೇಳಿದರೂ ಆತ ಕೇಳುತ್ತಿಲ್ಲ. ಕೊನೆಗೆ, 'ಮೊದಲು ಅವಳನ್ನು ಕರೆ ತನ್ನಿ ಅಥವಾ ನಾಳೆ ಬೆಳಗಿನ ಫಸ್ಟ್ ಸ್ಯಾಂಪಲ್ ಮೂತ್ರ ತನ್ನಿ. ಪರೀಕ್ಷೆ ಮಾಡಿ ನಂತರ ವಿಚಾರ ಮಾಡುವ' ಎಂದು ಹೇಳಿ ಕಳಿಸಿದೆ. ಮರುದಿನ ಆತ ಮೂತ್ರ ತಂದ. ಟೆಸ್ಟ್ ನೆಗೆಟಿವ್ ಇತ್ತು. 'ಏನೂ ಹೆದರಬೇಡಿ. ಗರ್ಭ ನಿಂತಿಲ್ಲ, ನಿಮ್ಮ ಹೆಂಡತಿಗೆ ಅಳಬೇಡ ಅಂತ ಹೇಳಿ. ಪರೀಕ್ಷೆಗೆ ನನ್ನ ಬೆಸ್ಟ್ ಆಫ್ ಲಕ್ ಹೇಳಿ' ಎಂದು ಕಳಿಸಿದೆ. ವಾರ ಆಗುವುದರಲ್ಲಿ ಅಸಾಮಿ ಮತ್ತೆ ಹಾಜರ್. 'ಮೇಡಂ, ಇಡೀ ದಿನ ವಾಂತಿ ಮಾಡ್ತಾಳೆ, ಹೊಟ್ಟೆಗೆ ಏನೂ ದಕ್ಕುತ್ತಿಲ್ಲ. ತಲೆ ಸುತ್ತು ಅಂತಾಳೆ' ಎಂದ.

'ನೋಡದೇ ಏನೂ ಹೇಳಕ್ಕಾಗಲ್ಲ, ಕರೆದುಕೊಂಡು ಬನ್ನಿ' ಎಂದೆ.

ಮರುದಿನ ಅವರಿಬ್ಬರೂ ಬಂದರು. ಅವಳ ಬಳಿ, 'ಮೂತ್ರ ಪರೀಕ್ಷೆ ನೋಡಿದ್ರೆ ನೆಗೆಟಿವ್ ಬಂದಿತ್ತಲ್ಲಮ್ಮ, ಆದರೂ ವಾಂತಿನಾ?' ಎಂದು ಪರೀಕ್ಷಿಸಲು ಹೊರಟಾಗ 'ಮೇಡಂ, ನನ್ನ ಮೂತ್ರನೂ ಒಮ್ಮೆ ಚೆಕ್ ಮಾಡಿನೋಡಿ, ಪ್ಲೀಸ್' ಎಂದು ನನ್ನನ್ನು ತಡೆದಳು. ಅಂದರೆ ಅವತ್ತು ತಂದದ್ದು? ಅವಳ ಗಂಡನದಂತೆ!! ಈಗ ತಲೆ ತಿರುಗುವ ಸರದಿ ನನ್ನದಾಯ್ತು. 'ಕಲಿತ' ದಡ್ಡ ಗಂಡನಿಗೆ ಏನೆನ್ನುವುದು?

**ಡಾ.ಎಚ್.ಎಸ್.ಅನುಪಮಾ**

## ವೀರಪ್ಪನ್ ಭಯ ಕಾಡಲಿಲ್ಲ!



ಅದು ಕೂಡ್ಲೂರು. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕುಗ್ರಾಮ. ಹನೂರಿನಿಂದ 55 ಕಿ.ಮೀ ದೂರ. 2003ರಲ್ಲಿ ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ನಿಯೋಜನೆಗೊಂಡಾಗ ಆ ಪ್ರದೇಶದಲ್ಲಿ ಕಾಡುಗಳ್ಳ ವೀರಪ್ಪನ್ ಉಪಟಳವಿತ್ತು. ಹೀಗಾಗಿ, ನಮ್ಮ ಕೇಂದ್ರಕ್ಕೆ ಪಿಎಸ್‌ಐ, ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ನಿಯೋಜಿಸಲಾಗಿತ್ತು. ನಾನು ಹನೂರು ಭಾಗದವನೇ ಆಗಿದ್ದರಿಂದ ವೀರಪ್ಪನ್ ಬಗ್ಗೆ ತಿಳಿದಿತ್ತು. ಒಂದು ದಿನ ಆತನನ್ನು ಎದುರಾಗಬಹುದು ಎಂದುಕೊಂಡಿದ್ದೆ, ಸಾಧ್ಯವಾಗಲಿಲ್ಲ. ಗ್ರಾಮೀಣ ಭಾಗದ ನನಗೆ ಜನರ ಕಷ್ಟಗಳು, ಆರೋಗ್ಯ ಸಮಸ್ಯೆಗಳ ಬಗ್ಗೆ ಅರಿವಿತ್ತು. ಜನರ ಸೇವೆಯೇ ಗುರಿಯಾಗಿದ್ದರಿಂದ ವೀರಪ್ಪನ್ ಭಯ ಕಾಡಲಿಲ್ಲ.

ಕೊಳ್ಳೇಗಾಲದಿಂದ ಬೆಳಿಗ್ಗೆ 7.30ಕ್ಕೆ ಹೊರಟ ಬಸ್ 9ಕ್ಕೆ ಕೂಡ್ಲೂರಿಗೆ ತಲುಪುತ್ತಿತ್ತು. ಸಂಜೆ 4ಕ್ಕೆ ಅಲ್ಲಿಂದ ವಾಪಸಾಗುತ್ತಿತ್ತು. ನಾನು ಸಂಜೆ ಊರಿನತ್ತ ಬಸ್ ಹತ್ತುವಾಗ ರೋಗಿಗಳು ಆಸ್ಪತ್ರೆಗೆ ಬರುತ್ತಿದ್ದರು. ಹೀಗಾಗಿ, ಅಲ್ಲೇ ಮನೆ ಮಾಡಿದೆ. ಸಂಜೆ 5ರ ಬಳಿಕ ಕೆಲಸ ಇರುತ್ತಿರಲಿಲ್ಲ. ಹಾಸಿಗೆ ಹಿಡಿದಿದ್ದ ರೋಗಿಗಳ ಮನೆಗೇ ತೆರಳಿ ಚಿಕಿತ್ಸೆ ನೀಡುತ್ತಿದ್ದೆ. ಕ್ರಮೇಣ ಕೇಂದ್ರದಲ್ಲೇ ದಾಖಲಿಸಿಕೊಳ್ಳಲು ಆರಂಭಿಸಿದೆವು. 15 ಸಾವಿರ ಜನಸಂಖ್ಯೆಯಿದ್ದ ಊರಲ್ಲಿ ನಾಲ್ಕೂವರೆ ವರ್ಷದ ಕೆಲಸ ಮೌಲ್ಯಯುತ ಸಂದರ್ಭ. ಎಂಬಿಬಿಎಸ್ ಪದವೀಧರರು ಕನಿಷ್ಠ ಒಂದು ವರ್ಷ ಗ್ರಾಮೀಣ ಸೇವೆ ಮಾಡಬೇಕು ಎಂಬ ನಿಯಮವಿದೆ. ನನ್ನ ಪ್ರಕಾರ, 5 ವರ್ಷವಾದರೂ ಅಲ್ಲಿರಬೇಕು. ಜನರೊಂದಿಗೆ ಕೆಲಸ ಮಾಡಿದರೆ ವ್ಯಕ್ತಿತ್ವವೇ ಬದಲಾಗುತ್ತದೆ. ಪಿ.ಜಿ, ಎಂ.ಡಿ ಓದಿದರೆ ಸ್ಪೆಷಾಲಿಟಿ, ಸೂಪರ್ ಸ್ಪೆಷಾಲಿಟಿ ತಜ್ಞರಾಗಬಹುದು. ಆದರೆ, ವೈದ್ಯರಾಗಲು ಸಾಧ್ಯವಿಲ್ಲ. ಯುವ ವೈದ್ಯರು ದುಡ್ಡು, ಹೆಸರಿನ ಹಿಂದೆ ಓಡದೇ ಗ್ರಾಮೀಣರಿಗೆ ಸೇವೆ ನೀಡಬೇಕು. ಆಗ ಜೀವನ ಸಾರ್ಥಕವಾಗುತ್ತದೆ.

**ಡಾ.ಎಂ.ಮಹೇಶ್.,**

ಅರಿವಳಿಕೆ ತಜ್ಞ, ಚಾಮರಾಜನಗರ ಜಿಲ್ಲಾಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ

## ತಾಳ್ಮೆಯೇ ವೈದ್ಯರ ಶಕ್ತಿ

ಮಣಿಪಾಲ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಗಂಭೀರ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಮಗುವಿಗೆ ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ಕೊಡಬೇಕಾದ ಪರಿಸ್ಥಿತಿ ಎದುರಾಯಿತು. ಸಾವು ಬದುಕಿನ ಮಧ್ಯೆ ಹೋರಾಟ ಮಾಡುತ್ತಿದ್ದ ಮಗುವನ್ನು ಉಳಿಸಿಕೊಳ್ಳಲು ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಪ್ರಾಮಾಣಿಕವಾಗಿ ಮಾಡಲಾಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲೂ ಪೋಷಕರು, ಹಣ ಮಾಡಲು ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ಕೊಡುತ್ತಿದ್ದೀರಾ ಎಂದು ಪ್ರಶ್ನಿಸಿದಾಗ ಮನಸ್ಸಿಗೆ ಆಘಾತವಾಯಿತು. ತಾಳ್ಮೆಗೆಡದೆ ಮಗುವಿಗೆ ಚಿಕಿತ್ಸೆ ಮುಂದುವರಿಸಿದೆ. ಮಗು ಬದುಕುಳಿಯಿತು. ಪೋಷಕರು ಮಗುವನ್ನು ಮನೆಗೆ ಕರೆದೊಯ್ಯುವಾಗ ಅವರ ಮುಖದಲ್ಲಿ ಪಶ್ಚಾತ್ತಾಪದ ಭಾವ ಕಾಡುತ್ತಿತ್ತು. ನನ್ನ ಮನಸ್ಸಿನಲ್ಲಿ ವೈದ್ಯ ವೃತ್ತಿಯ ಬಗ್ಗೆ ಸಾರ್ಥಕ ಭಾವ ಆವರಿಸಿತ್ತು.

ವೈದ್ಯರು ದೇವರಲ್ಲ ನಿಜ; ಆದರೆ, ಚಿಕಿತ್ಸೆಗೆ ಬಂದ ರೋಗಿಗಳು ಶೀಘ್ರ ಗುಣಮುಖರಾಗಬೇಕು, ಗಂಭೀರ ಸ್ಥಿತಿಯಲ್ಲಿರುವ ರೋಗಿಗಳು ಬದುಕುಳಿಯುಬೇಕು ಎಂಬ ಕಾಳಜಿಯಂತೂ ಸಹಜವಾಗಿ ಇರುತ್ತದೆ.

ಈಚೆಗೆ ವೈದ್ಯ ವೃತ್ತಿಯತ್ತ ಆಕರ್ಷಣೆ ಹೆಚ್ಚಾಗಿದ್ದು ವೃತ್ತಿ ಆಯ್ದುಕೊಳ್ಳುವ ಮುನ್ನ ವೈದ್ಯರಿಗೆ ಕರ್ತವ್ಯ ಹಾಗೂ ಜವಾಬ್ದಾರಿಗಳ ಅರಿವಿರಬೇಕು. ಸಮಯಪ್ರಜ್ಞೆ ಪಾಲಿಸುವುದರ ಜತೆಗೆ ರೋಗಿಗಳ ಜತೆಗೆ ಸಂವಹನ ಉತ್ತಮವಾಗಿರಬೇಕು. ಸಮಸ್ಯೆಯನ್ನು ಸಮಾಧಾನ ಚಿತ್ತದಿಂದ ಆಲಿಸುವ ತಾಳ್ಮೆ ಇರಬೇಕು. ಮುಖ ಗಂಟಿಕ್ಕಿಕೊಳ್ಳುವುದನ್ನು ಬಿಟ್ಟು ಕಿರು ನಗೆಯೊಂದಿಗೆ ರೋಗಿಗಳ ಜತೆ ಮಾತನಾಡಿದರೆ ಅವರ ಅರ್ಧ ಕಾಯಿಲೆ ಗುಣಮುಖವಾದಂತೆ.



ಸಾಮಾನ್ಯವಾಗಿ ಮಕ್ಕಳಿಗೆ ಡಾಕ್ಟರ್ ಕಂಡರೆ ಭಯ. ನೋಡಿದ ಕೂಡಲೇ ಇಂಜೆಕ್ಷನ್ ಕೊಡುತ್ತಾರೆ ಎಂದು ಅಳಲು ಶುರುಮಾಡುತ್ತವೆ.

ಪೋಷಕರಷ್ಟೆ ಆಪ್ತವಾಗಿ ವೈದ್ಯರು ಮಕ್ಕಳನ್ನು ಸಂತೈಸಬೇಕು. ಆತ್ಮೀಯವಾಗಿ ಬೆರೆತು ಚಿಕಿತ್ಸೆ ನೀಡಬೇಕು. ಎಲ್ಲ ವೈದ್ಯರೂ ಚಿಕಿತ್ಸೆ ನೀಡಬಲ್ಲರು; ಆದರೆ, ಪರಿಣಾಮಕಾರಿ ಚಿಕಿತ್ಸೆ ನೀಡುವವರು ಯಶಸ್ವಿ ವೈದ್ಯರಾಗುತ್ತಾರೆ.

**ಡಾ.ನಳಿನಿ ಭಾಸ್ಕರಾನಂದ,**

ಮಕ್ಕಳ ವೈದ್ಯೆ, ಹೈಟೆಕ್ ಆಸ್ಪತ್ರೆ ಉಡುಪಿ

## ಸೂಜಿ ಹೊರತೆಗೆವ ಕ್ಲಿಷ್ಟಕರ ಚಿಕಿತ್ಸೆ



ಕೆಲ ತಿಂಗಳ ಹಿಂದೆ ಸೂಜಿ ನುಂಗಿದ ಮೂವರು 16ರಿಂದ 20 ವರ್ಷದೊಳಗಿನ ಯುವತಿಯರು ಆಸ್ಪತ್ರೆಗೆ ಬಂದರು. ಯಾವುದೋ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರಿಂದ ಅದು ವಾಸಿಯಾಗದ್ದಕ್ಕೆ ಜುಗುಪ್ಸೆಗೊಂಡು ಹಾಗೂ ಮನೆಯಲ್ಲಿ ಹೆದರಿಸುವುದಕ್ಕೆ ಸುಮಾರು 5 ಸೆಂಟಿ ಮೀಟರ್‌ಗಳಿಗಿಂತ ಉದ್ದದ ಸೂಜಿಯನ್ನು ನುಂಗಿದ್ದರು! ಅಲ್ಲಿ ಇಲ್ಲಿ ತೋರಿಸಿ ನಮ್ಮ ಆಸ್ಪತ್ರೆಗೆ ಬರುವ ವೇಳೆಗಾಗಲೇ ಸೂಜಿ ನುಂಗಿ ಮೂರು ತಿಂಗಳು ಕಳೆದಿತ್ತು. ಹೀಗಾಗಿ, ಹೊಟ್ಟೆ ನೋವು ಅವರನ್ನು ತೀವ್ರವಾಗಿ ಬಾಧಿಸುತ್ತಿತ್ತು. ಇದಕ್ಕೆ ಇದ್ದ ಏಕೈಕ ಪರಿಹಾರವೆಂದರೆ ಲ್ಯಾಕ್ರೊಸ್ಕೊಪಿ ಮೂಲಕ ಸೂಜಿ ಎಲ್ಲಿದೆ ಎಂಬುದನ್ನು ಪತ್ತೆ ಹಚ್ಚಿ ಹೊಟ್ಟೆಯನ್ನು ಕೊಯ್ದು ಅದನ್ನು ಹೊರತೆಗೆಯುವುದು. ಹೀಗೆ ಮಾಡುವುದರಿಂದ ರೋಗಿಯು ಆಸ್ಪತ್ರೆಯಲ್ಲಿ ಹೆಚ್ಚು ದಿನ ಉಳಿಯಬೇಕಾಗುತ್ತಿತ್ತು. ಜೊತೆಗೆ, ಹೊಟ್ಟೆ ಕೊಯ್ದ ಗಾಯ ಮಾಯಲು ಹೆಚ್ಚು ದಿನ ತೆಗೆದುಕೊಳ್ಳುತ್ತಿತ್ತು.

ಕಡಿಮೆ ಅವಧಿಯಲ್ಲಿ ರೋಗಿಯನ್ನು ಡಿಸ್ಚಾರ್ಜ್ ಮಾಡುವ ಹಾಗೂ ಗಾಯವನ್ನು ಮಾಡದೇ ಸೂಜಿಯನ್ನು ಹೊರತೆಗೆಯುವ ಸವಾಲು ನಮ್ಮ ಎದುರಿಗಿತ್ತು. ಆ ಸಂದರ್ಭದಲ್ಲಿ ಎಂಡೊಸ್ಕೋಪಿ ಜೊತೆಗೆ ಸಿ–ಆರ್ಮ್ ತಂತ್ರಜ್ಞಾನವನ್ನು ಬಳಸಿಕೊಂಡು ಸೂಜಿ ಎಲ್ಲಿದೆ ಎಂಬುದನ್ನು ಪತ್ತೆ ಹಚ್ಚಲು ಮುಂದಾದೆವು. ಸೂಜಿ ಹೊಟ್ಟೆಯಿಂದ ಜಾರಿ ಕರುಳಿಗೆ ಹೊಕ್ಕಿತ್ತು. ಅದನ್ನು ಪತ್ತೆ ಹಚ್ಚಿ ಹೊಟ್ಟೆಯನ್ನು ಕೊಯ್ಯುವ ಬದಲು ಮೂರು ರಂಧ್ರಗಳನ್ನು ಹಾಕಿ ಒಂದು ಗಂಟೆ ಶಸ್ತ್ರಚಿಕಿತ್ಸೆ ನಡೆಸಿ ಸೂಜಿಯನ್ನು ಹೊರತೆಗೆದೆವು. ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆ ಮಾಡಿದ್ದರೆ ಇದಕ್ಕೆ ₹60 ಸಾವಿರದಿಂದ ₹80 ಸಾವಿರ ಬೇಕಾಗುತ್ತಿತ್ತು. ಲ್ಯಾಪ್ರೊಸ್ಕೊಪಿ, ಸಿ–ಆರ್ಮ್ ತಂತ್ರಜ್ಞಾನ ಬಳಸಿದ್ದರಿಂದ ಕೇವಲ ₹25 ಸಾವಿರದಲ್ಲಿ ಮುಗಿಯಿತು. ನಾಲ್ಕು ದಿನಕ್ಕೇ ಆಸ್ಪತ್ರೆಯಿಂದ ಯುವತಿಯರನ್ನು ಡಿಸ್ಚಾರ್ಜ್ ಮಾಡಿದೆವು.

**ಡಾ.ಮೊಹಮ್ಮದ್ ಅಬ್ದುಲ್ ಬಷೀರ್.**, ಕನ್ಸಲ್ಟಂಟ್ ಜನರಲ್ ಅಂಡ್ ಲ್ಯಾಕ್ರೊಸ್ಕೊಪಿಕ್ ಸರ್ಜನ್, ಯುನೈಟೆಡ್ ಆಸ್ಪತ್ರೆ, ಕಲಬುರಗಿ.

## ಪದಬಂಧ 5366


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಒಪ್ಪವಾಗಿ ಮಾಡಿರುವ ತರ್ಜುಮೆ (4)
3.ಈತ ಲೆಕ್ಕ ಬರೆಯುವವನು (4)
5.ಆ ಮನೆ ಮುಂದಿರುವ ಗಜ (2)
6.ಹೊಸ ಬೆಣ್ಣೆಯಿದು (4)
8.ಉತ್ಕೃಷ್ಟವಾದುದನ್ನು ಹೀಗೆನ್ನಿ (2)
9.ಬೆರಳಚ್ಚುಗಾರನ ಹಟ! (2)
10.ಮಾನವಿಟ್ಟುಕೊಂಡಿರುವ ಒಡೆಯ (4)
12.ನಾಗರಿಕತೆ ಕಲಿತಿರುವ ಸ್ತ್ರೀ (2)
15.ಅಂತರಂಗದ ವಿರುದ್ಧ ಪದ (4)
16.ಪುಷ್ಪದಲ್ಲಿರುವ ಸಿಹಿ ರಸ (4)

**ಮೇಲಿಂದ ಕೆಳಕ್ಕೆ**

1.ಅಣುಗ ಹಿಡಿದಿರುವುದು ಅತ್ಯಂತ ಸೂಕ್ಷ್ಮವಾದ ವಸ್ತು (2)
2.ಒಳ್ಳೆ ಅಥವಾ ಕೆಟ್ಟ ನಾತ (3)
3.ಮಧುರವಾದ ಧ್ವನಿಯಿದು (4)
4.ಕತ್ತೆತ್ತಿದಾಗ ಗಾರ್ಧಭ ಕಾಣಿಸಿತಲ್ಲಾ? (2)
5.ಆದಾಯ ಮತ್ತು ಖರ್ಚು (4)
6.ನಯವಾಗಿ ಹೊಳೆಯುತ್ತಿರುವ ಅಕ್ಷಿ (3)
7.ತರತರದ ಕಾಯಿಪಲ್ಲೆ (4)
11.ಆನೆಯನ್ನು ನಡೆಸುವವನು (4)
12.ದೋಣಿ ನಡೆಸುವವ ಇಲ್ಲಿದ್ದಾನೆ (3)
13.ಸೊಕ್ಕು ಹೀಗೆ ಬಂದಿದೆ (2)
14.ಮುನಿದವನನ್ನು ನೋಡಿದ್ದಕ್ಕೇ ಈ ಆನಂದ! (2)



### 5365ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1.ಅಮದು 2.ಬಡನಡು 4.ನಾಟಕೀಯ 6.ಹಂತಕ 7.ವನ 9.ನಗದು 11.ಣಪ 13.ವದಂತಿ 14.ನವರಂಗ 16.ಅತಿರೇಕ 17.ಆದರ್ಶ

**ಮೇಲಿಂದ ಕೆಳಕ್ಕೆ:**

1.ಅವಿನಾಭಾವ 2.ಬಡ್ಡಿ 3.ನವತರುಣ 5.ಯವನ 8.ನವದಂಪತಿ 10.ದುಮ್ಮಾನ 12.ಪರಾಗಸ್ಪರ್ಶ 15.ಅಂಕ

## ಸುಡೊಕು 5752

| | | | | | | | | |
|---|---|---|---|---|---|---|---|---|
| | 4 | | | | 1 | | 2 | 6 |
| 8 | | 7 | | 3 | | | | 9 |
| | | 5 | | | 9 | | 8 | |
| | 6 | | | 4 | | 3 | | 8 |
| | 7 | 4 | 1 | 8 | 3 | | | |
| 3 | | | | | | 5 | | 1 |
| | 8 | | 3 | | 4 | | | 5 |
| | | 1 | | 9 | | 8 | | 4 |
| 4 | | | 5 | | | 2 | | |

### 5751 ಸುಡೊಕು

| | | | | | | | | |
|---|---|---|---|---|---|---|---|---|
| 8 | 3 | 1 | 6 | 7 | 2 | 5 | 4 | 9 |
| 6 | 9 | 2 | 5 | 4 | 1 | 8 | 7 | 3 |
| 5 | 4 | 7 | 3 | 8 | 9 | 2 | 1 | 6 |
| 4 | 7 | 8 | 9 | 6 | 5 | 3 | 2 | 1 |
| 3 | 6 | 9 | 2 | 1 | 8 | 4 | 5 | 7 |
| 2 | 1 | 5 | 4 | 3 | 7 | 9 | 6 | 8 |
| 1 | 5 | 6 | 8 | 2 | 3 | 7 | 9 | 4 |
| 7 | 2 | 3 | 1 | 9 | 4 | 6 | 8 | 5 |
| 9 | 8 | 4 | 7 | 5 | 6 | 1 | 3 | 2 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 1, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ:** ಆಷಾಢ ಶುದ್ಧ ತ್ರಯೋದಶಿ ಗಂ. 23-08 ನಕ್ಷತ್ರ: ಅನುರಾಧ ಗಂ. 15-04 ಯೋಗ: ಶುಭ ಗಂ. 22-44 ಕರಣ: ಕೌಲವ ಗಂ. 12-18, ಮಿಥುನ ಮಾಸದ 16 ನೇ ದಿನ, ಮಳೆನಕ್ಷತ್ರ: ಆರ್ದ್ರಾ 3.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-11 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 12 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 1, 7

**ಮೇಷ:** ಕೋರ್ಟು ಕಚೇರಿ ದೂರುಗಳಂತಹ ಗೊಡವೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುವುದು ಸರಿಯಲ್ಲ. ಬಂಧುಮಿತ್ರರೊಂದಿಗೆ ಸಂತೋಷ ಹಂಚಿಕೊಳ್ಳುವಿರಿ. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಆಲಸ್ಯ ತೋರಿ ಬರುವುದು.

**ವೃಷಭ:** ಸಲಹೆ ಸೂಚನೆಗಳನ್ನು ಹೆಚ್ಚು ಚರ್ಚಿಸದೆ, ನಿಮ್ಮ ಮೇಲಿನ ನಂಬಿಕೆಯಿಂದಾಗಿ ಮೇಲಧಿಕಾರಿಗಳು ನಿರ್ಧಾರಗಳನ್ನು ಒಪ್ಪಿಕೊಳ್ಳುವರು. ಉಪಾಹಾರ ಗೃಹಗಳಿಂದ ಅಧಿಕವಾದ ಲಾಭ ಪಡೆಯುವಿರಿ.

**ಮಿಥುನ:** ಗಂಡ-ಹೆಂಡತಿಯ ಮಧ್ಯದಲ್ಲಿ ಅನಗತ್ಯ ವಾದ- ವಿವಾದಗಳು ಉಂಟಾಗಿ ವೈಮನಸ್ಯ ಉಂಟಾಗಬಹುದು. ಮನೆಯಲ್ಲಿನ ವ್ಯವಹಾರಗಳಲ್ಲಿ ಕುಟುಂಬದವರಿಂದ ಈ ದಿನ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಕಾಣುವಿರಿ.

**ಕರ್ಕಾಟಕ:** ಅಧಿಕಾರಿಯ ಸಹಾಯದಿಂದ ಮುಂಬಡ್ತಿ ಅಥವಾ ವರ್ಗಾವಣೆಯಂತಹ ಅವಕಾಶವನ್ನು ಪಡೆದುಕೊಳ್ಳುವಿರಿ. ರಾಜಕೀಯ ವ್ಯಕ್ತಿಗಳಿಗೆ ಸ್ವಂತ ಕ್ಷೇತ್ರದಲ್ಲಿ ದುರಹಂಕಾರಿ ಎನ್ನುವ ಪಟ್ಟ ಸಿಗುವ ಲಕ್ಷಣಗಳಿವೆ.

**ಸಿಂಹ:** ಮಾತಿನ ಚತುರತೆಯಿಂದ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ಹಾದಿಯಲ್ಲಿ ಹೋಗುವ ಸಮಸ್ಯೆಯನ್ನು ಮೈ ಮೇಲೆ ಎಳೆದುಕೊಳ್ಳುವಂಥ ಘಟನೆಯೊಂದು ನಡೆಯುವುದು.

**ಕನ್ಯಾ:** ಪದವೀಧರರಿಗೆ ತಮ್ಮ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ ಕಂಡು ಬರಲಿದೆ. ನಾಯಕತ್ವ ಪ್ರಾಪ್ತಿಯಾಗಲಿದೆ. ತಂದೆ ತಾಯಿಯ ಅಥವಾ ಹಿರಿಯರ ಆರೋಗ್ಯದಲ್ಲಿ ವ್ಯತ್ಯಯಗಳಾಗುತ್ತದೆ.

**ತುಲಾ:** ಉದ್ಯೋಗದಲ್ಲಿ ರಾಸಾಯನಿಕ ಪದಾರ್ಥಗಳ ಬಳಕೆ ಮಾಡುವವರು ಈ ದಿನ ಜಾಗ್ರತರಾಗಿರಿ. ಈ ದಿನ ಯಾವುದೇ ಹೊಸ ವ್ಯಕ್ತಿಗಳಿಂದ ಪ್ರಚೋದನೆಗೆ ಒಳಗಾಗದಿರಿ. ತಾಯಿಯವರ ದೇಹಾರೋಗ್ಯ ದಿನೇ ದಿನೆ ಸುಧಾರಿಸಲಿದೆ.

**ವೃಶ್ಚಿಕ:** ಅಣ್ಣತಮ್ಮಂದಿರ ನಡುವಿನ ವಿಚಾರದಲ್ಲಿ ಈಗ ತೆಗೆದುಕೊಂಡಿದ್ದ ನಿರ್ಧಾರಗಳು ಸರಿಯಾಗಿದೆಯೇ ಎಂದು ಇನ್ನೊಮ್ಮೆ ಪರಾಮರ್ಶಿಸಿಕೊಳ್ಳಿ. ಸಂಬಳದ ಮೇಲೆ ಇನ್ನಿತರ ಉತ್ಪತ್ತಿಯೂ ಸಿಗುವುದು.

**ಧನು:** ಕಲಾಕಾರರಿಗೆ ಕಲೆಯ ಪ್ರದರ್ಶನದಿಂದ ಪ್ರಶಂಸೆ ಮತ್ತು ಗೌರವಾದರಗಳಿಂದ ಮನೋಲ್ಲಾಸ ಉಂಟಾಗುವುದು. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ. ಕಪ್ಪು ಬಣ್ಣವು ಅದೃಷ್ಟವನ್ನು ಬದಲಾಯಿಸಲಿದೆ.

**ಮಕರ:** ಮಹತ್ವದ ನಿರ್ಧಾರವನ್ನು ಕೈಗೊಳ್ಳಬೇಕಾದ ಸಮಯ ಕೂಡಿ ಬಂದಿದೆ ಎಂದುಕೊಳ್ಳಿ. ಮನೆ ಕೊಳ್ಳುವ ವಿಷಯ ಇತ್ಯರ್ಥವಾಗುವುದು. ಮಗನ ಮುಂದಿನ ಓದಿನ ವಿಷಯ ಮನೆಯಲ್ಲಿ ಕುಟುಂಬದಲ್ಲಿ ಚರ್ಚೆಗೆ ಬರುವುದು.

**ಕುಂಭ:** ಹಣ್ಣು ಹಂಪಲುಗಳ ಬೆಳೆಗಾರರಿಗೆ ಕೀಟಬಾಧೆ ಇರಬಹುದು. ಉದ್ಯೋಗದಲ್ಲಿ ಸಿಗುವಂತಹ ವರ್ಗಾವಣೆಯ ಅವಕಾಶಗಳನ್ನು ಬಿಟ್ಟುಕೊಳ್ಳಬೇಡಿ.. ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಕೆಲಸವಿರಲಿದೆ.

**ಮೀನ:** ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದು ಮಾರ್ಗದರ್ಶಿಗಳ ಮಾತಿನಂತೆ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಹೆಂಡತಿ ಮಕ್ಕಳೊಂದಿಗೆ ಸಂತೋಷದಿಂದ ಕಾಲ ಕಳೆಯುವಂತಾಗುವುದು.



ದೆಹಲಿ ವಿಶ್ವವಿದ್ಯಾಲಯದ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಮೆಟ್ರೊದಲ್ಲಿ ತೆರಳುತ್ತಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು ಚಿತ್ರ–ಪಿಟಿಐ

# ಭಾರತದ ವಿವಿಗಳಿಗೆ ಜಾಗತಿಕ ಮನ್ನಣೆ : ಪ್ರಧಾನಿ

ನವದೆಹಲಿ (ಪಿಟಿಐ); ಶಿಕ್ಷಣ ಕ್ಷೇತ್ರದಲ್ಲಿ ಕೆಲವು ವರ್ಷಗಳಿಂದ ತೆಗೆದುಕೊಂಡ ನೀತಿ- ನಿರ್ಧಾರಗಳು ಭಾರತೀಯ ವಿಶ್ವವಿದ್ಯಾಲಯಗಳ ಜಾಗತಿಕ ಮನ್ನಣೆಯನ್ನು ಹೆಚ್ಚಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪ್ರತಿಪಾದಿಸಿದರು.

ದೆಹಲಿ ವಿಶ್ವವಿದ್ಯಾಲಯದ ಶತಮಾನೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮೋದಿ, ಭಾರತೀಯ ವಿಶ್ವವಿದ್ಯಾಲಯಗಳ ಸಂಖ್ಯೆ 2014 ರಲ್ಲಿ (ಮೋದಿ ಅವರು ಪ್ರಧಾನಿಯಾದ ವರ್ಷ) 12 ರಿಂದ 45ಕ್ಕೆ ಏರಿದೆ. ಇತ್ತೀಚಿನ ಕ್ಯೂಎಸ್ ಜಾಗತಿಕ ಶ್ರೇಯಾಂಕದಲ್ಲಿ ಇದು ಸ್ಪಷ್ಟವಾಗಿದೆ ಎಂದರು.

ದೇಶದಾದ್ಯಂತ ಐಐಟಿಗಳು, ಐಐಎಂಗಳು, ಏಮ್ಸ್ ಮತ್ತು ಎನ್ಐಟಿಗಳ ಸಂಖ್ಯೆ ಹೆಚ್ಚಳ ಉಲ್ಲೇಖಿಸಿದ ಅವರು ಅವುಗಳನ್ನು ನವ ಭಾರತದ ನಿರ್ಮಾಣ ಘಟಕಗಳು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಲು ಮೋದಿ ಅವರು ಮೆಟ್ರೊದಲ್ಲಿ ಪ್ರಯಾಣ ಮಾಡಿದರು. ತಮ್ಮ ಪ್ರಯಾಣದ ವೇಳೆ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿದರು.

ತಮ್ಮ ಇತ್ತೀಚಿನ ಅಮೆರಿಕ ಭೇಟಿ ಬಗ್ಗೆ ಮಾತನಾಡಿದ ಪ್ರಧಾನಿ, ಭಾರತದ ಸಾಮರ್ಥ್ಯದ ಹೆಚ್ಚಳ ಮತ್ತು ದೇಶದ ಯುವಕರ ಮೇಲಿನ ವಿಶ್ವದ ನಂಬಿಕೆಯಿಂದಾಗಿ ಜಾಗತಿಕ ಗೌರವ ಮತ್ತು ಪ್ರತಿಷ್ಠೆ ಹೆಚ್ಚಾಗಿದೆ ಎಂದರು.

ತಮ್ಮ ಭೇಟಿ ವೇಳೆ ಉಭಯ ದೇಶಗಳ ನಡುವಿನ ಒಪ್ಪಂದಗಳನ್ನು ಉಲ್ಲೇಖಿಸಿದ ಅವರು, ಇದು ಭಾರತದ ಯುವಜನರಿಗೆ ಭೂಮಿಯಿಂದ ಬಾಹ್ಯಾಕಾಶ, ಅರೆವಾಹಕಗಳು ಮತ್ತು ಕೃತಕ ಬುದ್ಧಿಮತ್ತೆವರೆಗಿನ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳನ್ನು ತರುತ್ತದೆ ಎಂದು ಹೇಳಿದರು.

ದೆಹಲಿ ವಿವಿ ಕ್ಯಾಂಪಸ್ ನಲ್ಲಿನ ಜನಪ್ರಿಯ ಭಕ್ಷ್ಯಗಳನ್ನು ಉಲ್ಲೇಖಿಸಿದ ಪ್ರಧಾನಿ, ವಿಶ್ವವಿದ್ಯಾಲಯದ ಉತ್ತರ ಮತ್ತು ದಕ್ಷಿಣ ಕ್ಯಾಂಪಸ್ ಸುತ್ತ-ಮುತ್ತಲಿನ ಆಹಾರ ಮಳಿಗೆಗಳಲ್ಲಿ ಭಕ್ಷ್ಯಗಳ ರುಚಿ ಬದಲಾಗದೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದರು.

ರಾಜ್ಯಪಾಲ ರವಿ ಕ್ರಮಕ್ಕೆ ವಿರೋಧ • ಸ್ಟಾಲಿನ್ ಬೆಂಬಲಕ್ಕೆ ನಿಂತ ವಿಪಕ್ಷಗಳು

# ಸಚಿವರ ವಜಾ: ಮುಖ್ಯಮಂತ್ರಿ ವಿವೇಚನಾಧಿಕಾರಕ್ಕೆ ಬಿಟ್ಟಿದ್ದು

ಚೆನ್ನೈ (ಪಿಟಿಐ): ಸಚಿವ ಸೆಂಥಿಲ್ ಬಾಲಾಜಿ ಅವರನ್ನು ಸಂಪುಟದಿಂದ ವಜಾಗೊಳಿಸಲು ಮುಂದಾಗಿದ್ದ ರಾಜ್ಯಪಾಲ ಆರ್.ಎನ್.ರವಿ ವಿರುದ್ಧ ಆಡಳಿತಾರೂಢ ಡಿಎಂಕೆ ಶುಕ್ರವಾರ ವಾಗ್ದಾಳಿ ನಡೆಸಿದೆ.

'ಸಚಿವರ ನೇಮಕ ಹಾಗೂ ವಜಾಗೊಳಿಸುವುದು ಮುಖ್ಯಮಂತ್ರಿಯ ವಿವೇಚನಾಧಿಕಾರವಾಗಿದೆ' ಎಂದು ಪ್ರತಿಪಾದಿಸಿದೆ. ಈ ವಿಚಾರವಾಗಿ ಸಿಪಿಐಎಂಎಲ್ (ಲಿಬರೇಷನ್) ಹಾಗೂ ಎನ್‌ಸಿಪಿ ಸೇರಿದಂತೆ ವಿವಿಧ ವಿರೋಧ ಪಕ್ಷಗಳು ಡಿಎಂಕೆ ಬೆಂಬಲಕ್ಕೆ ನಿಂತಿವೆ.

ರಾಜ್ಯಪಾಲ ರವಿ ಅವರು ಸೆಂಥಿಲ್ ಅವರನ್ನು ಗುರುವಾರ ಸಚಿವ ಸಂಪುಟದಿಂದ ವಜಾಗೊಳಿಸಿ ಆದೇಶಿಸಿದ್ದರು. ನಂತರ, ಕೇಂದ್ರ ಗೃಹ ಸಚಿವಾಲಯದ ಸಲಹೆ ಮೇರೆಗೆ ಈ ಕ್ರಮಕ್ಕೆ ತಡೆ ನೀಡಿದ್ದಾರೆ.

'ತಮಿಳುನಾಡು ಸರ್ಕಾರವು ರಾಜ್ಯಪಾಲರ ಕ್ರಮವನ್ನು ಒಪ್ಪಿಕೊಳ್ಳುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ರಾಜ್ಯಪಾಲರಿಗೆ ವಿವರವಾದ ಪತ್ರ ಬರೆಯುವರು' ಎಂದು ಹಣಕಾಸು ಸಚಿವ ತಂಗಂ ತೆನ್ನರಸು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ಈ ವಿಷಯದಲ್ಲಿ ರಾಜ್ಯಪಾಲರ ರವಿ ಅವರು ಏಕಪಕ್ಷೀಯ ಹಾಗೂ ಅವಸರದ ತೀರ್ಮಾನ ಕೈಗೊಂಡಿದ್ದಾರೆ. ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ರಾಜ್ಯಪಾಲರು ವಿವೇಚನೆ ಬಳಸಬೇಕು' ಎಂದರು.

**ಸಮಾಲೋಚನೆ:** ಈ ದಿಢೀರ್ ಬೆಳವಣಿಗೆ ಬೆನ್ನಲ್ಲೇ, ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಈ ವಿಷಯಕ್ಕೆ ಸಂಬಂಧಿಸಿ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿದರು.

'ರಾಜ್ಯಪಾಲರು ತಮ್ಮ ನಿರ್ಧಾರದಿಂದ ಹಿಂದೆ ಸರಿದಿರುವುದು ಅವರ ಉದ್ದೇಶವನ್ನು ಬಹಿರಂಗಗೊಳಿಸಿದೆ. ಡಿಎಂಕೆಯನ್ನು ಗುರಿಯಾಗಿಸಿ ಬಿಜೆಪಿ ಹೂಡಿದ್ದ ರಾಜಕೀಯ ಅಸ್ತ್ರ ಈಗ ತಿರುಗುಬಾಣವಾಗಿದೆ' ಎಂದು ಡಿಎಂಕೆ ಪದಾಧಿಕಾರಿಯೊಬ್ಬರು ಹೇಳಿದ್ದಾರೆ.

**'ದ್ವಂದ್ವ ನೀತಿ':** ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ, 'ಈ ಹಿಂದೆ ಸ್ಟಾಲಿನ್ ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಎಐಎಡಿಎಂಕೆ ಸರ್ಕಾರದ ಒಬ್ಬ ಸಚಿವರನ್ನು ಸಂಪುಟದಿಂದ ವಜಾಗೊಳಿಸುವಂತೆ ರಾಜ್ಯಪಾಲರನ್ನು ಒತ್ತಾಯಿಸಿದ್ದರು. ಇಂಥ ದ್ವಂದ್ವ ನಿಲುವು ಯಾಕೆ' ಎಂದು ಪ್ರಶ್ನಿಸಿದ್ದಾರೆ.

**ಆರೋಪ:** ಜಾರಿ ನಿರ್ದೇಶನಾಲಯದ (ಇ.ಡಿ) ತನಿಖೆಯಿಂದ ರಕ್ಷಿಸುವ ಉದ್ದೇಶದಿಂದಲೇ ಸೆಂಥಿಲ್ ಬಾಲಾಜಿ ಅವರನ್ನು ಸಂಪುಟದಲ್ಲಿ ಉಳಿಸಿಕೊಳ್ಳಲಾಗಿದೆ ಎಂದು ವಿರೋಧ ಪಕ್ಷ ಎಐಎಡಿಎಂಕೆ ನಾಯಕ ಡಿ. ಜಯಕುಮಾರ್ ದೂರಿದ್ದಾರೆ.

'ಯಾವುದೇ ಖಾತೆ ಇಲ್ಲದೇ ಸಚಿವ ಸ್ಥಾನದಲ್ಲಿ ಮುಂದುವರಿಸುವ ಮೂಲಕ ಸರ್ಕಾರ ಸಾರ್ವಜನಿಕರ ಹಣವನ್ನು ವ್ಯಯಿಸುತ್ತಿರುವುದು ಏಕೆ' ಎಂದಿದ್ದಾರೆ.

**ಅಧಿಕಾರ ವ್ಯಾಪ್ತಿ ಮೀರಿ ಕ್ರಮ ಕೈಗೊಳ್ಳುತ್ತಿರುವ ಕಾರಣ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರನ್ನು ತೆಗೆದುಹಾಕಬೇಕು. ರಾಜ್ಯಪಾಲರ ಹುದ್ದೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.**

**ದೀಪಂಕರ್ ಭಟ್ಟಾಚಾರ್ಯ,** ಪ್ರಧಾನ ಕಾರ್ಯದರ್ಶಿ ಸಿಪಿಐ (ಎಂಎಲ್) ಲಿಬರೇಷನ್

## ಶಾ ಸಲಹೆ: ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಲಹೆಯ ಮೇರೆಗೆ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅವರು, ಸಚಿವ ಸಂಪುಟದಿಂದ ಸೆಂಥಿಲ್ ಬಾಲಾಜಿ ಅವರನ್ನು ವಜಾಗೊಳಿಸಿ ಹೊರಡಿಸಿದ್ದ ಆದೇಶವನ್ನು ತಡೆಹಿಡಿದಿದ್ದಾರೆ.

ಸೆಂಥಿಲ್ ಅವರನ್ನು ಸಂಪುಟದಿಂದ ವಜಾಗೊಳಿಸಿದ ಬಗ್ಗೆ ವಿವರಿಸಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರಿಗೆ ರಾಜ್ಯಪಾಲ ರವಿ ಪತ್ರ ಬರೆದಿದ್ದರು. ಶಾ ಅವರಿಂದ ಸಂದೇಶ ಬಂದ ಬೆನ್ನಲ್ಲೇ, ಸ್ಟಾಲಿನ್ ಅವರಿಗೆ ಮತ್ತೊಂದು ಪತ್ರ ಕಳುಹಿಸಿದ ರಾಜ್ಯಪಾಲರು, ತಾವು ನೀಡಿದ ಆದೇಶವನ್ನು ತಡೆ ಹಿಡಿದಿದ್ದಾಗಿ ತಿಳಿಸಿದ್ದಾರೆ. 'ಇಂಥ ವಿಷಯಗಳ ಬಗ್ಗೆ ಅವಸರದ ನಿರ್ಣಯ ಕೈಗೊಳ್ಳಬಾರದು. ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರ ಅಭಿಪ್ರಾಯ ಪಡೆಯಬೇಕು' ಎಂಬ ಸಂದೇಶವನ್ನು ರಾಜ್ಯಪಾಲರಿಗೆ ಶಾ ರವಾನಿಸಿದ್ದರು.

### 'ರಾಷ್ಟ್ರಪತಿ ಸ್ಪಷ್ಟ ಸಂದೇಶ ನೀಡಲಿ'

ಮುಂಬೈ: ಎಲ್ಲ ರಾಜ್ಯಪಾಲರು ಸಾಂವಿಧಾನಿಕ ಕರ್ತವ್ಯಗಳ ನಿರ್ವಹಣೆಯಲ್ಲಿ ತಟಸ್ಥವಾಗಿರಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಜ್ಯಪಾಲರಿಗೆ ಸ್ಪಷ್ಟ ಸಂದೇಶ ಕಳುಹಿಸಬೇಕು ಎಂದು ಎನ್‌ಸಿಪಿ ಮನವಿ ಮಾಡಿದೆ.

ಬಿಜೆಪಿಯೇತರ ರಾಜ್ಯಗಳಲ್ಲಿನ ರಾಜ್ಯ ಸರ್ಕಾರದ ವಿಷಯದಲ್ಲಿ ಕೆಲ ರಾಜ್ಯಪಾಲರು ಹಸ್ತಕ್ಷೇಪ ನಡೆಸುತ್ತಿರುವ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಅವರಿಗೆ ಎನ್‌ಸಿಪಿಯ ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರಾಸ್ಟೊ ಅವರು ಮನವಿ ಮಾಡಿದ್ದಾರೆ.

ತಮ್ಮ ಅಭಿಪ್ರಾಯವನ್ನು ಸಮರ್ಥಿಸಲು ಕ್ರಾಸ್ಟೊ ಅವರು, ಮಹಾರಾಷ್ಟ್ರದ ಮಾಜಿ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಮತ್ತು ತಮಿಳುನಾಡಿನ ಈಗಿನ ರಾಜ್ಯಪಾಲ ಆರ್.ಎನ್. ರವಿ ಅವರ ಉದಾಹರಣೆ ನೀಡಿದ್ದಾರೆ.

## ಸುದ್ದಿ 2 ನಿಮಿಷ

### ಅವಧಿಪೂರ್ವ ಬಿಡುಗಡೆಗೆ 15 ಅಪರಾಧಿಗಳ ಮನವಿ: 'ಸುಪ್ರೀಂ' ನೋಟಿಸ್

ನವದೆಹಲಿ: ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ 15 ಅಪರಾಧಿಗಳು ಅವಧಿಪೂರ್ವ ಬಿಡುಗಡೆ ಕೋರಿ ಸಲ್ಲಿಸಿದ್ದ ಅರ್ಜಿಯ ಸಂಬಂಧ ಸುಪ್ರೀಂ ಕೋರ್ಟ್ ಶುಕ್ರವಾರ ಉತ್ತರ-ಪ್ರದೇಶ ಸರ್ಕಾರಕ್ಕೆ ನೋಟಿಸ್ ನೀಡಿದೆ. ಈ ಕೈದಿಗಳು 15–23 ವರ್ಷ ಸೆರೆವಾಸ ಅನುಭವಿಸಿದ್ದಾರೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ, ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠ, 'ಆ. 1, 2018ರ ನೀತಿಯಂತೆ ಈ ಕೈದಿಗಳು 'ಉತ್ತಮ ಜೀವನ' ನಡೆಸಲು ಶಿಕ್ಷೆಯಿಂದ ವಿನಾಯಿತಿ ಕೋರಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ದಾಖಲಿಸಬೇಕು' ಎಂದು ಸೂಚಿಸಿದೆ.



ಅರ್ಜಿದಾರರು ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ 15 ರಿಂದ 23 ವರ್ಷಗಳಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ. ಶಿಕ್ಷೆಯ ಬಾಕಿ ಅವಧಿಗೆ ವಿನಾಯಿತಿ ನೀಡಿ ಬಿಡುಗಡೆ ಮಾಡಲು ಕೋರ್ಟ್ ಕರುಣೆ ತೋರಬೇಕು ಎಂದು ಕೋರಿದ್ದರು.

ಸದ್ಯ ಫತೇಘರ್ ಜೈಲಿನಲ್ಲಿರುವ ಈ ಕೈದಿಗಳು, ರಶೀದ್ ಉಲ್ ಜಾಫರ್ ಅಲಿಯಾಸ್ ಚೋಟಾ ಮತ್ತು ಉತ್ತರ ಪ್ರದೇಶ ಸರ್ಕಾರ ನಡುವಣ ಪ್ರಕರಣದಲ್ಲಿ ಕೋರ್ಟ್ ಸೆ. 6, 2022ರಲ್ಲಿ ನೀಡಿದ್ದ ಆದೇಶವನ್ನು ಉಲ್ಲೇಖಿಸಿದ್ದಾರೆ.

ಅರ್ಜಿದಾರರು ವೃತ್ತಿಪರ ಅಪರಾಧಿಗಳಲ್ಲ. ಸುಮಾರು 23 ವರ್ಷದಿಂದ ಜೈಲಿನಲ್ಲಿದ್ದು ಕ್ಷಮಾಪಣೆ ಆಧಾರದಲ್ಲಿ ಬಿಡುಗಡೆಗೆ ಎಲ್ಲ ಅರ್ಹತೆ ಹೊಂದಿದ್ದಾರೆ ಎಂದು ಉಲ್ಲೇಖಿಸಲು ಸಂಬಂಧಿಸಿದ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ.

### ಉತ್ತರಪ್ರದೇಶ: ಅತೀಕ್ ಜಮೀನಿನಲ್ಲಿ ಬಡವರಿಗೆ ಮನೆ

ಪ್ರಯಾಗ್‌ರಾಜ್ (ಉತ್ತರಪ್ರದೇಶ) (ಪಿಟಿಐ): ಗ್ಯಾಂಗ್‌ಸ್ಟರ್ ಅತೀಕ್ ಅಹ್ಮದ್‌ನಿಂದ ಸ್ವಾಧೀನಪಡಿಸಿಕೊಂಡ ಅಕ್ರಮ ಜಮೀನಿನಲ್ಲಿ ಪ್ರಧಾನ ಮಂತ್ರಿ ಅವಾಸ್ ಯೋಜನಾ (ಪಿಎಂಎವೈ) ಅಡಿಯಲ್ಲಿ ನಿರ್ಮಿಸಲಾದ 76 ಮನೆಗಳನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಶುಕ್ರವಾರ ಫಲಾನುಭವಿಗಳಿಗೆ ಹಸ್ತಾಂತರಿಸಿದರು.

ಏಪ್ರಿಲ್‌ನಲ್ಲಿ ಮಾಜಿ ಸಂಸದ ಅತೀಕ್ ಅಹ್ಮದ್ ಹಾಗೂ ಆತನ ಸಹೋದರ ಅಶ್ರಫ್ ಅಹ್ಮದ್ ಪೊಲೀಸರ ಬಿಗಿ ಭದ್ರತೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ತೆರಳುತ್ತಿದ್ದಾಗ ದುಷ್ಕರ್ಮಿಗಳ ಗುಂಡೇಟಿಗೆ ಬಲಿಯಾಗಿದ್ದರು.

ಮನೆಗಳ ಹಸ್ತಾಂತರ ಕಾರ್ಯಕ್ರಮ 'ಗೃಹಪ್ರವೇಶ'ದಲ್ಲಿ ಮಾತನಾಡಿದ ಆದಿತ್ಯನಾಥ್, 'ಬಡವರ ಜಮೀನನ್ನು ಮುಕ್ತಗೊಳಿಸುವ ಬದಲು ಹಿಂದಿನ ಸರ್ಕಾರವು ಮಾಫಿಯಾದೊಂದಿಗೆ ಕೈಜೋಡಿಸಿತ್ತು. ಆದರೆ, ಈಗಿನ ಸರ್ಕಾರ ಮಾಫಿಯಾದವರಿಂದ ವಶಪಡಿಸಿಕೊಂಡ ಜಮೀನಿನಲ್ಲಿ ಬಡವರಿಗೆ ಮನೆ ನಿರ್ಮಿಸಿಕೊಡುತ್ತಿದೆ. ಈ ಕುರಿತು ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಇದರಿಂದ ಬಡವರಿಗೆ ಸೂರು ದೊರೆತು, ಸರ್ಕಾರದ ಮೇಲಿನ ನಂಬಿಕೆ ಹೆಚ್ಚಾಗುತ್ತದೆ' ಎಂದರು.

'ಕಳೆದ ಆರು ವರ್ಷಗಳಲ್ಲಿ ಪಿಎಂಎವೈ ಯೋಜನೆಯಡಿ ರಾಜ್ಯದಲ್ಲಿ 54 ಲಕ್ಷ ಬಡಜನರಿಗೆ ಮನೆಗಳನ್ನು ಮಂಜೂರು ಮಾಡಲಾಗಿದ್ದು, ಶೀಘ್ರವೇ ಇನ್ನೂ 10ಲಕ್ಷಕ್ಕೂ ಹೆಚ್ಚಿನ ಮನೆಗಳನ್ನು ನಿರ್ಮಿಸಿಕೊಡಲಾಗುವುದು' ಎಂದು ಭರವಸೆ ನೀಡಿದರು.

# ದೆಹಲಿ ಸುಗ್ರೀವಾಜ್ಞೆಗೆ ತಡೆ ಕೋರಿ 'ಸುಪ್ರೀಂ'ಗೆ ಮೊರೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ಸೇವಾ ವಲಯದ ಮೇಲಿನ ನಿಯಂತ್ರಣ ಕುರಿತು ಕೇಂದ್ರ ಸರ್ಕಾರ ತಂದಿರುವ ಸುಗ್ರೀವಾಜ್ಞೆಯ ಸಾಂವಿಧಾನಿಕತೆಯನ್ನು ದೆಹಲಿಯ ಎಎಪಿ ಸರ್ಕಾರ ಶುಕ್ರವಾರ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದೆ.

ಕೇಂದ್ರ ಸರ್ಕಾರದ ಈ ಸುಗ್ರೀವಾಜ್ಞೆಯು ಸಪ್ರೀಂಕೋರ್ಟ್‌ನ ಆದೇಶ ಮತ್ತು ಸಂವಿಧಾನದ ಮೂಲ ರಚನೆಯನ್ನು ಅತಿಕ್ರಮಿಸುತ್ತದೆ. ಹೀಗಾಗಿ ಈ ಸುಗ್ರೀವಾಜ್ಞೆಗೆ ತಡೆಯಾಜ್ಞೆ ನೀಡುವಂತೆ ದೆಹಲಿ ಸರ್ಕಾರ ಅರ್ಜಿಯಲ್ಲಿ ಕೋರಿದೆ.

ಕೇಂದ್ರವು, ಮೇ 19ರಂದು ದೆಹಲಿ ಸೇವಾ ಆಡಳಿತದ ಪತ್ರಾಂಕಿತ 'ಎ' ಗುಂಪಿನ ಅಧಿಕಾರಿಗಳ ನಿಯೋಜನೆ ಮತ್ತು ವರ್ಗಾವಣೆಗೆ ಸಂಬಂಧಿಸಿದಂತೆ ಸುಗ್ರೀವಾಜ್ಞೆ ಹೊರಡಿಸಿದೆ. ಸುಪ್ರೀಂಕೋರ್ಟ್ ಆದೇಶವಿದ್ದರೂ, ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಕೇಂದ್ರ ಸರ್ಕಾರ ವಂಚಿಸಿದೆ ಎಂದು ದೆಹಲಿಯ ಎಎಪಿ ಸರ್ಕಾರ ದೂರಿದೆ.

# ಜುಲೈನಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆ –ಐಎಂಡಿ

ಪ್ರಜಾವಾಣಿ ವಾರ್ತೆ



ನವದೆಹಲಿ: ಕರ್ನಾಟಕದ ದಕ್ಷಿಣ ಒಳನಾಡು, ತಮಿಳುನಾಡು, ಉತ್ತರ ಪ್ರದೇಶ, ಬಿಹಾರದ ಕೆಲವೆಡೆ ಜುಲೈ ತಿಂಗಳಲ್ಲಿ ಸಾಮಾನ್ಯಕ್ಕಿಂತಲೂ ಕಡಿಮೆ ಪ್ರಮಾಣದ ಮಳೆ ಆಗಬಹುದು ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಆದರೆ, ಒಟ್ಟಾರೆ ದೇಶದಲ್ಲಿ ಈ ತಿಂಗಳು ಮುಂಗಾರು ಮಳೆ ಪ್ರಮಾಣ ಸಾಮಾನ್ಯವಾಗಿ ಇರಲಿದೆ. ಪಂಜಾಬ್, ಜಮ್ಮು-ಕಾಶ್ಮೀರ, ಅಸ್ಸಾಂನಲ್ಲಿ ಮಳೆ ಕೊರತೆ ಆಗಬಹುದು ಎಂದು ಇಲಾಖೆಯು ಅಂದಾಜು ಮಾಡಿದೆ.

ಜೂನ್ ತಿಂಗಳಲ್ಲಿ ಮಳೆ ದೇಶದಲ್ಲಿ ಮುಂಗಾರು ಮಳೆಯು ಶೇ 45ರಷ್ಟು ಕೊರತೆ ಆಗಿದೆ. ಕೊರತೆ ಪ್ರಮಾಣ ದೇಶದ ಕೇಂದ್ರ ಭಾಗದಲ್ಲಿ ಶೇ 6ರಷ್ಟಿದ್ದರೆ, ಉತ್ತರದಲ್ಲಿ ಶೇ 18ರಷ್ಟಿದೆ. ಈಶಾನ್ಯ ರಾಜ್ಯಗಳಲ್ಲಿ ಮಾತ್ರ ಶೇ 42ರಷ್ಟು ಅಧಿಕ ಮಳೆಯಾಗಿದೆ.

ಜೂನ್ ತಿಂಗಳ ದ್ವಿತೀಯಾರ್ಧದಲ್ಲಿ ಬಿಪೊರ್‌ಜಾಯ್ ಚಂಡಮಾರುತದ ಪರಿಣಾಮ ಕೆಲವೆಡೆ ಉತ್ತಮವಾಗಿತ್ತು. ಆದರೆ, ಒಟ್ಟು 717 ಜಿಲ್ಲೆಗಳ ಪೈಕಿ ಸುಮಾರು 400 ಜಿಲ್ಲೆಗಳಲ್ಲಿ ಇದೇ ಕಾರಣದಿಂದ ಮಳೆ ಕೊರತೆಯಾಗಿದೆ ಎಂದು ಇಲಾಖೆಯು ವಿವರಿಸಿದೆ.

ಜುಲೈನಲ್ಲಿ ಸುರಿಯುವ ಮಳೆ ಭತ್ತ, ಬೇಳೆಕಾಳು, ಎಣ್ಣೆಕಾಳು, ಸೋಯಾ, ಕಬ್ಬು ಬೆಳೆ ಕೃಷಿಗೆ ಅಗತ್ಯವಾಗಿದೆ. ಇದು, ಸಾಮಾನ್ಯ ಮಳೆಯ ಸರಾಸರಿ ಶೇ 94 ರಿಂದ 106ರಷ್ಟಿರಲಿದೆ ಎಂದು ಐಎಂಡಿ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ಹೇಳಿದರು.



## ದಿಗ್ವಿಜಯ್ ಸಿಂಗ್ ಜತೆ ವೇದಿಕೆ ಹಂಚಿಕೊಂಡ ಗಡ್ಕರಿ

ಪುಣೆ (ಪಿಟಿಐ): ಇಲ್ಲಿ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದರಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಹಿರಿಯ ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಅವರೊಂದಿಗೆ ವೇದಿಕೆ ಹಂಚಿಕೊಂಡರು. ಇದೇ ವೇಳೆ ಮಹಾರಾಷ್ಟ್ರದ ಪಂಢರಪುರದ ವಾರ್ಷಿಕ ಯಾತ್ರೆಯಲ್ಲಿ ಸಿಂಗ್ ವಹಿಸಿದ್ದಕ್ಕೆ ಅವರನ್ನು ಹೊಗಳಿದರು.

ದಿವಂಗತ ಕಾಂಗ್ರೆಸ್ ನಾಯಕ ರಾಮಕೃಷ್ಣ ಮೋರೆ ಅವರ ಕುರಿತಾದ ಪುಸ್ತಕವನ್ನು ಉಭಯ ನಾಯಕರು ಬಿಡುಗಡೆ ಮಾಡಿದರು. 'ಸಿಂಗ್ ಅವರು ಪ್ರತಿ ವರ್ಷ ಪಂಢರಪುರಕ್ಕೆ ಪಾದಯಾತ್ರೆ ಮೂಲಕ ಬರುತ್ತಾರೆ. ಅವರಿಗಿಂತ ವಯಸ್ಸಿನಲ್ಲಿ ಚಿಕ್ಕವನಾದರೂ ನನಗೆ ಅಷ್ಟು ನಡೆಯಲು ಧೈರ್ಯವಿಲ್ಲ. ಯಾತ್ರೆ ವೇಳೆ ನೀವು ಬಹಳ ದೂರ ನಡೆದಿರಿ, ಅದಕ್ಕೆ ಅಭಿನಂದಿಸುತ್ತೇನೆ' ಎಂದು ಗಡ್ಕರಿ ಹೇಳಿದರು.

# 'ಮಣಿಪುರದಲ್ಲಿ ಶಾಂತಿ ಸ್ಥಾಪನೆ ಅಗತ್ಯ'

ಪ್ರಜಾವಾಣಿ ವಾರ್ತೆ



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇಂಫಾಲ್‌ನಲ್ಲಿರುವ ಪರಿಹಾರ ಕೇಂದ್ರಕ್ಕೆ ಶುಕ್ರವಾರ ಭೇಟಿ ನೀಡಿ ಹಿಂಸಾಚಾರದಿಂದ ನೊಂದವರಿಗೆ ಸಾಂತ್ವನ ಹೇಳಿದರು –ಪಿಟಿಐ ಚಿತ್ರ

ಗುವಾಹಟಿ: 'ಮಣಿಪುರದಲ್ಲಿ ಶಾಂತಿ ಸ್ಥಾಪಿಸುವುದು ತುರ್ತು ಅಗತ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದರು.

ಇಂಫಾಲ್‌ನಲ್ಲಿ ರಾಜಭವನಕ್ಕೆ ತೆರಳಿ, ರಾಜ್ಯಪಾಲರಾದ ಅನಸೂಯಾ ಉಯಿಕೆ ಅವರನ್ನು ಭೇಟಿ ಮಾಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಮಣಿಪುರಕ್ಕೆ ಶಾಂತಿ ಬೇಕಿದೆ. ರಾಜ್ಯ ಎದುರಿಸುತ್ತಿರುವ ಸಮಸ್ಯೆಗೆ ಹಿಂಸಾಚಾರ ಪರಿಹಾರವಾಗಲಾರದು. ಹಿಂಸೆಯಲ್ಲಿ ತೊಡಗುವುದರಿಂದ ಯಾರೂ ಏನನ್ನೂ ಸಾಧಿಸಲಾರರು' ಎಂದು ಹೇಳಿದರು.

ಮಣಿಪುರ ಪರಿಸ್ಥಿತಿ ಕುರಿತು ಪ್ರಧಾನಿ ನರೇಂದ್ರ ಮೋದಿ ಮೌನ ತಳೆದಿರುವ ಕುರಿತ ಪ್ರಶ್ನೆಗೆ, 'ರಾಜಕೀಯದ ಬಗ್ಗೆ ಮಾತನಾಡುವುದಿಲ್ಲ' ಎಂದು ರಾಹುಲ್ ಉತ್ತರಿಸಿದರು.

ರಾಜ್ಯದಲ್ಲಿ ಆಹಾರ ಹಾಗೂ ಔಷಧಗಳ ಪೂರೈಕೆ ಸೇರಿದಂತೆ ಅಗತ್ಯ ವಸ್ತುಗಳನ್ನು ಒದಗಿಸುವುದರ ಕುರಿತು ರಾಹುಲ್ ಅವರು ರಾಜ್ಯಪಾಲರೊಂದಿಗೆ ಚರ್ಚಿಸಿದರು. ರಾಜ್ಯದಲ್ಲಿನ ಕಾನೂನು–ಸುವ್ಯವಸ್ಥೆ ಬಗ್ಗೆ ಕಳವಳ ವ್ಯಕ್ತಪಡಿಸಿದರು ಎಂದು ಮೂಲಗಳು ಹೇಳಿವೆ.

**ಭೇಟಿ:** ಮೊಯಿರಂಗ್‌ನಲ್ಲಿ ಸ್ಥಾಪಿಸಿರುವ ಎರಡು ಪರಿಹಾರ ಕೇಂದ್ರಗಳಿಗೆ ರಾಹುಲ್ ಗಾಂಧಿ ಶುಕ್ರವಾರ ಭೇಟಿ ನೀಡಿದರು. ಇಲ್ಲಿಯೇ ಇರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಇಂಡಿಯನ್ ನ್ಯಾಷನಲ್ ಆರ್ಮಿಯ ಯುದ್ಧ ಸ್ಮಾರಕಕ್ಕೂ ಭೇಟಿ ನೀಡಿದ ಅವರು, ಪುಷ್ಪನಮನ ಸಲ್ಲಿಸಿದರು.

ರಾಹುಲ್ ಗಾಂಧಿ ಅವರು ಇಂಫಾಲ್‌ನಲ್ಲಿ ವಿವಿಧ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು.

'ಎಲ್ಲ ಸಮುದಾಯಗಳೊಂದಿಗೆ ಮಾತುಕತೆ ನಡೆಸಬೇಕು. ಪರಸ್ಪರರನ್ನು ಗೌರವಿಸಬೇಕು ಎಂಬ ತಳಹದಿ ಮೇಲೆ ಶಾಂತಿ ಸ್ಥಾಪನೆಯ ಕಾರ್ಯವಾಗಬೇಕು. ಎಲ್ಲರೂ ಸೌಹಾರ್ದ ಮತ್ತು ಅಹಿಂಸಾತ್ಮಕ ಮಾರ್ಗದಲ್ಲಿ ನಡೆಯಬೇಕು' ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.



# 23,000 ಬೀದಿ ಮಕ್ಕಳು ಪತ್ತೆ, ಪುನರ್ವಸತಿ

ನವದೆಹಲಿ (ಪಿಟಿಐ): 'ಬಾಲ್ ಸ್ವರಾಜ್' ವೆಬ್ ಪೋರ್ಟಲ್ ನೆರವಿನೊಂದಿಗೆ ದೇಶದಾದ್ಯಂತ ಸುಮಾರು 23,000 ಬೀದಿ ಮಕ್ಕಳನ್ನು ಗುರುತಿಸಿ ಅವರಿಗೆ ಪುನರ್ವಸತಿ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದರು.

ಈ ವೆಬ್‌ಸೈಟ್‌ನಲ್ಲಿ ಅಂಥ ಮಕ್ಕಳ ಮಾಹಿತಿಯನ್ನು ಅಪ್ಲೋಡ್ ಮಾಡಿ ಪುನರ್ವಸತಿಗೆ ಕಲ್ಪಿಸುವ ಉದ್ದೇಶದಿಂದ ಹುಡುಕಾಟ ನಡೆಸಲಾಗುತ್ತದೆ.

23,000 ಮಕ್ಕಳ ಪೈಕಿ ಶೇ 53ರಷ್ಟು ಮಕ್ಕಳು ಕುಟುಂಬದೊಂದಿಗೆ ಬೀದಿಗಳಲ್ಲಿ ವಾಸಿಸುತ್ತಿದ್ದರು, ಶೇ 43ರಷ್ಟು ಮಕ್ಕಳು ಹಗಲು ಬೀದಿ ಸುತ್ತುತ್ತ ರಾತ್ರಿ ಮನೆಗೆ ತೆರಳುತ್ತಿದ್ದರು ಮತ್ತು ಶೇ 4ರಷ್ಟು ಮಕ್ಕಳು ಏಕಾಂಗಿಯಾಗಿ ಬೀದಿಯಲ್ಲಿ ವಾಸಿಸುತ್ತಿದ್ದರು ಎಂದು ತಿಳಿಸಿದರು.

# ಭದ್ರತಾ ಮಂಡಳಿ ಸುಧಾರಣೆ ವಿಳಂಬ: ಭಾರತ ಟೀಕೆ

ವಿಶ್ವಸಂಸ್ಥೆ (ಪಿಟಿಐ): ಭದ್ರತಾ ಮಂಡಳಿಯಲ್ಲಿ ಸುಧಾರಣೆ ತರುವುದಕ್ಕೆ ಸಂಬಂಧಿಸಿ ಸರ್ಕಾರಗಳ ನಡುವಿನ ಸಮಾಲೋಚನೆಯನ್ನು ಮುಂದಿನ ಅಧಿವೇಶನದಲ್ಲಿ ನಡೆಸಲು ವಿಶ್ವಸಂಸ್ಥೆಯ ಸಾಮಾನ್ಯಸಭೆ ನಿರ್ಧರಿಸಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸುಧಾರಣೆಯಾಗಬೇಕು, ಮಂಡಳಿಯಲ್ಲಿ ಸ್ಥಾನ ಪಡೆಯಬೇಕು ಎಂಬ ಭಾರತದ ಪ್ರಯತ್ನಕ್ಕೆ ಮತ್ತೆ ಹಿನ್ನಡೆಯಾದಂತಾಗಿದೆ.

ಈ ನಿರ್ಧಾರವನ್ನು ಟೀಕಿಸಿರುವ ಭಾರತ, 'ಭದ್ರತಾ ಮಂಡಳಿಯಲ್ಲಿ ಸುಧಾರಣೆ ತರುವುದಕ್ಕಾಗಿ ಒದಗಿದ್ದ ಮತ್ತೊಂದು ಅವಕಾಶವನ್ನು ಹಾಳು ಮಾಡಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

'ಸುಧಾರಣೆ ಕುರಿತ ಪ್ರಕ್ರಿಯೆ ಮತ್ತೆ 75 ವರ್ಷಗಳ ಕಾಲ ನಡೆಯಲಿದ್ದು, ಯಾವುದೇ ಉದ್ದೇಶ ಸಾಧನೆಯೂ ಆಗುವುದಿಲ್ಲ' ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಹೇಳಿದ್ದಾರೆ.

'ಮುಂದಿನ ಸಾಮಾನ್ಯಸಭೆಯಲ್ಲಿ ಚರ್ಚೆ ನಡೆಸಲಾಗುವುದು ಎಂಬ ನಿರ್ಧಾರವು ವಿವೇಚನಾರಹಿತ ಕಸರತ್ತು ಆಗಬಾರದು' ಎಂದು ಕಾಂಬೋಜ್ ಅವರು ಹೇಳಿದ್ದಾರೆ

# ಮೋದಿ–ಪುಟಿನ್ ಮಾತುಕತೆ

ಮಾಸ್ಕೊ/ನವದೆಹಲಿ (ಪಿಟಿಐ): ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಶುಕ್ರವಾರ ದೂರವಾಣಿ ಮೂಲಕ ಮಾತುಕತೆ ನಡೆಸಿ, ಉಕ್ರೇನ್ ಸಂಘರ್ಷದ ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಪುಟಿನ್

ಎರಡೂ ರಾಷ್ಟ್ರಗಳ ನಡುವಿನ ಬಾಂಧವ್ಯ ಹಾಗೂ ಪಾಲುದಾರಿಕೆಯನ್ನು ಬಲವರ್ಧನೆಗೊಳಿಸಿಕೊಳ್ಳುವ ಬದ್ಧತೆಯನ್ನು ಪುನರುಚ್ಚರಿಸಿದರು.

'ಉಭಯ ನಾಯಕರು ದ್ವಿಪಕ್ಷೀಯ ಸಹಕಾರದ ಪ್ರಗತಿ ಪರಿಶೀಲಿಸಿದರು. ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ನಿರಂತರ ಸಂಪರ್ಕದಲ್ಲಿರಲು ಮತ್ತು ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಒಪ್ಪಿಗೆ ಸೂಚಿಸಿದರು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

ಜುಲೈ 4ರಂದು ಭಾರತ ಆಯೋಜಿಸಿರುವ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ವರ್ಚುವಲ್ ಶೃಂಗಸಭೆಗೂ ಮುನ್ನ ದೂರವಾಣಿ ಮೂಲಕ ಮಾತುಕತೆ ನಡೆಸಿದರು.

## ಮೋದಿ ರಷ್ಯಾದ ಮಿತ್ರ


ಮಾಸ್ಕೊ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ರಷ್ಯಾದ ಹಿರಿಯ ಮಿತ್ರ. ಅವರು ಜಾರಿಗೊಳಿಸಿರುವ ಮೇಕ್ ಇನ್ ಇಂಡಿಯಾ ಕಾರ್ಯಕ್ರಮವು ಭಾರತದ ಆರ್ಥಿಕತೆ ಮೇಲೆ ಗಮನಾರ್ಹ ಪರಿಣಾಮವನ್ನುಂಟು ಮಾಡಿದೆ' ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ.

ರಷ್ಯಾದ 'ಏಜೆನ್ಸಿ ಫಾರ್ ಸ್ಟ್ರಾಟೆಜಿಕ್ ಇನಿಷಿಯೇಟಿವ್ಸ್' (ಎಎಸ್‌ಐ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಮೇಕ್ ಇನ್ ಇಂಡಿಯಾ ಉತ್ತಮ ಫಲಿತಾಂಶ ನೀಡುತ್ತಿದೆ. ಇಂಥ ಕಾರ್ಯಕ್ರಮಗಳನ್ನು ಅನುಸರಿಸುವುದರಿಂದ ಅಪಾಯವೇನಿಲ್ಲ' ಎಂದು ಪುಟಿನ್ ಹೇಳಿದರು.

ದೇಶೀಯವಾಗಿ ಉತ್ಪಾದನೆ ಹೆಚ್ಚಲು ಹಾಗೂ ವಿದೇಶಿ ಬಂಡವಾಳ ಹರಿದುಬರಲು ಮೋದಿ ನೇತೃತ್ವದ ಸರ್ಕಾರ ಪೂರಕ ವಾತಾವರಣ ನಿರ್ಮಿಸಿದೆ. ಎಂದು ಅವರು ಹೇಳಿದರು

**ಷೇರುಪೇಟೆ ವಹಿವಾಟು** 803




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 18,972 |
| ಇಂದಿನ ಅಂತ್ಯ | 19,189 |
| ▲ | 217 |
| ದಿನದ ಗರಿಷ್ಠ | 19,201 |

**ಈರುಳ್ಳಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1200-1500 |
| ಮಧ್ಯಮ | ₹800-1200 |
| ಸಣ್ಣ | ₹400-800 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹600 |
| 12 ಮೊಟ್ಟೆಗೆ | ₹80 |
| ಮೈಸೂರು | |
| 100 ಮೊಟ್ಟೆಗೆ | ₹600 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1690 (1690) |
| ಸೋಯಾ (ರಿಫೈನ್ಡ್) | ₹945 (950) |
| ಸೂರ್ಯಕಾಂತಿ (ರಿಫೈನ್ಡ್) | ₹940 (950) |
| ಪಾಮೋಲಿನ್ | ₹850 (850) |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹150 |
| ಆರ್‌ಎಸ್‌ಎಸ್-5 | ₹145 |
| ಗುಡ್ ಲಾಟ್ | ₹126 |

# ಆಯ್ದ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕೆಲವು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿದರವನ್ನು ಜುಲೈ–ಸೆಪ್ಟೆಂಬರ್ ಅವಧಿಗೆ ಶೇಕಡ 0.3ರವರೆಗೆ ಹೆಚ್ಚಿಸಿದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಬಡ್ಡಿದರವು ಗರಿಷ್ಠ ಮಟ್ಟದಲ್ಲಿ ಇರುವುದಕ್ಕೆ ಹೊಂದುವಂತೆ ಈ ಪರಿಷ್ಕರಣೆ ಮಾಡಲಾಗಿದೆ.

ಹಣಕಾಸು ಸಚಿವಾಲಯದ ಪ್ರಕಟಣೆಯಂತೆ, 5 ವರ್ಷಗಳ ಅವಧಿಯ ನಿಶ್ಚಿತ ಠೇವಣಿ (ಆರ್.ಡಿ.) ಬಡ್ಡಿದರ ಶೇ 0.3ರಷ್ಟು ಹೆಚ್ಚಳ ಮಾಡಿದ್ದು, ಬಡ್ಡಿದರವು ಶೇ 6.5ಕ್ಕೆ ಏರಿಕೆ ಆಗಿದೆ.

ಅಂಚೆ ಕಚೇರಿಯ ಒಂದು ವರ್ಷದ ಅವಧಿ ಠೇವಣಿಯ ಬಡ್ಡಿದರವು ಶೇ 0.1ರಷ್ಟು ಹೆಚ್ಚಾಗಿದ್ದು ಶೇ 6.9ಕ್ಕೆ ತಲುಪಿದೆ. ಎರಡು ವರ್ಷಗಳ ಅವಧಿ ಠೇವಣಿಯ ಬಡ್ಡಿದರವು ಶೇ 6.9ರಿಂದ ಶೇ 7ಕ್ಕೆ ಏರಿಕೆ ಆಗಿದೆ. 3 ಮತ್ತು 5 ವರ್ಷಗಳ ಅವಧಿ ಠೇವಣಿಗಳ ಬಡ್ಡಿದರವನ್ನು ಕ್ರಮವಾಗಿ ಶೇ 7 ಮತ್ತು ಶೇ 7.5ರಲ್ಲಿಯೇ ಉಳಿಸಿಕೊಳ್ಳಲಾಗಿದೆ.

**ಬದಲಿಲ್ಲ**

ಸುಕನ್ಯಾ ಸಮೃದ್ಧಿ (ಶೇ 8), ಪಿಪಿಎಫ್ (ಶೇ 7.1), ಉಳಿತಾಯ ಠೇವಣಿ (ಶೇ 4), ರಾಷ್ಟ್ರೀಯ ಉಳಿತಾಯ ಪತ್ರ (ಶೇ 7.7), ಹಿರಿಯ ನಾಗರಿಕರ ಉಳಿತಾಯ ಯೋಜನೆ (ಶೇ 8.2), ಕಿಸಾನ್ ವಿಕಾಸ ಪತ್ರದ (ಶೇ 7.5) ಬಡ್ಡಿದರಗಳಲ್ಲಿ ಬದಲಾವಣೆ ಮಾಡಿಲ್ಲ. ತಿಂಗಳ ಆದಾಯ ಯೋಜನೆಗಳ ಬಡ್ಡಿದರದಲ್ಲಿಯೂ (ಶೇ 7.4) ಬದಲಾವಣೆ ಆಗಿಲ್ಲ.

## ಮೂಲಸೌಕರ್ಯ: ಬೆಳವಣಿಗೆ ಕುಸಿತ

ನವದೆಹಲಿ (ಪಿಟಿಐ): ಕಚ್ಚಾ ತೈಲ, ನೈಸರ್ಗಿಕ ಅನಿಲ ಮತ್ತು ವಿದ್ಯುತ್ ಉತ್ಪಾದನೆ ತಗ್ಗಿರುವುದರಿಂದ ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಮೇ ತಿಂಗಳಿನಲ್ಲಿ ಶೇ 4.3ಕ್ಕೆ ಇಳಿಕೆ ಕಂಡಿದೆ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, 2022ರ ಮೇ ತಿಂಗಳಿನಲ್ಲಿ ವಲಯಗಳ ಬೆಳವಣಿಗೆಯು ಶೇ 19.3ರಷ್ಟು ಇತ್ತು. 2023ರ ಏಪ್ರಿಲ್‌ನಲ್ಲಿ ಶೇ 4.3ರಷ್ಟು ಬೆಳವಣಿಗೆ ಕಂಡಿತ್ತು. ಏಪ್ರಿಲ್–ಮೇ ಅವಧಿಯಲ್ಲಿ ಶೇ 4.3ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ಅವಧಿಯಲ್ಲಿ ಶೇ 14.3ರಷ್ಟು ಇತ್ತು.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 300-350 |
| ನಡುಗೋಲು | 450-500 |
| ರಾಶಿ | 500-550 |
| ರಾಶಿ ಉತ್ತಮ | 750-800 |
| ಜರಡಿ | 1000- 1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 800-900 |
| ಹಸಿರು ಉತ್ತಮ | 1000-1100 |
| ಹಸಿರು ಅತಿಉತ್ತಮ | 1600-1650 |
| ಕಾಳು ಮೆಣಸು | 480 |
| **ಅಡಿಕೆ** | |
| **ಕುಮಟಾ** | |
| ಚಿಪ್ಪು | 29999-32899 |
| ಕೋಕ | 21509-32509 |
| ಹಳೆಚಾಲಿ | 38509-40839 |
| ಹೊಸಚಾಲಿ | 36809-38599 |
| **ಶಿವಮೊಗ್ಗ** | |
| ಬೆಟ್ಟೆ | 45899-53029 |
| ಗೊರಬಲು | 18090-39698 |
| ರಾಶಿ | 42159-53599 |
| ಸರಕು | 51000-78109 |
| **ಸಿದ್ದಾಪುರ** | |
| ಬಿಳಿಗೋಟು | 29019-33299 |
| ಚಾಲಿ | 36469-39099 |
| ಕೋಕ | 27699-32619 |
| ಕೆಂಪುಗೋಟು | 31889-33289 |
| ರಾಶಿ | 45109-50469 |
| ತಟ್ಟಿಬೆಟ್ಟೆ | 40009-49619 |
| **ಶಿರಸಿ** | |
| ಬೆಟ್ಟೆ | 41269-45899 |
| ಬಿಳಿಗೋಟು | 26921-33698 |
| ಚಾಲಿ | 36199-39399 |
| ಕೆಂಪುಗೋಟು | 28601-37696 |
| ರಾಶಿ | 46099-50489 |
| **ಯಲ್ಲಾಪುರ** | |
| ಬಿಳಿಗೋಟು | 25218-35719 |
| ಚಾಲಿ | 35499-39469 |
| ಕೋಕ | 19099-33200 |
| ಕೆಂಪುಗೋಟು | 28899-35399 |
| ರಾಶಿ | 43900-55969 |
| ತಟ್ಟಿಬೆಟ್ಟೆ | 38899-48369 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| ಮೂಡಿಗೆರೆ | | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | --- | 14500 | 14600 | 161.60 |
| ಎಸಿ | --- | 7400 | 7400 | |
| ಆರ್‌ಪಿ | --- | 10500 | 10600 | ಲಂಡನ್ |
| ಆರ್‌ಸಿ | --- | 240 on OT | 6050 | 2570 ಡಾಲರ್ಸ್ |

ಶೇ 35ರಷ್ಟು ಹೆಚ್ಚು ಆಮದು: ವರ್ಷದಲ್ಲಿ ಬೆಲೆ ಶೇ 25ರಷ್ಟು ಏರಿಕೆ

# 12 ಲಕ್ಷ ಟನ್ ತೊಗರಿ ಆಮದು



ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು 12 ಲಕ್ಷ ಟನ್ ತೊಗರಿ ಬೇಳೆಯನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಕಳೆದ ವರ್ಷದ ಆಮದು ಪ್ರಮಾಣಕ್ಕೆ ಹೋಲಿಸಿದರೆ ಇದು ಶೇಕಡ 35ರಷ್ಟು ಹೆಚ್ಚು. ದೇಶದಲ್ಲಿ ತೊಗರಿ ಬೇಳೆ ಲಭ್ಯತೆ ಹೆಚ್ಚು ಮಾಡಲು ಹಾಗೂ ಅದರ ಬೆಲೆ ಏರಿಕೆ ತಡೆಯೊಡ್ಡುವ ಉದ್ದೇಶದಿಂದ ಕೇಂದ್ರ ಈ ಕ್ರಮ ಕೈಗೊಳ್ಳುತ್ತಿದೆ.

'ತೊಗರಿ ಬೇಳೆಯು ಸಮಸ್ಯೆ ಸೃಷ್ಟಿಸುತ್ತಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಇದ್ದ ಮಟ್ಟಕ್ಕೆ ಹೋಲಿಸಿದರೆ ಈ ಬಾರಿ ತೊಗರಿ ಬೇಳೆಯ ಅಖಿಲ ಭಾರತ ಸರಾಸರಿ ಬೆಲೆಯು ಶೇ 25ರಷ್ಟು ಹೆಚ್ಚಾಗಿದೆ. ಆದರೆ ಆಮದು ಶುರುವಾದ ನಂತರದಲ್ಲಿ ಬೆಲೆಯು ಕಡಿಮೆ ಆಗುತ್ತದೆ' ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಹೇಳಿದ್ದಾರೆ.

ತೊಗರಿ ಬೇಳೆಯ ದೇಶಿ ಉತ್ಪಾದನೆ ಕಡಿಮೆ ಆಗಿದೆ. 2022–23ನೆಯ ಬೆಳೆ ವರ್ಷದಲ್ಲಿ 30 ಲಕ್ಷ ಟನ್ ಉತ್ಪಾದನೆ ಆಗಿದೆ. ಹಿಂದಿನ ಬೆಳೆ ವರ್ಷದಲ್ಲಿ ಇದು 39 ಲಕ್ಷ ಟನ್ ಆಗಿತ್ತು.

'ಭಾರತದಲ್ಲಿ 44–45 ಲಕ್ಷ ಟನ್ ತೊಗರಿ ಬೇಳೆ ಬಳಕೆಯಾಗುತ್ತದೆ. ಪ್ರತಿ ವರ್ಷವೂ ಆಮದು ಮಾಡಿಕೊಳ್ಳಲಾಗುತ್ತದೆ. ಈ ವರ್ಷ ಹೆಚ್ಚು ಆಮದು ಮಾಡಿಕೊಳ್ಳಬೇಕಿದೆ' ಎಂದು ಅವರು ತಿಳಿಸಿದ್ದಾರೆ. 'ಇದುವರೆಗೆ 6 ಲಕ್ಷ ಟನ್ ತೊಗರಿ ಬೇಳೆಯನ್ನು ಆಮದು ಮಾಡಿಕೊಳ್ಳಲಾಗಿದೆ. ಪೂರ್ವ ಆಫ್ರಿಕಾದ ದೇಶಗಳಿಂದ ಆಮದು ಮಾಡಿಕೊಳ್ಳುವ ತೊಗರಿ ಬೇಳೆಯು ಆಗಸ್ಟ್‌ನಲ್ಲಿ ನಮ್ಮಲ್ಲಿಗೆ ಬರುತ್ತದೆ. ಆಗ ಇಲ್ಲಿ ಬೆಲೆ ಇಳಿಯುತ್ತದೆ' ಎಂದು ಅವರು ಹೇಳಿದ್ದಾರೆ.

'ತೊಗರಿ ಬೇಳೆ ದಾಸ್ತಾನಿಗೆ ಮಿತಿ ಹೇರಿದ ನಂತರದಲ್ಲಿ ಬೆಲೆಯಲ್ಲಿ ಇಳಿಕೆ ಕಂಡುಬಂದಿದೆ' ಎಂದು ಅವರು ತಿಳಿಸಿದ್ದಾರೆ. ಕೇಂದ್ರವು ತನ್ನ ಸಂಗ್ರಹದಿಂದ ಒಟ್ಟು 50 ಸಾವಿರ ಟನ್ ತೊಗರಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ.

ಹಿಂದಿನ ವರ್ಷದ ಮಟ್ಟಕ್ಕೆ ಹೋಲಿಸಿದರೆ ಉದ್ದಿನ ಬೇಳೆಯ ಅಖಿಲ ಭಾರತ ಸರಾಸರಿ ಬೆಲೆಯು ಶೇ 7.22ರಷ್ಟು ಹೆಚ್ಚಾಗಿದೆ. ಮ್ಯಾನ್ಮಾರ್‌ನಿಂದ ಉದ್ದಿನ ಬೇಳೆ ಭಾರತಕ್ಕೆ ಆಮದಾದ ನಂತರ ಬೆಲೆ ತಗ್ಗಲಿದೆ ಎಂದು ಅವರು ಹೇಳಿದ್ದಾರೆ.

ಹೆಸರು ಬೇಳೆ ಬೆಲೆಯು ಶೇ 7.07ರಷ್ಟು ಹೆಚ್ಚಾಗಿದೆ. ಮಧ್ಯಪ್ರದೇಶದಲ್ಲಿ ಇದರ ಬೆಳೆಯು ಹೆಚ್ಚಾಗುವ ನಿರೀಕ್ಷೆ ಇದ್ದು, ಬೆಲೆಯು ತಗ್ಗಲಿದೆ ಎಂದು ಸಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

### '15 ದಿನದಲ್ಲಿ ಟೊಮೆಟೊ ದರ ಇಳಿಕೆ'



ನವದೆಹಲಿ (ಪಿಟಿಐ): ಟೊಮೆಟೊ ದರವು 15 ದಿನಗಳಲ್ಲಿ ಇಳಿಕೆ ಕಾಣಲಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಹೇಳಿದ್ದಾರೆ.

ಟೊಮೆಟೊ ಬೆಳೆಯುವ ಪ್ರದೇಶಗಳಿಂದ ಪೂರೈಕೆ ಹೆಚ್ಚಾಗಿದೆ. ಹೀಗಾಗಿ ದರವು ಒಂದು ತಿಂಗಳಲ್ಲಿ ಸಹಜ ಮಟ್ಟಕ್ಕೆ ಬರಲಿದೆ ಎಂದಿದ್ದಾರೆ. ಪ್ರಮುಖ ನಗರಗಳಲ್ಲಿ ಟೊಮೆಟೊ ದರ ಈಗ ಕೆ.ಜಿ.ಗೆ ₹100 ದಾಟಿದೆ.

ಪ್ರತಿ ವರ್ಷವೂ ಈ ಅವಧಿಯಲ್ಲಿ ಟೊಮೆಟೊ ದರ ಏರಿಕೆ ಆಗುವುದು ಸಹಜ. ಪ್ರತಿ ದೇಶದಲ್ಲಿ ಪ್ರತಿ ಕೃಷಿ ಉತ್ಪನ್ನದ ದರ ನಿರ್ದಿಷ್ಟ ಅವಧಿಗೆ ಏರಿಕೆ ಕಾಣುತ್ತದೆ ಎಂದು ಅವರು ಹೇಳಿದ್ದಾರೆ.

## 'ಕುಟುಂಬದ ತಿಂಗಳ ಖರ್ಚು ತಗ್ಗಿಸಲು ಜಿಎಸ್‌ಟಿ ನೆರವು'

ನವದೆಹಲಿ (ಪಿಟಿಐ): ದೇಶದಲ್ಲಿ ಉತ್ಪನ್ನಗಳಿಗೆ ಬೇಡಿಕೆ ಹಾಗೂ ಬಳಕೆಗೆ ಉತ್ತೇಜನ ನೀಡಲು, ಕುಟುಂಬಗಳ ತಿಂಗಳ ಖರ್ಚನ್ನು ಕಡಿಮೆ ಮಾಡಲು ಜಿಎಸ್‌ಟಿ ವ್ಯವಸ್ಥೆಯು ನೆರವಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ಹೇಳಿದೆ.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದು ಆರು ವರ್ಷಗಳಾಗಿವೆ. ಜಿಎಸ್‌ಟಿ ವ್ಯವಸ್ಥೆಯನ್ನು 2017ರ ಜುಲೈ 1ರಂದು ಜಾರಿಗೊಳಿಸಲಾಯಿತು.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬರುವುದಕ್ಕೆ ಮೊದಲು ಮತ್ತು ನಂತರ ವಿವಿಧ ಸರಕುಗಳ ಮೇಲಿನ ತೆರಿಗೆ ದರಗಳ ಹೋಲಿಕೆಯನ್ನು ನೀಡಿರುವ ಸರ್ಕಾರವು, ಪ್ರಕ್ರಿಯೆಗಳನ್ನು ಸುಲಭಗೊಳಿಸುವುದರಿಂದ ಹೂಡಿಕೆಯನ್ನು ಹೆಚ್ಚಿಸುವವರೆಗೆ ಜಿಎಸ್‌ಟಿಯು ಪ್ರಗತಿಯ ವೇಗವರ್ಧಕ ಆಗಿದೆ ಎಂದು ತಿಳಿಸಿದೆ.


ದಾಖಲೆ ಮಟ್ಟಕ್ಕೆ ಏರಿಕೆ ಕಂಡ ಸೆನ್ಸೆಕ್ಸ್, ನಿಫ್ಟಿ

# ಷೇರುಪೇಟೆಯಲ್ಲಿ ಗೂಳಿ ಓಟ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಶುಕ್ರವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದವು. ಇನ್ಫೊಸಿಸ್, ಎಚ್‌ಡಿಎಫ್‌ಸಿ, ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಟಿಸಿಎಸ್ ಕಂಪನಿಯ ಷೇರುಗಳು ಹೆಚ್ಚಿನ ಖರೀದಿ ವಹಿವಾಟಿಗೆ ಒಳಗಾಗಿದ್ದು ಗೂಳಿ ಓಟಕ್ಕೆ ಉತ್ತೇಜನ ನೀಡಿತು.

ವಿದೇಶಿ ಬಂಡವಾಳ ಒಳಹರಿವು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ನಡೆದ ಸ್ಥಿರ ವಹಿವಾಟು ಸಹ ಸಕಾರಾತ್ಮಕ ವಹಿವಾಟಿಗೆ ಕಾರಣವಾಯಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 803 ಅಂಶ ಜಿಗಿತ ಕಂಡು 64,718 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ಆ ಮೂಲಕ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 217 ಅಂಶ ಏರಿಕೆ ಕಂಡು ದಾಖಲೆಯ 19,189 ಅಂಶಗಳಿಗೆ ಏರಿಕೆ ಕಂಡಿತು. ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 1,739 ಅಂಶ, ನಿಫ್ಟಿ 523 ಅಂಶ ಏರಿಕೆ ಕಂಡಿವೆ.



ಹೂಡಿಕೆದಾರರು ದೇಶದ ಮಾರುಕಟ್ಟೆಯ ದೀರ್ಘಾವಧಿಯ ಬೆಳವಣಿಗೆಯ ಕುರಿತು ಆಶಾವಾದ ಹೊಂದಿದ್ದಾರೆ. ಅಲ್ಲದೆ, ಅಮೆರಿಕದಲ್ಲಿ ಆರ್ಥಿಕ ಹಿಂಜರಿತ ಆಗಬಹುದು ಎನ್ನುವ ಆತಂಕ ಕಡಿಮೆ ಆಗಿರುವುದು ಸಹ ಪ್ರಭಾವ ಬೀರಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ರಿಟೇಲ್ ರಿಸರ್ಚ್‌ನ ಉಪ ಮುಖ್ಯಸ್ಥ ದೇವರ್ಷ್ ವಕೀಲ್ ಹೇಳಿದ್ದಾರೆ.

**ಮಾರುಕಟ್ಟೆ ಮೌಲ್ಯ ಹೆಚ್ಚಳ**

ನವದೆಹಲಿ: ಮುಂಬೈ ಷೇರುಪೇಟೆಯ ಮಾರುಕಟ್ಟೆ ಬಂಡವಾಳ ಮೌಲ್ಯವು ಶುಕ್ರವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ದಾಖಲೆ ಮಟ್ಟವಾದ ₹296.48 ಲಕ್ಷ ಕೋಟಿಗೆ ಏರಿಕೆ ಕಂಡಿತು. ಮೂರು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹5.80 ಲಕ್ಷ ಕೋಟಿ ಹೆಚ್ಚಾಗಿದೆ.



ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದ ಭಾರತ ತಂಡ –ಟ್ವಿಟರ್ ಚಿತ್ರ

## ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್: ಭಾರತಕ್ಕೆ ಎಂಟನೇ ಬಾರಿ ಪ್ರಶಸ್ತಿ

ಬೂಸಾನ್ (ದಕ್ಷಿಣ ಕೊರಿಯಾ): ಪ್ರಮುಖ ದಾಳಿಗಾರ ಪವನ್ ಸೆಹ್ರಾವತ್ ಅವರ 'ಸೂಪರ್ ಟೆನ್' ನೆರವಿನಿಂದ ಭಾರತ ತಂಡದವರು ಶುಕ್ರವಾರ ನಡೆದ ಫೈನಲ್‌ನಲ್ಲಿ ಇರಾನ್ ತಂಡವನ್ನು 42–32 ರಲ್ಲಿ 10 ಪಾಯಿಂಟ್‌ಗಳಿಂದ ಸೋಲಿಸಿ 11ನೇ ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಆಡಿದ ಎಲ್ಲಾ ಪಂದ್ಯಗಳನ್ನು ಗೆದ್ದುಕೊಂಡ ಭಾರತ ಎಂಟನೇ ಬಾರಿ ಚಾಂಪಿಯನ್ ಆಯಿತು. ಇರಾನ್ ತಂಡ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದರೂ, ಭಾರತದ ಎದುರು ಎರಡು ದಿನಗಳಲ್ಲಿ ಎರಡು ಬಾರಿ ಸೋಲಾನುಭವಿಸಿತು.

ಭಾರತದ ಪರ ಪವನ್ 13 ಪಾಯಿಂಟ್ ಗಳಿಸಿದರು. ಅಸ್ಲಾಂ ಇನಾಮದಾರ್ (8 ಪಾಯಿಂಟ್) ಮತ್ತು ಅರ್ಜುನ್ ದೇಶ್ವಾಲ್ (5 ಪಾಯಿಂಟ್) ಅವರೂ ಗೆಲುವಿನಲ್ಲಿ ಪಾತ್ರವಹಿಸಿದರು. ವಿರಾಮದ ವೇಳೆ ಭಾರತ 23–11 ಪಾಯಿಂಟ್‌ಗಳಿಂದ ಮುಂದಿತ್ತು. ಉತ್ತರಾರ್ಧದಲ್ಲಿ ಇರಾನ್ ನಾಯಕ ಮೊಹಮ್ಮದ್‌ರೇಜಾ ಶಾದ್ಲುಯಿ ಚಿಯಾನಿ ಅವರು ಉತ್ತಮ ಪ್ರದರ್ಶನ ನೀಡಿದ್ದರಿಂದ ಭಾರತದ ಗೆಲುವಿನ ಅಂತರ ಸ್ವಲ್ಪ ಇಳಿಮುಖವಾಯಿತು.

## ಡುರಾಂಡ್: ಟ್ರೋಫಿ ಪ್ರವಾಸಕ್ಕೆ ಚಾಲನೆ

ನವದೆಹಲಿ (ಪಿಟಿಐ): ಏಷ್ಯಾದ ಅತೀ ಹಳೆಯ ಫುಟ್‌ಬಾಲ್ ಟೂರ್ನಿ ಎನಿಸಿರುವ ಡುರಾಂಡ್ ಕಪ್‌ನಲ್ಲಿ 27 ವರ್ಷಗಳ ನಂತರ ವಿದೇಶಿ ತಂಡಗಳು ಭಾಗವಹಿಸಲಿವೆ ಎಂದು ಸಂಘಟಕರು ಶುಕ್ರವಾರ ತಿಳಿಸಿದ್ದಾರೆ. ಇದು ದೇಶದ ಫುಟ್‌ಬಾಲ್ ಋತುವಿನ ಮೊದಲ ಟೂರ್ನಿ ಕೂಡ.

ವಿಶ್ವದ ಮೂರನೇ ಅತೀ ಹಳೆಯ ಟೂರ್ನಿಯೂ ಆಗಿರುವ ಡುರಾಂಡ್ ಕಪ್‌ನಲ್ಲಿ ಈ ಬಾರಿ ನೇಪಾಳ, ಭೂತಾನ್, ಬಾಂಗ್ಲಾದೇಶದ ತಂಡಗಳೂ ಸೇರಿ 24 ತಂಡಗಳು ಭಾಗವಹಿಸಲಿವೆ.

ಆಗಸ್ಟ್ 3ರಂದು ಕೋಲ್ಕತ್ತದಲ್ಲಿ ಟೂರ್ನಿ ಆರಂಭವಾಗಲಿದ್ದು, 132ನೇ ಡುರಾಂಡ್ ಕಪ್‌ನ ಟ್ರೋಫಿ ಪ್ರವಾಸಕ್ಕೆ ಶುಕ್ರವಾರ ಚಾಲನೆ ಇಲ್ಲಿ ನೀಡಲಾಯಿತು. ಭೂಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ, ಏರ್ ಚೀಫ್ ಮಾರ್ಷಲ್ ವಿ.ಆರ್.ಚೌಧರಿ ಮತ್ತು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರು ಟ್ರೋಫಿ ಪ್ರವಾಸಕ್ಕೆ ನಿಶಾನೆ ತೋರಿದರು.

ಕೋಲ್ಕತ್ತದ ಜೊತೆ ಗುವಾಹಟಿ, ಕೊಕ್ರಾಝಾರ್ ಮತ್ತು ಶಿಲ್ಲಾಂಗ್‌ನಲ್ಲೂ ಪಂದ್ಯಗಳು ನಡೆಯಲಿವೆ. ಫೈನಲ್ ಪಂದ್ಯ ಕೋಲ್ಕತ್ತದಲ್ಲಿ ನಿಗದಿಯಾಗಿದೆ.

ಸೇನಾ ಪಡೆಗಳು ಸಂಘಟಿಸುವ ಈ ಟೂರ್ನಿ ದೇಶಕ್ಕೆ ಹಲವು ಫುಟ್‌ಬಾಲ್ ತಾರೆಗಳ ಸಾಮರ್ಥ್ಯ ಪ್ರದರ್ಶನಕ್ಕೆ ವೇದಿಕೆಯಾಗಿದೆ.

ಕೋಲ್ಕತ್ತದಲ್ಲಿ ಕಳೆದ ವರ್ಷ ಸುನೀಲ್ ಚೆಟ್ರಿ ವೃತ್ತಿ ಜೀವನದಲ್ಲೇ ಮೊದಲ ಬಾರಿ ಡುರಾಂಡ್ ಕಪ್ ಟೂರ್ನಿ ಗೆದ್ದುಕೊಂಡಿದ್ದರು. ಅವರ ನೇತೃತ್ವದ ಬೆಂಗಳೂರು ಎಫ್‌ಸಿ ತಂಡ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ 2–1 ಗೋಲುಗಳಿಂದ ಮುಂಬೈ ಸಿಟಿ ಎಫ್‌ಸಿ ಮೇಲೆ ಜಯ ಗಳಿಸಿತ್ತು.

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹234-445 |
| ದ್ವಿತಳಿ (ಬಿ.ವಿ) | ₹211-521 |

**ಮುಂಬೈ ಧಾರಣೆ**

**ಶೇಂಗಾ** 30–6-2023

| | |
|---|---|
| ಜಾವಾ 70/80(ಹೊಸ) | 11250-11300 |
| ಜಾವಾ 80/90(ಹೊಸ) | 10650-10700 |
| ದಪ್ಪ ಮಧ್ಯಪ್ರದೇಶ(ಹೊಸ) | 11100-11200 |
| ದಪ್ಪ ಗುಜರಾತ್(ಹೊಸ) | 12000-12100 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1700 (1700) |
| ಒಂದು ವಾರದ ಡೆಲಿವರಿ | 1695 (1695) |
| ಸೋಯಾ ಕಚ್ಚಾ | 880 (890) |
| ಪಾಮ್ ವಾರದ ಡೆಲಿವರಿ | 848 (848) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 840 (850) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
57,900 (57,700)
ಬೆಳ್ಳಿ ಕೆ.ಜಿ 68,450 (68,900))

ಆವರಣದಲ್ಲಿ ಹಿಂದಿನ ದಿನದ ಧಾರಣೆ

### ಸ್ಯಾಫ್ ಚಾಂಪಿಯನ್‌ಷಿಪ್ ಸೆಮಿಫೈನಲ್ ಇಂದು: ಸುನಿಲ್ ಚೆಟ್ರಿ ಮೇಲೆ ನಿರೀಕ್ಷೆಯ ಭಾರ

# ಭಾರತಕ್ಕೆ ಲೆಬನಾನ್ ಸವಾಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸುನಿಲ್ ಚೆಟ್ರಿ ನಾಯಕತ್ವದ ಭಾರತ ಫುಟ್‌ಬಾಲ್ ತಂಡವು ಶನಿವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ದಕ್ಷಿಣ ಏಷ್ಯಾ ಫುಟ್‌ಬಾಲ್ ಚಾಂಪಿಯನ್‌ಷಿಪ್ ಸೆಮಿಫೈನಲ್‌ನಲ್ಲಿ ಲೆಬನಾನ್ ವಿರುದ್ಧ ಸೆಣಸಲಿದೆ.

ಫಿಫಾ ರ‍್ಯಾಂಕಿಂಗ್‌ನಲ್ಲಿ 100ರೊಳಗೆ ಸ್ಥಾನ ಪಡೆದಿರುವ ಹುಮ್ಮಸ್ಸಿನಲ್ಲಿರುವ ಭಾರತ ತಂಡವು ಗೆಲುವಿನ ನಿರೀಕ್ಷೆಯಲ್ಲಿದೆ. ಆತಿಥೇಯ ತಂಡವು ಟೂರ್ನಿಯುದ್ದಕ್ಕೂ ಚೆಟ್ರಿಯ ಕಾಲ್ಚಳಕದ ಮೇಲೆ ಹೆಚ್ಚು ಅವಲಂಬನೆಯಾಗಿದೆ. ಉಳಿದ ಆಟಗಾರರಿಂದ ಗೋಲು ಗಳಿಕೆಯು ಆಗುತ್ತಿಲ್ಲ. ಟೂರ್ನಿಯಲ್ಲಿ ಚೆಟ್ರಿ ಒಟ್ಟು ಐದು ಗೋಲು ಗಳಿಸಿದ್ದಾರೆ. ಪಾಕಿಸ್ತಾನದ ಎದುರಿನ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದ್ದರು.

'ಎ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ನಾಲ್ಕರ ಘಟ್ಟಕ್ಕೆ ಪ್ರವೇಶಿಸಿತು. ಲೆಬನಾನ್ 'ಬಿ' ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ ಸೆಮಿಫೈನಲ್‌ಗೆ ಅರ್ಹತೆ ಪಡೆಯಿತು.

ಭಾರತ ತಂಡದ ಸಹಲ್ ಅಬ್ದುಲ್ ಸಮದ್, ಮಹೇಶ್ ಸಿಂಗ್ ಮತ್ತು ಉದಾಂತ್ ಸಿಂಗ್ ಅವರು ತಮ್ಮ ನಾಯಕನಿಗೆ ಉತ್ತಮ ಜೊತೆ ನೀಡಿದ್ದಾರೆ. ಉದಾಂತ ಮತ್ತು ಮಹೇಶ್ ಅವರಿಬ್ಬರೇ ತಲಾ ಒಂದು ಗೋಲು ಗಳಿಸಿದ್ದಾರೆ. ಟೂರ್ನಿಯಲ್ಲಿ ಎರಡು ಸಲ ರೆಡ್ ಕಾರ್ಡ್ ದರ್ಶನ ಮಾಡಿರುವ ಮುಖ್ಯ ಕೋಚ್ ಇಗೊರ್ ಸ್ಟಿಮ್ಯಾಚ್ ಅವರು ಈ ಪಂದ್ಯದ ಸಂದರ್ಭದಲ್ಲಿ ಹೊರಗುಳಿಯಲಿದ್ದಾರೆ. ಅವರಿಗೆ ಎರಡು ಪಂದ್ಯಗಳಿಗೆ ನಿಷೇಧ ಮತ್ತು 500 ಡಾಲರ್ ದಂಡವನ್ನು ಸ್ಯಾಫ್ ಶಿಸ್ತು ಸಮಿತಿ ವಿಧಿಸಿದೆ.



ಸುನಿಲ್ ಚೆಟ್ರಿ ನಾಯಕತ್ವದ ಭಾರತ ಫುಟ್‌ಬಾಲ್ ತಂಡದ ಸದಸ್ಯರು ಶುಕ್ರವಾರ ಕಂಠೀರವ ಕ್ರೀಡಾಂಗಣದಲ್ಲಿ ಅಭ್ಯಾಸದಲ್ಲಿ ತೊಡಗಿದರು –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

**ಇಂದಿನ ಪಂದ್ಯ**

| | | |
|---|---|---|
| Vs | ಕುವೈತ್ – ಬಾಂಗ್ಲಾದೇಶ | ಮಧ್ಯಾಹ್ನ 3.30 |
| Vs | ಭಾರತ – ಲೆಬನಾನ್ | ರಾತ್ರಿ 7.30 |

ಲೈವ್: ಫ್ಯಾನ್‌ಕೋಡ್ ಆ್ಯಪ್

ತಂಡದ ರಕ್ಷಣಾ ವಿಭಾಗದ ಆಟಗಾರರು ಇಲ್ಲಿಯವರೆಗೂ ಉತ್ತಮವಾಗಿ ಆಡಿದ್ದಾರೆ. ಕಳೆದ ಒಂಬತ್ತು ಪಂದ್ಯಗಳಲ್ಲಿ ಎದುರಾಳಿಗಳಿಗೆ ಕೇವಲ ಒಂದು ಗೋಲು ಮಾತ್ರ ಬಿಟ್ಟುಕೊಟ್ಟ ಹೆಗ್ಗಳಿಕೆ ತಂಡಕ್ಕಿದೆ. ಇದೇ ಲಯವನ್ನು ಮುಂದುವರಿಸಿದರೆ ಲೆಬನಾನ್ ಮುಂದೆ ಮೇಲುಗೈ ಸಾಧಿಸುವುದು ಕಷ್ಟವೇನಲ್ಲ.

ಉಭಯ ತಂಡಗಳು ಇದುವರೆಗೆ ಎಂಟು ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಲೆಬನಾನ್ ಮೂರು ಹಾಗೂ ಭಾರತ ಎರಡು ಗೆದ್ದಿದೆ. ಮೂರು ಪಂದ್ಯಗಳು ಡ್ರಾ ಆಗಿವೆ. ಈಚೆಗೆ ಇಂಟರ್‌ಕಾಂಟಿನೆಂಟಲ್ ಕಪ್ ಟೂರ್ನಿಯಲ್ಲಿಯೂ ಈ ತಂಡಗಳು ಹಣಾಹಣಿ ನಡೆಸಿದ್ದವು.

# ಗೆಲುವಿನ ಸನಿಹ ಉತ್ತರ ವಲಯ

### ದುಲೀಪ್ ಟ್ರೋಫಿ: ಜಯಂತ್ ಮಿಂಚಿನ ಅರ್ಧಶತಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಯಂತ್ ಯಾದವ್ ನಾಯಕತ್ವದ ಉತ್ತರ ವಲಯ ತಂಡವು ಇಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಗೆಲುವಿನತ್ತ ದಾಪುಗಾಲಿಟ್ಟಿದೆ.

ಉತ್ತರ ವಲಯವು ಈಶಾನ್ಯ ವಲಯಕ್ಕೆ 666 ರನ್‌ಗಳ ಬೃಹತ್ ಗೆಲುವಿನ ಗುರಿಯನ್ನು ನೀಡಿದೆ. ಶುಕ್ರವಾರ ದಿನದಾಟದ ಅಂತ್ಯಕ್ಕೆ ಈಶಾನ್ಯ ತಂಡವು 18 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 58 ರನ್ ಗಳಿಸಿದೆ. ಪಂದ್ಯದಲ್ಲಿ ಇನ್ನೂ ಎರಡು ದಿನಗಳ ಆಟ ಬಾಕಿ ಇದೆ.

ಅನುಭವದ ಕೊರತೆ ಇರುವ ಈಶಾನ್ಯ ತಂಡವು ಅನುಭವಿಗಳ ದಂಡು ಉತ್ತರ ವಲಯದ ಮುಂದೆ ದೊಡ್ಡ ಇನಿಂಗ್ಸ್ ಆಡುವುದು ಕಷ್ಟವಾಗಲಿದೆ. ಮೊದಲ ಇನಿಂಗ್ಸ್‌ನಲ್ಲಿ ಉತ್ತರ ವಲಯವು ಗಳಿಸಿದ್ದ 540 ರನ್‌ಗಳಿಗೆ ಉತ್ತರವಾಗಿ ಈಶಾನ್ಯ ತಂಡವು 134 ರನ್ ಗಳಿಸಿ ಆಲೌಟ್ ಆಯಿತು.

406 ರನ್‌ಗಳ ದೊಡ್ಡ ಮೊತ್ತದ ಮುನ್ನಡೆ ಗಳಿಸಿದರೂ ಉತ್ತರ ವಲಯವು ಎದುರಾಳಿಯ ಮೇಲೆ ಫಾಲೋ ಆನ್ ಹೇರಲಿಲ್ಲ. ಬದಲಿಗೆ ಬ್ಯಾಟಿಂಗ್ ಮಾಡಿತು. ಪ್ರಭಸಿಮ್ರನ್ (59 ರನ್), ಅಂಕಿತ್ ಕುಮಾರ್ (70ರನ್) ಮತ್ತು ಜಯಂತ್ (ಅಜೇಯ 55) ಅರ್ಧಶತಕ ಬಾರಿಸಿದರು. ಚಹಾವಿರಾಮದ ಹೊತ್ತಿಗೆ 6 ವಿಕೆಟ್ ನಷ್ಟಕ್ಕೆ 259 ರನ್ ಗಳಿಸಿದ್ದ ತಂಡವು ಡಿಕ್ಲೇರ್ ಮಾಡಿಕೊಂಡಿತು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಉತ್ತರ ವಲಯ: 136 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 540. ಈಶಾನ್ಯ ವಲಯ: 39.2 ಓವರ್‌ಗಳಲ್ಲಿ 134. ಎರಡನೇ ಇನಿಂಗ್ಸ್: ಉತ್ತರ ವಲಯ: 55.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 259 (ಪ್ರಭಸಿಮ್ರನ್ ಸಿಂಗ್ 59, ಅಂಕಿತ್ ಕುಮಾರ್ 70, ಜಯಂತ್ ಯಾದವ್ ಔಟಾಗದೆ 55, ಕಿಶನ್ ಸಿಂಗಾ 46ಕ್ಕೆ2, ಇಮಿಲಿವತಿ ಲೆಮ್ತೂರ್ 61ಕ್ಕೆ2) ಈಶಾನ್ಯ ವಲಯ: 18 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 58 (ಕಿಶನ್ ಲಿಂಗ್ಡೊ 14, ಲ್ಯಾಂಗೊನಯಂಬಾ ಕೀಶಂಗಬಮ್ 13, ಪೈಜೋರ್ ತಮಾಂಗ್ ಬ್ಯಾಟಿಂಗ್ 13, ನಿಲೇಶ್ ಲಾಮಿಚಾನೆ ಬ್ಯಾಟಿಂಗ್ 5, ಬಲ್ತೇಜ್ ಸಿಂಗ್ 11ಕ್ಕೆ1, ಹರ್ಷಿತ್ ರಾಣಾ 19ಕ್ಕೆ1)

**ಆಲೂರು ಕ್ರೀಡಾಂಗಣ:** ಮೊದಲ ಇನಿಂಗ್ಸ್: ಕೇಂದ್ರ ವಲಯ: 71.4 ಓವರ್‌ಗಳಲ್ಲಿ 182, ಪೂರ್ವ ವಲಯ: 42.2 ಓವರ್‌ಗಳಲ್ಲಿ 122. ಎರಡನೇ ಇನಿಂಗ್ಸ್: ಕೇಂದ್ರ ವಲಯ: 87.5 ಓವರ್‌ಗಳಲ್ಲಿ 239 (ಹಿಮಾಂಶು ಮಂತ್ರಿ 68, ವಿವೇಕ್ ಸಿಂಗ್ 56, ಸಾರಾಂಶ್ ಜೈನ್ ಔಟಾಗದೆ 32, ಆವೇಶ್ ಖಾನ್ 16, ಇಶಾನ್ ಪೊರೆಲ್ 15ಕ್ಕೆ3, ಶಾಬಾಜ್ ಅಹಮದ್ 66ಕ್ಕೆ3, ರಿಯಾನ್ ಪರಾಗ್ 51ಕ್ಕೆ2, ನದೀಂ 44ಕ್ಕೆ2) ಪೂರ್ವ ವಲಯ: 29 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 69 (ಶಂತನು ಮಿಶ್ರಾ 18, ಶಾಬಾಜ್ ಅಹಮದ್ 18, ಸೌರಭ್ ಕುಮಾರ್ 33ಕ್ಕೆ4)



ಉತ್ತರ ವಲಯದ ಜಯಂತ್ ಯಾದವ್ ಅವರ ಹೊಡೆತದ ವೈಖರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

### ಕೇಂದ್ರ ವಲಯಕ್ಕೆ ಗೆಲುವಿನ ಕನಸು

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಕೇಂದ್ರ ವಲಯ ತಂಡವು ಪೂರ್ವ ವಲಯದ ವಿರುದ್ಧ ಜಯಗಳಿಸುವ ಕನಸು ಕಾಣುತ್ತಿದೆ.

ಗೆಲುವಿಗಾಗಿ ಪೂರ್ವ ವಲಯವು 300 ರನ್‌ಗಳ ಗುರಿ ಬೆನ್ನಟ್ಟಿದ ಪೂರ್ವ ವಲಯವು ಕೇಂದ್ರ ವಲಯದ ಸೌರಭ್ ಕುಮಾರ್ (33ಕ್ಕೆ4) ದಾಳಿಗೆ ತತ್ತರಿಸಿತು. ದಿನದಾಟದ ಕೊನೆಗೆ 6 ವಿಕೆಟ್‌ಗಳಿಗೆ 69 ರನ್ ಗಳಿಸಿತು. ತಂಡದ ಜಯಕ್ಕೆ ಇನ್ನೂ 231 ರನ್‌ಗಳ ಅಗತ್ಯವಿದೆ.

### ಫ್ರ್ಯಾಂಚೈಸಿ ಲೀಗ್ ಕ್ರಿಕೆಟ್ ಆಯೋಜನೆ: ಕೆಎಸ್‌ಸಿಎ ಚಿತ್ತ

# ಕೆಪಿಎಲ್ ಪುನರಾರಂಭಕ್ಕೆ ಸಿದ್ಧತೆ

• ಗಿರೀಶ ದೊಡ್ಡಮನಿ

**ಬೆಂಗಳೂರು:** ನಾಲ್ಕು ವರ್ಷಗಳ ನಂತರ ಕರ್ನಾಟಕ ಪ್ರೀಮಿಯರ್ ಲೀಗ್ ಪುನರಾರಂಭಕ್ಕೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಸಿದ್ಧತೆ ಆರಂಭಿಸಿದೆ. ಮುಂದಿನ ತಿಂಗಳು ಟೂರ್ನಿ ಆಯೋಜನೆಗೊಳ್ಳುವ ಸಾಧ್ಯತೆ ಇದೆ.

2019ರಲ್ಲಿ ಕೊನೆಯ ಬಾರಿಗೆ ನಡೆದಿದ್ದ ಟೂರ್ನಿಯಲ್ಲಿ ಮ್ಯಾಚ್ ಫಿಕ್ಸಿಂಗ್ ಹಗರಣ ಸದ್ದು ಮಾಡಿತ್ತು. ನಂತರ ಕೋವಿಡ್ ಬಿಕ್ಕಟ್ಟಿನಿಂದಾಗಿ ಟೂರ್ನಿ ಸ್ಥಗಿತವಾಗಿತ್ತು. ಈಗ ಮತ್ತೆ ಫ್ರ್ಯಾಂಚೈಸಿ ಆಧಾರಿತ ಕೆಪಿಎಲ್ ಆಯೋಜಿಸುವತ್ತ ರಾಜ್ಯ ಸಂಸ್ಥೆ ಚಿತ್ತ ನೆಟ್ಟಿದೆ.

ಹೋದ ವರ್ಷ ಅಧ್ಯಕ್ಷರಾಗಿದ್ದ ರೋಜರ್ ಬಿನ್ನಿ ನೇತೃತ್ವದ ಆಡಳಿತ ಸಮಿತಿಯು ಮಹಾರಾಜ ಟ್ರೋಫಿ ಟಿ20 ಲೀಗ್ ಆಯೋಜಿಸಿತ್ತು. ಆದರೆ ಅದು ಫ್ರಾಂಚೈಸಿ ಲೀಗ್ ಆಗಿರಲಿಲ್ಲ. ಪ್ರಾಯೋಜಕತ್ವ ಮಾದರಿಯಲ್ಲಿ ಆಗಿತ್ತು. ಆಡಿದ್ದ ಆರು ತಂಡಗಳ ಆಟಗಾರರು, ನೆರವು ಸಿಬ್ಬಂದಿ ಮತ್ತು ತರಬೇತುದಾರರನ್ನು ಕೆಎಸ್‌ಸಿಎ ನೇಮಿಸಿದ್ದ ಸಮಿತಿಯು ಆಯ್ಕೆ ಮಾಡಿತ್ತು. ಆಟಗಾರರ ಆಯ್ಕೆಗೆ ಹರಾಜು ಪ್ರಕ್ರಿಯೆ ಇರಲಿಲ್ಲ.

'ಹೋದ ವರ್ಷದ ಮಹಾರಾಜ ಟ್ರೋಫಿ ಟೂರ್ನಿಯು ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿರಲಿಲ್ಲ. ಫ್ರ್ಯಾಂಚೈಸಿಗಳಿದ್ದರೆ ರಾಜ್ಯದ ಬೇರೆ ಬೇರೆ ನಗರಗಳಲ್ಲಿರುವ ಮೈದಾನಗಳಲ್ಲಿ ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸಬಹುದು. ಇದರಿಂದ ಅಲ್ಲಿಯ ಅಭಿಮಾನಿಗಳಿಗೂ ಪಂದ್ಯಗಳನ್ನು ನೋಡಲು ಅವಕಾಶ ಸಿಗುತ್ತದೆ. ಆದ್ದರಿಂದ ಫ್ರ್ಯಾಂಚೈಸಿ ಲೀಗ್ ಮಾಡುವುದು ಒಳಿತು' ಎಂದು ಕೆಎಸ್‌ಸಿಎ ಹೆಸರು ಹೇಳಲಿಚ್ಛಿಸದ ಸದಸ್ಯರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

'ಕೋವಿಡ್ ಕಾರಣದಿಂದ ಟೂರ್ನಿ ಸ್ಥಗಿತವಾಗಿತ್ತು. ಗ್ರಾಮಾಂತರ ವಿಭಾಗಗಳ ಕ್ರಿಕೆಟ್ ಪ್ರತಿಭೆಗಳಿಗೆ ಈ ಟೂರ್ನಿಯು ಉತ್ತಮ ವೇದಿಕೆಯಾಗಿದೆ. ಆದ್ದರಿಂದ ಮರು ಆರಂಭ ಮಾಡಲು ಯೋಜಿಸಿದ್ದೇವೆ. ಈ ಕುರಿತು ಶೀಘ್ರದಲ್ಲಿಯೇ ಸಂಪೂರ್ಣ ಚರ್ಚೆ ನಡೆಸಿ ಯೋಜನೆ ಸಿದ್ಧಪಡಿಸುತ್ತೇವೆ. ಆಗಸ್ಟ್‌ನಲ್ಲಿಯೇ ಟೂರ್ನಿ ನಡೆಯುವುದು ಬಹುತೇಕ ಖಚಿತ' ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ 'ಪ್ರಜಾವಾಣಿ'ಗೆ ತಿಳಿಸಿದರು.

2019ರ ಟೂರ್ನಿಯಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆದ ಕುರಿತು ವರದಿಯಾಗಿತ್ತು. ಟೂರ್ನಿಯಲ್ಲಿ ಆಡಿದ್ದ ರಾಜ್ಯದ ಕೆಲವು ಆಟಗಾರರು, ಕೋಚ್ ಮತ್ತು ಫ್ರ್ಯಾಂಚೈಸಿಯ ಮಾಲೀಕರೊಬ್ಬರು ಆರೋಪಿಗಳಾಗಿದ್ದರು. ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಹಲವು ತಿಂಗಳ ಹೈಕೋರ್ಟ್‌ನಲ್ಲಿ ನಡೆದ ವಿಚಾರಣೆ ನಂತರ ಕೆಲವು ಕ್ರಿಕೆಟಿಗರು ಆರೋಪಮುಕ್ತರಾಗಿದ್ದರು.

**ಇತಿಹಾಸ:** 2009ರಲ್ಲಿ ಮೊದಲ ಆವೃತ್ತಿ ನಡೆದಿತ್ತು. ಎಂಟು ತಂಡಗಳು ಆಡಿದ್ದವು. ಅವುಗಳಲ್ಲಿ ರಾಜ್ಯ ತಂಡದ ಪ್ರಮುಖ ಕ್ರಿಕೆಟಿಗರು ಆಡಿದ್ದರು. 2010–11ರಲ್ಲಿಯೂ ಟೂರ್ನಿ ಆಯೋಜನೆಗೊಂಡಿತ್ತು. ಅದರ ನಂತರದ ಮೂರು ವರ್ಷ ಟೂರ್ನಿ ನಡೆಯಲಿಲ್ಲ. 2014ರಲ್ಲಿ ಮರಳಿ ಆರಂಭವಾಯಿತು. ಮೈಸೂರು ರಾಜವಂಶಸ್ಥ ಶ್ರೀಕಂಠದತ್ತ ಒಡೆಯರ್ ಅವರ ಹೆಸರಿನಲ್ಲಿ ಟ್ರೋಫಿ ನೀಡಲು ಆರಂಭಿಸಲಾಯಿತು. ಆಗ ಏಳು ತಂಡಗಳು ಮಾತ್ರ ಕಣದಲ್ಲಿದ್ದವು. 2019ರವರೆಗೂ ಟೂರ್ನಿ ನಡೆಯಿತು.

### ಮಹಿಳೆಯರಿಗೆ ಟಿ20 ಟೂರ್ನಿ

ರಾಜ್ಯದ ಮಹಿಳಾ ಕ್ರಿಕೆಟಿಗರಿಗಾಗಿ ಟಿ20 ಟೂರ್ನಿ ಆಯೋಜಿಸಲು ಕೆಎಸ್‌ಸಿಎ ಸಿದ್ಧವಾಗಿದೆ. 'ಮಹಿಳಾ ಕ್ರಿಕೆಟ್‌ಗೆ ಉತ್ತೇಜನ ನೀಡುವಲ್ಲಿ ರಾಜ್ಯ ಸಂಸ್ಥೆಯು ಮುಂಚೂಣಿಯಲ್ಲಿದೆ. ಇದೀಗ ಮಹಿಳಾ ಟಿ20 ಚಾಂಪಿಯನ್‌ಷಿಪ್ ಟೂರ್ನಿ ಆಯೋಜಿಸಲು ಯೋಜನೆ ರೂಪಿಸಲಾಗಿದೆ. ಇದರಿಂದಾಗಿ ಪ್ರತಿಭಾನ್ವಿತ ಆಟಗಾರ್ತಿಯರಿಗೆ ಉತ್ತಮ ಅವಕಾಶ ಸಿಗಲಿದೆ' ಎಂದು ಅಧ್ಯಕ್ಷ ರಘುರಾಮ್ ಭಟ್ ಹೇಳಿದ್ದಾರೆ.



ಬೆಂಗಳೂರಿನ ಕೆನ್ಸಿಂಗ್ಟನ್ ಈಜುಕೊಳದಲ್ಲಿ ನಡೆದ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಡೈವಿಂಗ್ ಚಾಂಪಿಯನ್‌ಷಿಪ್ ವಿಜೇತರು. ಮುಂದಿನ ಸಾಲು ಎಡದಿಂದ ಪೂರ್ವಿಕಾ ವೆಂಕಟೇಶ್ (ಗುಂಪು 2), ಟಿ. ಸ್ಕಂದ ಪ್ರಸಾದ್ (ಗುಂಪು 3), ಯುವರಾಜ್ ಸಂತೋಷ್ ಮೋಹನ್‌ಗೇಕರ್ (ಗುಂಪು 3) ಸೋಹನ್ ಸೂರಿ (ಗುಂಪು 2). ಹಿಂದಿನ ಸಾಲು: ಹರ್ನಿ ಪ್ರದೀಪ್ (ಗುಂಪು 3), ಚೈತ್ರಾ ಎಸ್. ಪ್ರಸಾದ್ (ಗುಂಪು 2) ಮತ್ತು ಆರ್ಯನ್ ಮೋಸೆಸ್ ವ್ಯಾಸ್ (ಗುಂಪು 1) –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

## ಡೈವಿಂಗ್: ವ್ಯಾಸ್‌ಗೆ ಡಬಲ್ ಚಿನ್ನ

**ಬೆಂಗಳೂರು:** ಡಾಲ್ಫಿನ್ ಅಕ್ವಾಟಿಕ್ಸ್‌ನ ಆರ್ಯನ್ ಮೋಸೆಸ್ ವ್ಯಾಸ್ ಶುಕ್ರವಾರ ಎನ್‌ಜೆಆರ್ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಡೈವಿಂಗ್ ಚಾಂಪಿಯನ್‌ಷಿಪ್‌ನ ಗುಂಪು 1ರ ಬಾಲಕರ 3 ಮೀಟರ್ ಸ್ಪ್ರಿಂಗ್‌ಬೋರ್ಡ್ ಹಾಗೂ ಗುಂಪು 1ರ ಬಾಲಕರ ಹೈಬೋರ್ಡ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

ಕೆನ್ಸಿಂಗ್ಟನ್ ಈಜುಕೊಳದಲ್ಲಿ ನಡೆದ ಎರಡು ದಿನಗಳ ಚಾಂಪಿಯನ್‌ಷಿಪ್‌ನ ಮೊದಲ ದಿನವೂ ಆರಿನ್ ಮೋಸೆಸ್ ವ್ಯಾಸ್ ಗ್ರೂಪ್ 1ರ ಒಂದು ಮೀ. ಸ್ಪ್ರಿಂಗ್ ಬೋರ್ಡ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದರು.

ಬಾಲಕರ 3 ಮೀಟರ್ ಸ್ಪ್ರಿಂಗ್‌ಬೋರ್ಡ್‌ನ ಗುಂಪು 2 ಮತ್ತು 3ರಲ್ಲಿ ಎಸ್. ಸೋಹನ್ ಸೂರಿ ಮತ್ತು ಟಿ. ಸ್ಕಂದನ್ ಪ್ರಸಾದ್; ಬಾಲಕಿಯರ ವಿಭಾಗದ ಗುಂಪು 2 ಮತ್ತು 3ರಲ್ಲಿ ಕ್ರಮವಾಗಿ ಚೈತ್ರಾ ಎಸ್. ಪ್ರಸಾದ್ ಮತ್ತು ಹರಿಣಿ ಪ್ರದೀಪ್ ಚಿನ್ನದ ಪದಕ ಗೆದ್ದರು. ಬಾಲಕರ ಹೈಬೋರ್ಡ್‌ನ ಗುಂಪು 2 ಮತ್ತು 3ರಲ್ಲಿ ಕ್ರಮವಾಗಿ ಎಸ್. ಸೋಹನ್ ಸೂರಿ ಮತ್ತು ಯುವರಾಜ್ ಸಂತೋಷ್ ಮೋಹನ್‌ಗೇಕರ್; ಬಾಲಕಿಯರ ಗ್ರೂಪ್ 2ರಲ್ಲಿ ಪೂರ್ವಿಕಾ ವೆಂಕಟೇಶ್ ಪ್ರಶಸ್ತಿ ಪಡೆದರು.

## ವಿದೇಶಿ ಲೀಗ್‌ಗೆ ಕನ್ನಡತಿ ಶ್ರೇಯಾಂಕ

**ಜಾರ್ಜ್‌ಟೌನ್ (ಗಯಾನಾ) (ಪಿಟಿಐ):** ಭಾರತದ ಯುವ ಆಫ್ ಸ್ಪಿನ್ನರ್, ಕನ್ನಡತಿ ಶ್ರೇಯಾಂಕ ಪಾಟೀಲ ಅವರು ಆಗಸ್ಟ್ 31ರಿಂದ ಸೆಪ್ಟೆಂಬರ್ 10ರ ವರೆಗೆ ನಡೆಯಲಿರುವ ಕೆರಿಬಿಯನ್ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯು‌ಸಿಪಿಎಲ್) ಟೂರ್ನಿಗೆ ಗಯಾನಾ ಅಮೆಜಾನ್ ವಾರಿಯರ್ಸ್ ತಂಡವನ್ನು ಸೇರಿಕೊಂಡಿದ್ದಾರೆ.



ಶ್ರೇಯಾಂಕ ಪಾಟೀಲ

ಸೀನಿಯರ್‌ನಲ್ಲಿ ಅಂತರರಾಷ್ಟ್ರೀಯ ಪಂದ್ಯಕ್ಕೆ ಪಾದರ್ಪಣೆ ಮಾಡುವ ಮುನ್ನವೇ ವಿದೇಶಿ ಲೀಗ್‌ನಲ್ಲಿ ಗುತ್ತಿಗೆ ಪಡೆದ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರವಾಗಿದ್ದಾರೆ.

## ಆ್ಯಷಸ್: ಮುನ್ನಡೆ ಹಿಗ್ಗಿಸಿದ ಆಸ್ಟ್ರೇಲಿಯಾ

**ಲಂಡನ್ (ರಾಯಿಟರ್ಸ್):** ಮೊದಲ ಇನಿಂಗ್ಸ್‌ನಲ್ಲಿ ಪಡೆದ 91 ರನ್‌ಗಳ ಮುನ್ನಡೆಯನ್ನು ಲಾಭ ಪಡೆದ ಆಸ್ಟ್ರೇಲಿಯಾ ತಂಡ, ಆ್ಯಷಸ್ ಸರಣಿಯ ಎರಡನೇ ಟೆಸ್ಟ್‌ನಲ್ಲಿ ಹಿಡಿತವನ್ನು ಬಿಗಿಗೊಳಿಸುತ್ತಿದೆ. ಪಂದ್ಯದ ಮೂರನೇ ದಿನವಾದ ಶುಕ್ರವಾರ ಪ್ರವಾಸಿ ತಂಡ ಎರಡನೇ ಇನಿಂಗ್ಸ್‌ನಲ್ಲಿ 45.4 ಓವರುಗಳಲ್ಲಿ 2 ವಿಕೆಟ್‌ಗೆ 130 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದೆ. ಈ ವೇಳೆ ಮಳೆಯಿಂದ ಆಟಕ್ಕೆ ಅಡ್ಡಿಯಾಯಿತು.

ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾದ ಒಟ್ಟಾರೆ ಮುನ್ನಡೆ 221 ರನ್‌ಗಳಿಗೆ ಹಿಗ್ಗಿದೆ. ಉತ್ತಮ ಲಯದಲ್ಲಿರುವ ಆರಂಭ ಆಟಗಾರ ಉಸ್ಮಾನ್ ಖ್ವಾಜಾ ಔಟಾಗದೇ 58 ರನ್ ಗಳಿಸಿದ್ದಾರೆ.

ಇದಕ್ಕೆ ಮೊದಲು, ಗುರುವಾರದ ಕೊನೆಗೆ 4 ವಿಕೆಟ್‌ಗೆ 278 ರನ್ ಗಳಿಸಿದ ಇಂಗ್ಲೆಂಡ್ ಇಂದು ನಿರೀಕ್ಷೆಗಿಂತ ಬೇಗ ಕುಸಿಯಿತು. ಕೊನೆಯ ಆರು ವಿಕೆಟ್‌ಗಳಿಂದ 47 ರನ್‌ಗಳಷ್ಟೇ ಬಂದು ತಂಡ 325ಕ್ಕೆ ಆಲೌಟ್ ಆಯಿತು. ಆಸ್ಟ್ರೇಲಿಯಾ ತಂಡಕ್ಕೆ ಪುನರಾಗಮನ ಮಾಡಿದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ 3 ವಿಕೆಟ್‌ಗಳನ್ನು ಪಡೆದು ಕುಸಿತಕ್ಕೆ ನಾಂದಿಹಾಡಿದರು.

**ಸ್ಕೋರುಗಳು:** ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 416; ಇಂಗ್ಲೆಂಡ್ 76.2 ಓವರುಗಳಲ್ಲಿ 325 (ಹ್ಯಾರಿ ಬ್ರೂಕ್ 50; ಸ್ಟಾರ್ಕ್ 88ಕ್ಕೆ3, ಹ್ಯಾಜಲ್‌ವುಡ್ 71ಕ್ಕೆ2, ಹೆಡ್ 17ಕ್ಕೆ2); ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 45.4 ಓವರುಗಳಲ್ಲಿ 2 ವಿಕೆಟ್‌ಗೆ 130 (ಉಸ್ಮಾನ್ ಖ್ವಾಜಾ ಔಟಾಗದೇ 58, ವಾರ್ನರ್ 25, ಲಾಬುಷೇನ್ 30).

### ಸಂಕ್ಷಿಪ್ತ ಸುದ್ದಿ

## ಎಲೊರ್ಡಾ ಕಪ್ ಬಾಕ್ಸಿಂಗ್: ಭಾರತಕ್ಕೆ ಮೂರು ಕಂಚು

**ಅಸ್ತಾನಾ (ಪಿಟಿಐ):** ಭಾರತ ವಿಜಯ ಕುಮಾರ್ ಅವರು ದಿಟ್ಟ ಹೋರಾಟ ನಡೆಸಿ ಕಜಕಸ್ತಾನದ ಝೋಲ್ಡಾಸ್ ಝುನಿಸ್ಬೇವ್ ಅವರನ್ನು ಸೋಲಿಸಿ ಎಲೊರ್ಡಾ ಕಪ್ ಬಾಕ್ಸಿಂಗ್ ಟೂರ್ನಿಯ ಸೆಮಿಫೈನಲ್ ತಲುಪಿದರು. 60 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಅವರು 3:2 ಭಿನ್ನತೀರ್ಪಿನ ಆಧಾರದಲ್ಲಿ ಜಯಗಳಿಸಿದರು.

ಶನಿವಾರ ನಡೆಯುವ ಸೆಮಿಫೈನಲ್‌ನಲ್ಲಿ ಅವರು ಕಜಕಸ್ತಾನದ ಬೆಕನೂರ್ ಒಝುನೋವ್ ಅವರನ್ನು ಎದುರಿಸಲಿದ್ದಾರೆ.

ಶುಕ್ರವಾರ ಭಾರತದ ಕೀಷಮ್ ಸಂಜಿತ್ ಸಿಂಗ್ (48 ಕೆ.ಜಿ ವಿಭಾಗ), ಸುಮಿತ್ (86 ಕೆ.ಜಿ) ಮತ್ತು ನೀಮಾ (63 ಕೆ.ಜಿ ವಿಭಾಗ) ಕಂಚಿನ ಪದಕ ಗೆದ್ದುಕೊಂಡರು.

ಭಾರತದ ಕೀಷಮ್ ಸಂಜಿತ್ ಸಿಂಗ್ (48 ಕೆ.ಜಿ) ಮತ್ತು ಸುಮಿತ್ (86 ಕೆ.ಜಿ), ಕೊನೆಗಳಿಗೆಯಲ್ಲಿ ಕಾರ್ಯಕ್ರಮ ಪಟ್ಟಿ ಬದಲಾದ ಪರಿಸ್ಥಿತಿಯಲ್ಲಿ ದುರದೃಷ್ಟವಶಾತ್ ತಮ್ಮ ಸೆಮಿಫೈನಲ್ ಎದುರಾಳಿಗಳಿಗೆ ವಾಕ್ ಓವರ್ ನೀಡಬೇಕಾಯಿತು. ಭಾರತ ಬಾಕ್ಸಿಂಗ್ ಫೆಡರೇಷನ್ ಇದರ ವಿರುದ್ಧ ಕಜಕಸ್ತಾನ ಬಾಕ್ಸಿಂಗ್ ಫೆಡರೇಷನ್‌ಗೆ ದೂರು ಸಲ್ಲಿಸಿದೆ. ನೀಮಾ (63 ಕೆ.ಜಿ), ಸೆಮಿಫೈನಲ್‌ನಲ್ಲಿ ಲಾರಾ ಯೆಸೆಸನ್‌ಕೆಲ್ಡಿ (ಕಜಕಸ್ತಾನ) ಎದುರು ಸೋಲನುಭವಿಸಿದರು.

## ಚೆಸ್: ಅರೋನಿಯನ್‌ಗೆ ಮಣಿದ ಕಾರ್ಲ್‌ಸನ್

**ದುಬೈ (ಪಿಟಿಐ):** ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಶುಕ್ರವಾರ ಅನಿರೀಕ್ಷಿತ ಫಲಿತಾಂಶಗಳೇ ಸುದ್ದಿಯಾದವು. ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್, ಪ್ರಮಾದವೆಸಗಿ ಲೆವೊನ್ ಅರೋನಿಯನ್ ಎದುರು ಸೋತರು. ಇದರಿಂದ ನಾರ್ವೆಯ ಆಟಗಾರನ ನೇತೃತ್ವದ ಎಸ್.ಜಿ.ಅಲ್ಪೈನ್ ವಾರಿಯರ್ಸ್ ತಂಡ, ತ್ರಿವೇಣಿ ಕಾಂಟಿನೆಂಟಲ್ಸ್ ಕಿಂಗ್ಸ್ ಎದುರು ಮಣಿಯಿತು. ಲೀಗ್‌ನ 9ನೇ ದಿನ, ಇನ್ನೊಂದು ಪಂದ್ಯದಲ್ಲಿ ಚಿಂಗಾರಿ ಗಲ್ಫ್ ಟೈಟನ್ಸ್, ಪ್ರಬಲ ಅಪ್‌ಗ್ರಾಡ್ ಮುಂಬಾ ಮಾಸ್ಟರ್ಸ್ ತಂಡಕ್ಕೆ 12–3 ಅಂತರದಲ್ಲಿ ಸೋಲುಣಿಸಿ ಅಚ್ಚರಿ ಮೂಡಿಸಿತು.

ವಾರಿಯರ್ಸ್ ತಂಡದ ಡಿ.ಗುಕೇಶ್ ಎದುರು ಚೀನಾದ ಯು ವಾಂಗ್ಯಿ ಸೋತರು. ಆದರೆ ಕಾಂಟಿನೆಂಟಲ್ ಕಿಂಗ್ಸ್ ತಂಡದ ವಿ ಯಿ ಮೂರನೇ ಬೋರ್ಡ್‌ನಲ್ಲಿ ಅರ್ಜುನ್ ಎರಿಗೈಸಿ ಮೇಲೆ ಜಯಗಳಿಸಿದರು.


ದಿಗಂತ್

# ‘ಹಾಸ್ಟೆಲ್’ ಸೇರಿದ ದೂದ್‌ಪೇಢ!

ಸಿನಿಮಾ ಪ್ರಚಾರಕ್ಕೆ ನಾನಾ ತಂತ್ರಗಳನ್ನು ಹೆಣೆಯುತ್ತಿರುವ ‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’ ಚಿತ್ರತಂಡವು ಇದೀಗ ದೂದ್‌ಪೇಢ ದಿಗಂತ್ ಅವರನ್ನೂ ‘ಹಾಸ್ಟೆಲ್’ಗೆ ಸೇರಿಸಿದೆ.

ಚಿತ್ರದ ಪ್ರಚಾರಕ್ಕೆ ರಕ್ಷಿತ್ ಶೆಟ್ಟಿ, ರಮ್ಯಾ ಸೇರಿದಂತೆ ಹಲವು ನಟರು ಕೈಜೋಡಿಸಿದ್ದರು. ಇದೀಗ ಹಾಸ್ಟೆಲ್ ಹುಡುಗರಿಗೆ ದೂದ್‌ಪೇಢ ಸಿಹಿ ಸಿಕ್ಕಿದೆ. ದಿಗಂತ್ ‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’ ಸಿನಿಮಾದಲ್ಲಿ ನಟಿಸುತ್ತಿದ್ದಾರೆ ಎಂದು ಖಚಿತಪಡಿಸಿದೆ ಚಿತ್ರತಂಡ. ಆದರೆ ಅವರ ಪಾತ್ರವೇನೆಂಬುದನ್ನು ಚಿತ್ರತಂಡ ಗುಟ್ಟಾಗಿ ಇಟ್ಟಿದೆ. ಜುಲೈ 7ರಂದು ದಿಗಂತ್ ಲುಕ್ ರಿವೀಲ್ ಮಾಡಲಿದ್ದೇವೆ ಎಂದಿದೆ ಚಿತ್ರತಂಡ.

ಈ ಸಿನಿಮಾವನ್ನು ನಿತಿನ್ ಕೃಷ್ಣಮೂರ್ತಿ ಕಥೆ ಬರೆದು ನಿರ್ದೇಶಿಸಿದ್ದಾರೆ. ಬಹುತೇಕ ರಂಗಭೂಮಿ ಪ್ರತಿಭೆಗಳು ನಟಿಸಿರುವ ಈ ಚಿತ್ರವನ್ನು ವರುಣ್ ಸ್ಟುಡಿಯೋಸ್ ಹಾಗೂ ಗುಲ್ ಮೋಹರ್ ಫಿಲ್ಮಂಸ್ ಬ್ಯಾನರ್‌ನಡಿ ಪ್ರಜ್ವಲ್ ಬಿ.ಪಿ, ವರುಣ್ ಕುಮಾರ್ ಗೌಡ, ನಿತಿನ್ ಕೃಷ್ಣಮೂರ್ತಿ, ಅರವಿಂದ್ ಕೆ.ಕಶ್ಯಪ್ ಬಂಡವಾಳ ಹೂಡಿ ನಿರ್ಮಿಸಿದ್ದಾರೆ. ನಟ ರಕ್ಷಿತ್ ಶೆಟ್ಟಿ ಅವರು ತಮ್ಮ ಪರಂವಃ ಪಿಕ್ಚರ್ಸ್ ಮೂಲಕ ಈ ಸಿನಿಮಾವನ್ನು ಪ್ರಸ್ತುತಪಡಿಸುತ್ತಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ, ಅರವಿಂದ್ ಛಾಯಾಚಿತ್ರಗ್ರಹಣ, ಸುರೇಶ್ ಸಂಕಲನ ಚಿತ್ರಕ್ಕಿದೆ. ಸಿನಿಮಾ ಜುಲೈನಲ್ಲಿ ತೆರೆಗೆ ಬರಲಿದೆ.


ಋತ್ವಿಕ್ ಕೃಪಾಕರ್

# ‘ರಾಮಾಚಾರಿ’ಗೆ ಸಿನಿಮಾನೇ ಗುರಿ

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹುಟ್ಟಿ, ಅಲ್ಲಿಯೇ ಶಿಕ್ಷಣ ಪಡೆದು ಹತ್ತನೇ ತರಗತಿಯಲ್ಲಿರುವಾಗಲೇ ನಟನಾಗಬೇಕೆಂಬ ಕನಸು ಕಟ್ಟಿದವರು ಇವರು. ಅದೇ ನಿಟ್ಟಿನಲ್ಲಿ ಹೆಜ್ಜೆ ಇಟ್ಟು ರಂಗಭೂಮಿಯ ನಂಟು ಬೆಳೆಸಿಕೊಂಡು, ತನ್ನದೇ ಯೂಟ್ಯೂಬ್ ಚಾನಲ್ ಮುಖಾಂತರ ತನ್ನೊಳಗಿನ ನಟನಾ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸುತ್ತಾ ಕಿರುತೆರೆಯಲ್ಲಿ ‘ರಾಮಾಚಾರಿ’ಯಾಗಿ ಮಿಂಚುತ್ತಿರುವವರು ಋತ್ವಿಕ್ ಕೃಪಾಕರ್. ಅವರ ಬಣ್ಣದ ಲೋಕದ ಪಯಣದ ಬಗ್ಗೆ ಪುಟ್ಟ ಮಾತುಕತೆ...

ಸಂಪೂರ್ಣ ಸಂದರ್ಶನ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

**● ನಟನೆಯ ಕನಸು ಹುಟ್ಟಿದ್ದು ಹೇಗೆ?**

ನನಗೆ ನಟನೆಯ ಮೊದಲ ಕಿಡಿ ಹಚ್ಚಿದ್ದು ಮಂಡ್ಯ ರಮೇಶ್ ಅವರ ನಟನ ರಂಗಶಾಲೆ. ಅಲ್ಲೊಂದು ನಾಟಕದಲ್ಲಿ ಪಾತ್ರ ಮಾಡಿದ್ದೆ. ಅದು ಸರಣಿಯಂತೆ ಬೆಳೆದು ನಟನೆಯ ಮೇಲೆ ಒಲವು ಬೆಳೆಯಿತು. ನನ್ನ ಊಟವನ್ನು ನಾನು ನಟನೆಯಿಂದಲೇ ದುಡಿಯಬೇಕು ಎಂದು ನಿರ್ಧರಿಸಿದ ಕ್ಷಣವದು. ಅಲ್ಲಿಂದ ನನ್ನ ತರಬೇತಿ ಆರಂಭವಾಯಿತು. ಮುಂಬೈನಲ್ಲಿ ಆ್ಯಕ್ಟಿಂಗ್ ಕೋರ್ಸ್ ಪಡೆದೆ. ಮಾರ್ಷಿಯಲ್ ಆರ್ಟ್ಸ್, ಡ್ಯಾನ್ಸ್ ತರಬೇತಿ ಪಡೆದುಕೊಂಡೆ. ಸಿನಿಮಾ ಕ್ಷೇತ್ರಕ್ಕೆ ಕಾಲಿಡಲು ಏನೆಲ್ಲಾ ಬೇಕು ಅದನ್ನೆಲ್ಲಾ ಕಲಿತೆ. ನನ್ನ ಯೂಟ್ಯೂಬ್ ಚಾನೆಲ್‌ನಲ್ಲಿನ ಒಂದು ವಿಡಿಯೊ ವೀಕ್ಷಿಸಿ, ‘ರಾಮಾಚಾರಿ’ ಧಾರಾವಾಹಿಗೆ ಆಡಿಷನ್‌ಗೆ ಕರೆದಿದ್ದರು. ಅಲ್ಲಿಂದ ರಾಮಾಚಾರಿ ಪಯಣ ಆರಂಭ...

**● ನಿರ್ದೇಶಕನಾಗಿ ಅಪ್ಪನ ಬೆಂಬಲ ಹೇಗಿತ್ತು?**

‘ಕಲಾದೇವತೆ ಎಲ್ಲರಿಗೂ ಒಲಿಯಲ್ಲ’ ಎಂದು ಅಪ್ಪ(ನಿರ್ದೇಶಕ ಪ್ರವೀಣ್ ಕೃಪಾಕರ್) ಹೇಳುತ್ತಿದ್ದರು. ಇದಕ್ಕೆ ನಾನು ವಿರೋಧಿಸುತ್ತಿದ್ದೆ. ‘ಶ್ರಮ ಹಾಕಿ ಕಲಾದೇವತೆಯನ್ನು ಭುಜದಮೇಲೆ ಕೂರಿಸಿಕೊಳ್ಳುತ್ತೇನೆ’ ಎಂದಿದ್ದೆ. ನನ್ನ ಶ್ರಮ ಅವರಿಗೂ ಭರವಸೆ ಮೂಡಿತು. ಇದಾದ ಬಳಿಕ ಅಪ್ಪ–ಅಮ್ಮ ಬೆಂಬಲ ದೊರೆಯಿತು. ಇಂತಹ ಪೋಷಕರನ್ನು ಪಡೆದಿರುವುದಕ್ಕೆ ಪುಣ್ಯ ಮಾಡಿದ್ದೇನೆ.

**● ಆರಂಭದಲ್ಲಿ ಎದುರಿಸಿದ ಸವಾಲು ಹಾಗೂ ಸಿನಿಮಾ ಕನಸಿನ ಬಗ್ಗೆ...**

ರಂಗಭೂಮಿಯಿಂದ ಕಿರುತೆರೆಗೆ ಒಗ್ಗಿಕೊಳ್ಳುವುದು ಆರಂಭದಲ್ಲಿ ಕೊಂಚ ಕಷ್ಟವಾಯಿತು. ದಿನ ಕಳೆದಂತೆ ಕ್ಯಾಮೆರಾ ಮುಂದೆ ನಟನೆ ಮಾಡುವುದು ಅಭ್ಯಾಸವಾಯಿತು. ನನಗೆ ಧಾರಾವಾಹಿಗಿಂತ ಸಿನಿಮಾಗೇ ಹೆಜ್ಜೆ ಇಡಬೇಕು ಎನ್ನುವ ಆಸೆ ಇತ್ತು. ಆದರೆ ‘ರಾಮಾಚಾರಿ’ಯಂತಹ ಒಳ್ಳೆಯ ಪಾತ್ರವನ್ನು ತಿರಸ್ಕರಿಸಲು ಇಷ್ಟವಿರಲಿಲ್ಲ. ಸಿನಿಮಾನೇ ನನ್ನ ಗುರಿ. ಧಾರಾವಾಹಿ ಮುಗಿದ ಬಳಿಕ ಸಿನಿಮಾಗೇ ಹೆಜ್ಜೆ ಇಡಲಿದ್ದೇನೆ. ಸದ್ಯಕ್ಕೆ ಒಂದಿಷ್ಟು ಸ್ಕ್ರಿಪ್ಟ್‌ಗಳು ಬಂದಿವೆ, ನಿರ್ದೇಶಕರು ಚರ್ಚೆ ನಡೆಸುತ್ತಿದ್ದಾರೆ. ಧಾರಾವಾಹಿಯಲ್ಲಿ ಒಂದು ಪಾತ್ರಕ್ಕೆ ಮೀಸಲಾಗಿದ್ದೇನೆ. ಸಿನಿಮಾದಲ್ಲಿ ನನ್ನೊಳಗಿನ ಬೇರೆ ಆಯಾಮಗಳನ್ನು ತೋರಿಸಬೇಕು ಎನ್ನುವ ಹಂಬಲವಿದೆ. ರಂಗಭೂಮಿಯಲ್ಲಿ ನನಗೆ ನೆಗೆಟಿವ್ ಪಾತ್ರಗಳನ್ನೇ ಮಾಡಿ ಅಭ್ಯಾಸ. ಈ ಆಯಾಮ ನನಗೆ ಬೇಗ ಒಲಿದಂತೆ ಕಾಣುತ್ತಿದೆ. ನೆಗೆಟಿವ್ ರೋಲ್ ನನಗೆ ಬಹಳ ಇಷ್ಟ. ಸಿನಿಮಾದಲ್ಲೂ ಇದೇ ರೀತಿ ಪಾತ್ರಗಳು ಸಿಕ್ಕಿದರೆ ಖಂಡಿತವಾಗಿಯೂ ಮಾಡುತ್ತೇನೆ. ಹೀರೋನೇ ಆಗಬೇಕೆಂದಿಲ್ಲ ಪಾತ್ರ ಒಳ್ಳೆಯದಾಗಿದ್ದರೆ ಅದರೊಳಗೆ ಇಳಿಯಲು ನಾನು ಸಿದ್ಧ.

**● ಋತ್ವಿಕ್ ಗುಣ ‘ರಾಮಾಚಾರಿ’ಯಂತೇ ಇದೆಯೇ?**

ನನ್ನ ಕೆಲವು ಗುಣಗಳು ‘ರಾಮಾಚಾರಿ’ಯಂತೇ ಇವೆ. ತಾಳ್ಮೆ ಬಹಳಷ್ಟಿದೆ. ಆದರೆ ರಾಮಾಚಾರಿಯಷ್ಟು ಒಳ್ಳೆಯವನಾಗಲು ಯಾರಿಂದಲೂ ಸಾಧ್ಯವಿಲ್ಲ. ‘ರಾಮಾಚಾರಿ’ ಪಾತ್ರ ಮಾಡಿದ್ದು ಒಂದು ಸವಾಲು ಆಗಿತ್ತು ಜೊತೆಗೆ ಅದನ್ನು ಅಷ್ಟೇ ಪ್ರೀತಿಯಿಂದ, ಖುಷಿಯಿಂದ ಮಾಡಿದ್ದೆ. ಜನರೂ ಈ ಪಾತ್ರದಿಂದ ನನ್ನನ್ನು ಗುರುತಿಸುವಾಗ ಹೆಮ್ಮೆಯೂ ಆಗುತ್ತದೆ. ಹಳ್ಳಿ ಕಡೆಯಲ್ಲಿ ಜನ ಎತ್ತಿಕೊಂಡು ಮುದ್ದಾಡುತ್ತಾರೆ!

# ‘ಅಪ್ಪು ಕಪ್’ ಲೋಗೊ ಅನಾವರಣ




**ನಟ ದಿವಂಗತ** ಪುನೀತ್ ರಾಜ್‌ಕುಮಾರ್ ನೆನಪಿನಲ್ಲಿ ಆಯೋಜಿಸಲಾಗುತ್ತಿರುವ ಅಪ್ಪು ಕಪ್ 2ನೇ ಆವೃತ್ತಿ ಸ್ಯಾಂಡಲ್‌ವುಡ್ ಬ್ಯಾಡ್ಮಿಂಟನ್ ಲೀಗ್ ಲಾಂಛನ ಅನಾವರಣಗೊಂಡಿದೆ.

ಬ್ಯಾಡ್ಮಿಂಟನ್ ದಿಗ್ಗಜ ಪ್ರಕಾಶ್ ಪಡುಕೋಣೆ ಲಾಂಛನ ಅನಾವರಣ ಮಾಡಿ ಆಟಗಾರರಿಗೆ ಶುಭಕೋರಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಕಾರ್ಯದರ್ಶಿ ಪಿ.ರಾಜೇಶ್ ರೆಡ್ಡಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ.ಹರೀಶ್, ಸಿನಿಮಾ ಪತ್ರಕರ್ತ ಸದಾಶಿವ ಶೆಣೈ ಉಪಸ್ಥಿತರಿದ್ದರು. ಇದೇ ವೇಳೆ ಪುನೀತ್ ಅವರ ಜೊತೆಗಿನ ಒಡನಾಟವನ್ನು ಪ್ರಕಾಶ್ ಮೆಲುಕು ಹಾಕಿದರು. ಚಂದನವನದಲ್ಲೂ ಹಲವು ಬ್ಯಾಡ್ಮಿಂಟನ್ ಆಡುತ್ತಾರೆ ಎನ್ನುವುದನ್ನು ಕೇಳು ಖುಷಿಯೂ ಆಯಿತು ಎಂದರು. ಕನ್ನಡ ಚಿತ್ರರಂಗದ ಕಲಾವಿದರು, ತಂತ್ರಜ್ಞರು ಹಾಗೂ ಮಾಧ್ಯಮದವರು ಆಡಲಿರುವ ಈ ಪಂದ್ಯಾವಳಿ ಸೆಪ್ಟೆಂಬರ್‌ನಲ್ಲಿ ಶುರುವಾಗಲಿದೆ. ಕಳೆದ ಬಾರಿ ಒಟ್ಟು ಎಂಟು ತಂಡಗಳು ಭಾಗಿಯಾಗಿದ್ದವು. ದಿಗಂತ್, ಸೃಜನ್ ಲೋಕೇಶ್, ವಸಿಷ್ಠ ಸಿಂಹ, ಪ್ರಿಯಾಂಕಾ ಉಪೇಂದ್ರ, ರಾಗಿಣಿ, ಕವಿತಾ ಲಂಕೇಶ್, ಶ್ವೇತಾ ಶ್ರೀವಾಸ್ತವ್, ಮಾಸ್ಟರ್ ಆನಂದ್ ತಂಡದ ಪೈಕಿ ಸೃಜನ್ ಲೋಕೇಶ್ ನೇತೃತ್ವದ ರಾಜ್ ಕುಮಾರ ಕಿಂಗ್ಸ್ ಕಳೆದ ಬಾರಿ ಗೆಲುವು ಸಾಧಿಸಿತ್ತು. ಈ ಬಾರಿ ಮತ್ತಷ್ಟು ತಾರೆಯರು ಅಪ್ಪು ಕಪ್ ಸೀಸನ್-2 ಮೆರಗು ಹೆಚ್ಚಿಸಲಿದ್ದಾರೆ.

# ಇಂದು ‘ಪಾಕ ಕ್ರಾಂತಿ’ ನಾಟಕ ಪ್ರದರ್ಶನ



**ವಿಶ್ವಪಥ** ಕಲಾ ಸಂಗಮ – ಹವ್ಯಾಸಿ ರಂಗಭೂಮಿ ತಂಡದವರು ಶನಿವಾರ (ಜುಲೈ 1) ಸಂಜೆ 7ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮ(ಬೆಂಗಳೂರು ವಿಶ್ವವಿದ್ಯಾಲಯದ ಹಿಂಭಾಗ)ದಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಕೃತಿ ಆಧರಿಸಿದ ‘ಪಾಕ ಕ್ರಾಂತಿ’ ನಾಟಕವನ್ನು ಪ್ರದರ್ಶಿಸುತ್ತಿದ್ದಾರೆ. ನಾಟಕರೂಪ ಮತ್ತು ನಿರ್ದೇಶನ ಬಿ. ಅಶೋಕ್ ಅವರದ್ದು. ನಾಟಕ ಪ್ರದರ್ಶನ ಕುರಿತ ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 9945977184ಗೆ ಸಂಪರ್ಕಿಸಬಹುದು.

**ನಾಟಕದ ಬಗ್ಗೆ:** ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರಿಗೆ ಸಾಹಿತ್ಯ ಕ್ಷೇತ್ರದ ಜೊತೆಗೆ, ಫೋಟೋಗ್ರಫಿ, ಮೀನು ಹಿಡಿಯುವುದು, ಸಿತಾರ್ ನುಡಿಸುವುದು, ವ್ಯವಸಾಯ ಮಾಡುವುದು ಹೀಗೆ ಹತ್ತು ಹಲವು ಆಸಕ್ತಿಗಳಿದ್ದವು. ಅದರಲ್ಲಿ ಅಡುಗೆ ಮಾಡುವುದು ಕೂಡ ಒಂದು. ಅವರ ಪತ್ನಿ ಮನೆಯಲ್ಲಿ ಇಲ್ಲದಾಗ ಅಡುಗೆಯಲ್ಲಿ ಹೊಸ ಕ್ರಾಂತಿಕಾರಕ ಬದಲಾವಣೆಗಳನ್ನು ತರಬೇಕೆಂದು ಹೊರಟರು. ಆ ಸಂದರ್ಭದಲ್ಲಿ ಎದುರಾಗುವ ಸನ್ನಿವೇಶಗಳನ್ನು ನಾಟಕದಲ್ಲಿ ರಂಜನೀಯವಾಗಿ ತೋರಿಸಲಾಗಿದೆ.

# ಮಧುರಕಾವ್ಯಕ್ಕೆ ಸುಮಧುರ ಧ್ವನಿ



**ಆಯುರ್ವೇದ** ಮತ್ತು ಅಲೋಪಥಿ ವೈದ್ಯಕೀಯ ಪದ್ಧತಿ ಕುರಿತಾದ ಕಥೆ ಹೊಂದಿರುವ ಹೊಸಬರ ಚಿತ್ರ ‘ಮಧುರಕಾವ್ಯ’ದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡವು. ಸ್ವತಃ ಆಯುರ್ವೇದ ವೈದ್ಯರಾದ ಮಧುಸೂದನ್ ಕ್ಯಾತನಹಳ್ಳಿ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸಂಗೀತ ನಿರ್ದೇಶಕ ವಿ.ಮನೋಹರ್ ಚಿತ್ರದ ಆಡಿಯೋ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಚಿತ್ರದ ಸಂಗೀತ ನಿರ್ದೇಶಕ ಸತೀಶ್ ಮೌರ್ಯ ಮಾತನಾಡಿ, ‘ಈ ಚಿತ್ರದಲ್ಲಿ 3 ಹಾಡುಗಳು ಹಾಗೂ 4 ಬಿಟ್ ಸಾಂಗ್ ಇದ್ದು, ದೇಸಿ ಶೈಲಿಯ ವಾದ್ಯಗಳನ್ನೇ ಬಳಸಿದ್ದೇವೆ. ರಾಜೇಶ್ ಕೃಷ್ಣನ್, ಮಧು ಬಾಲಕೃಷ್ಣನ್, ಚಿತ್ರಾ ಅವರ ಸುಮಧುರ ಧ್ವನಿ ಈ ಹಾಡುಗಳಿಗಿವೆ’ ಎಂದರು.

‘ಚಿತ್ರ ಬಿಡುಗಡೆಗೆ ಸಿದ್ಧವಿದೆ. ಆಯುರ್ವೇದ ಮತ್ತು ಅಲೋಪಥಿ ವೈದ್ಯ ಪದ್ಧತಿಗಳ ನಡುವಿನ ಸಂಘರ್ಷದ ಕಥಾವಸ್ತುವಿದೆ. ನಿರ್ದೇಶನದ ಜೊತೆಗೆ ನಾಯಕನ ಪಾತ್ರದಲ್ಲಿಯೂ ನಟಿಸಿರುವೆ. ಜೊತೆಗೆ ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತಿರುವೆ. ಚಿತ್ರದಲ್ಲಿ ನಾಯಕಿಯ ಪಾತ್ರವಿಲ್ಲ. ನಾಯಕನ ತಾಯಿಯಾಗಿ ರಂಗಭೂಮಿ ನಟಿ ಯಶೋಧ ಅವರು ಕಾಣಿಸಿಕೊಂಡಿದ್ದು, ಖಳನಾಯಕನಾಗಿ ರಾಜಕುಮಾರ್ ನಾಯಕ್ ನಟಿಸಿದ್ದಾರೆ’ ಎಂದು ನಿರ್ದೇಶಕ ಮಧುಸೂದನ್ ಹೇಳಿದರು. ಉಡುಪಿ, ಮಂಗಳೂರು, ಶಿರಸಿ ಸುತ್ತಮುತ್ತ ಚಿತ್ರೀಕರಣ ನಡೆದಿದೆ.

ತಂತ್ರಜ್ಞಾನ




# ಪ್ರೊಮೇಟ್‌ನಿಂದ ಅಲ್ಟ್ರಾಸ್ಲಿಮ್ ಪವರ್ ಬ್ಯಾಂಕ್

**ಪ್ರೊಮೇಟ್** ಟೆಕ್ನಾಲಜೀಸ್ ಕಂಪನಿಯು 10 ಸಾವಿರ ಎಂಎಎಚ್ ಬ್ಯಾಟರಿ ಸಾಮರ್ಥ್ಯದ ಅಲ್ಟ್ರಾ ಸ್ಲಿಮ್ ಪವರ್ ಬ್ಯಾಂಕ್ ‘ಟಾರ್ಕ್ 10’ ಬಿಡುಗಡೆ ಮಾಡಿದೆ. ಬಿಲ್ಟ್ ಇನ್ ಕಿಕ್‌ಸ್ಟ್ಯಾಂಡ್ ಅನ್ನೂ ಇದು ಒಳಗೊಂಡಿದೆ. ಅಮೆಜಾನ್‌ನಲ್ಲಿ ಇದರ ಬೆಲೆ ₹1,819.

ಟಾರ್ಕ್ 10 ಪವರ್ ಬ್ಯಾಂಕ್ ಎಲ್‌ಇಡಿ ಡಿಸ್‌ಪ್ಲೇ ಹೊಂದಿದ್ದು, ಬೇರೆ ಪವರ್ ಬ್ಯಾಂಕ್‌ಗಳಿಗಿಂತಲೂ ವೇಗವಾಗಿ ಮೊಬೈಲ್ ಮತ್ತು ಬೇರೆ ಸಾಧನಗಳು ಇದರಲ್ಲಿ ಚಾರ್ಜ್ ಆಗುತ್ತವೆ. ನಿರ್ದಿಷ್ಟ ಸಾಧನಕ್ಕೆ ಅಗತ್ಯ ಇರುವಷ್ಟು ಪ್ರಮಾಣದ ವಿದ್ಯುತ್ ಪೂರೈಕೆ ಆಗುವಂತೆ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಸೂಪರ್ ಫಾಸ್ಟ್ 20ವಾಟ್ ಯುಎಸ್‌ಬಿ–ಸಿ ಪೋರ್ಟ್ ಹೊಂದಿದೆ.

ತಕ್ಷಣಕ್ಕೆ ಚಾರ್ಜ್ ಆಗಲು ಕ್ವಾಲ್ಕಂ ಕ್ವಿಕ್ ಚಾರ್ಜ್ 3.0 ಪೋರ್ಟ್ ಸೂಪರ್ ಸ್ಪೀಡ್ 189ಡಬ್ಲ್ಯು ಕ್ವಿಕ್ ಚಾರ್ಜ್ ವ್ಯವಸ್ಥೆಯೂ ಇದರಲ್ಲಿದೆ. ನಿತ್ಯದ ಬಳಕೆಗೆ ಮತ್ತು ಪ್ರಯಾಣಕ್ಕೆ ಯೋಗ್ಯವಾದ ಪವರ್ ಬ್ಯಾಂಕ್ ಇದಾಗಿದೆ ಎಂದು ಕಂಪನಿ ಹೇಳಿದೆ.

# ‘ಹಾಡು ಬಾ ಕೋಗಿಲೆ’ಗೆ ಸಂತರ ಆಶೀರ್ವಾದ



**ವಿಸ್ಮಯ** ಬಾವಿಕಟ್ಟಿ ಗಾಯನದ ‘ಹಾಡು ಬಾ ಕೋಗಿಲೆ’ ಧ್ವನಿಸುರುಳಿಯನ್ನು ರಂಭಾಪುರಿ ಶ್ರೀಗಳು ಬಿಡುಗಡೆಗೊಳಿಸಿದರು. ಒಟ್ಟು ಒಂಬತ್ತು ಹಾಡುಗಳಿದ್ದು, ವಿಸ್ಮಯ ಐದು ಗೀತೆಗಳಿಗೆ ಧ್ವನಿಯಾಗಿದ್ದಾರೆ. ರಾಜಶೇಖರ ನುಲಿ ಸಂಗೀತ ಸಂಯೋಜನೆಯಲ್ಲಿ ಅಜಯ್ ವಾರಿಯರ್ ಒಂದು ಗೀತೆ ಹಾಡಿದ್ದಾರೆ. ಉಳಿದ ಗೀತೆಗಳನ್ನು ಹೊಸ ಗಾಯಕರು ಹಾಡಿದ್ದಾರೆ.

‘ಸಂಗೀತ ಮನಸ್ಸಿಗೆ ಆಹ್ಲಾದ ಕೊಡುತ್ತದೆ. ಗಾಯಕ ಸಿ.ಅಶ್ವಥ್ ಹಾಡುಗಳು ಇಂದಿಗೂ ಆಲಿಸುವಂತಿವೆ. ಅವರ ಗೀತೆಗಳು ಲೌಕಿಕ ಪ್ರಪಂಚ, ಅಧ್ಯಾತ್ಮದ ಕಡೆಗೆ ಒಲವನ್ನು ಬೀರುತ್ತಿದ್ದವು. ಕುಮಾರಿ ವಿಸ್ಮಯ ಬಾವಿಕಟ್ಟಿ ಚಿಕ್ಕ ವಯಸ್ಸಿಗೆ ಸಾಧನೆ ಮಾಡಲು ಹೊರಟಿದ್ದಾರೆ. ಇಂತಹ ಪ್ರತಿಭೆಗಳು ಹೆಚ್ಚಾಗಬೇಕು’ ಎಂದು ರಂಭಾಪುರಿ ಶ್ರೀಗಳು ಆಶೀರ್ವದಿಸಿದರು.

ಎನ್.ಎನ್.ಜಾಕಿ ಈಡೀಗರ್ ನಿರ್ದೇಶನದಲ್ಲಿ ಶೀರ್ಷಿಕೆ ಗೀತೆಯನ್ನು ಶಿವನಸಮುದ್ರದಲ್ಲಿ ಚಿತ್ರೀಕರಿಸಲಾಗಿದೆ. ಛಾಯಾಗ್ರಹಣ ನಿರಂಜನ್ ಭೂಪಣ್ಣ, ಸಂಕಲನ ನಾಗೇಂದ್ರ ಅರಸ್ ಅವರದ್ದು.

# ಚಿಕಿತ್ಸೆಯ ಫಲದಲ್ಲಿ ವೈದ್ಯರ ಸಾರ್ಥಕತೆ




ಡಾ. ಸ್ಮಿತಾ ಜೆ. ಡಿ.


ಸಾಂದರ್ಭಿಕ ಚಿತ್ರ

ವೈದ್ಯ ವೃತ್ತಿಯನ್ನು ನೊಬೆಲ್ ಪ್ರೊಫೆಷನ್ ಎಂದು ಬಣ್ಣಿಸುತ್ತಾರೆ. ಸಮಾಜದಲ್ಲಿ ವೈದ್ಯ ವೃತ್ತಿಗೆ ಅತ್ಯಂತ ಉನ್ನತ ಸ್ಥಾನ ನೀಡಲಾಗಿದೆ. ವೈದ್ಯರಾದವರು ಸ್ವಾರ್ಥವನ್ನು ಮೀರಿ ರೋಗಗಳೊಂದಿಗೆ ಸೆಣಸಾಡುತ್ತಾರೆ. ರೋಗಿ ಹಾಗೂ ಅವರ ಕುಟುಂಬದ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುವ ಜವಾಬ್ದಾರಿಯೂ ವೈದ್ಯರ ಮೇಲಿರುತ್ತದೆ. ಇಷ್ಟೆಲ್ಲ ಮಾಡಿದ ಮೇಲೆ ರೋಗಿ ಗುಣಮುಖನಾದರೆ ವೈದ್ಯರು ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ.

ಹೀಗೆ ರೋಗಿಗಳು ಗುಣಮುಖರಾದರೆ ಆ ತೃಪ್ತ ಭಾವವೇ ವೈದ್ಯರಲ್ಲಿ ಮುಂದಿನ ಕೆಲಸಕ್ಕೆ ಇನ್ನಷ್ಟು ಪ್ರೇರಣೆ ನೀಡುತ್ತದೆ. ಮತ್ತಷ್ಟು ಕ್ರಿಯಾಶೀಲರಾಗಿರುವಂತೆ ಹುರಿದುಂಬಿಸುತ್ತದೆ. ಕೊಂಚ ನಿರ್ಲಕ್ಷ್ಯವೂ ಇನ್ನೊಂದು ಜೀವಕ್ಕೆ ಮುಳವಾಗಬಹುದು. ಹಾಗಾಗಿ ವೈಯಕ್ತಿಕವಾಗಿ ಏನೇ ಸಮಸ್ಯೆ, ಜಂಜಾಟಗಳಿದ್ದರೂ ವೈದ್ಯರಾದವರು ವೃತ್ತಿನಿಷ್ಠೆಯನ್ನು ಹೊಂದಬೇಕಿರುವುದು ಅನಿವಾರ್ಯ.

## ವೈದ್ಯ ಸೇವೆ ಅನನ್ಯ

ವೈದ್ಯರಾದವರಿಗೆ ಇಂತಿಷ್ಟೇ ಸಮಯಕ್ಕೆ ಊಟ, ಇಂತಿಷ್ಟೇ ಸಮಯಕ್ಕೆ ನಿದ್ದೆ ಎಂಬುದು ಇಲ್ಲವಾದರೂ ವೈದ್ಯ ವೃತ್ತಿಯು ನಮ್ಮ ಆಯ್ಕೆ. ಹಾಗೆಯೆ ನಮಗೆ ಸಂತೃಪ್ತಿಯನ್ನು ತಂದುಕೊಡುವುದೆಂದು ಭಾವಿಸುವುದು ವೈದ್ಯ ಧರ್ಮ. ಒಂದು ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ವೈದ್ಯರ ಸೇವೆ ಅನನ್ಯ ಎಂಬುದನ್ನು ಮರೆಯುವಂತಿಲ್ಲ.

'ವೈದ್ಯೋ ನಾರಾಯಣೋ ಹರಿಃ' ಎಂದು ವೈದ್ಯರನ್ನು ದೇವರಿಗೆ ಹೋಲಿಸುತ್ತಾರೆ. ವೈದ್ಯರು ಸೂಕ್ತ ಚಿಕಿತ್ಸೆ ನೀಡುತ್ತಾರೆ. ರೋಗಿ ಗುಣಮುಖ ನಾಗುತ್ತಾನೆ. ಈ ಪ್ರಕ್ರಿಯೆಯಲ್ಲಿ ರೋಗಿಯ ಸ್ಪಂದನೆಯೂ ಬಹಳ ಮುಖ್ಯ. ಏಕೆಂದರೆ, ರೋಗ ಉಲ್ಬಣವಾಗುವ ಮುನ್ನವೇ ರೋಗಿಯು ಸಕಾಲದಲ್ಲಿ ವೈದ್ಯರನ್ನು ಭೇಟಿ ಮಾಡುವುದರಿಂದ, ಚಿಕಿತ್ಸೆಯೂ ಯಶಸ್ವಿಯಾಗುತ್ತದೆ, ರೋಗಿಯೂ ಗುಣಮುಖನಾಗುತ್ತಾನೆ.

ಇನ್ನು, ವೈದ್ಯರ ವಿರುದ್ಧದ ಸಮರ, ಹೋರಾಟದ ಬಗ್ಗೆ ಆಗಾಗ್ಗೆ ಕೇಳಿರುತ್ತೇವೆ. ವೈದ್ಯರು ಹಾಗೂ ರೋಗಿಯ ನಡುವಿನ ಈ ಸಂಕೀರ್ಣತೆಗಳು, ಸೂಕ್ಷ್ಮತೆಯನ್ನು ಅರಿಯುವ ಕೆಲಸವೂ ಆಗಬೇಕಿದೆ. ಬದಲಾದ ಕಾಲಘಟ್ಟದಲ್ಲಿ ವೈದ್ಯ ಹಾಗೂ ರೋಗಿಯ ನಡುವಿನ ಸಂಬಂಧ ಮತ್ತಷ್ಟು ಗಟ್ಟಿಯಾಗಬೇಕಿದೆ.

ವೈದ್ಯರು ತೆಗೆದುಕೊಳ್ಳುವ ಚಿಕಿತ್ಸಾ ನಿರ್ಧಾರಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರಬಹುದು. ಆದರೆ ವೈದ್ಯರು ರೋಗಿಯ ಸಮಸ್ಯೆಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಬೇಕಾಗಿದೆ. ಆದ್ದರಿಂದ ವೈದ್ಯರ ಮೇಲೆ ಭರವಸೆಯನ್ನಿಡುವುದು ಮುಖ್ಯ.

## ಸ್ವಯಂ ಚಿಕಿತ್ಸೆ ಸರಿಯಾದ ಕ್ರಮವಲ್ಲ

ಹಲವು ಬಾರಿ ರೋಗಿಗಳು ಬೇರೆ ಬೇರೆ ಮಾಧ್ಯಮಗಳಿಂದ ಸಿಕ್ಕ ಮಾಹಿತಿಯನ್ನು ಆಧರಿಸಿ ಸ್ವಯಂ ಚಿಕಿತ್ಸೆ ಮಾಡಿಕೊಳ್ಳುತ್ತಾರೆ. ಇದರಿಂದ ಉಪಯೋಗಕ್ಕಿಂತ ನಷ್ಟವೇ ಅಧಿಕ.

ಇತ್ತೀಚೆಗೆ ವೈದ್ಯರನ್ನು ಸಂಪರ್ಕಿಸುವ ಮೊದಲೇ ಗೂಗಲ್ ಸರ್ಚ್ ಮಾಡುತ್ತಾ, ಅಸಮರ್ಪಕ ಮಾಹಿತಿಯೊಂದಿಗೆ, ತಪ್ಪಾದ ಚಿಕಿತ್ಸೆಗಳಿಗೆ ತಮ್ಮನ್ನು ಒಡ್ಡಿಕೊಳ್ಳುವಂತಹವು, ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗಳ ಬಾಗಿಲು ತಟ್ಟುವಂತಹ ಪ್ರಕರಣಗಳೂ ಹೆಚ್ಚುತ್ತಿವೆ. ರೋಗಿಗಳಿಗೂ ಈ ವಿಚಾರದಲ್ಲಿ ಸ್ಪಷ್ಟತೆ ಸಿಗಬೇಕು. ವಿಷಯತಜ್ಞತೆ ಇರುವ ವೈದ್ಯರ ಸಲಹೆಗಳನ್ನು ಸ್ವೀಕರಿಸುವ ಮನಸ್ಥಿತಿ ಇದ್ದಾಗ ಮಾತ್ರ ಚಿಕಿತ್ಸೆ ಫಲಪ್ರದವಾಗುತ್ತದೆ. ಅಂತರ್ಜಾಲ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮೆಟಾವರ್ಸ್, ಟೆಲಿಮೆಡಿಸಿನ್ ಹೀಗೆ ವೈದ್ಯಶಾಸ್ತ್ರವು ಎಷ್ಟೇ ಮುಂದುವರಿದಿದ್ದರೂ ರೋಗಿಯು ವೈದ್ಯರನ್ನು ಕಂಡು, ಮಾತನಾಡಿಸಿ, ವೈದ್ಯರೊಂದಿಗೆ ತಮ್ಮ ಸಮಸ್ಯೆಗಳನ್ನು ವಿವರಿಸಿದಾಗ ಹಾಗೆಯೇ ವೈದ್ಯರು ಅದನ್ನು ಆಲಿಸಿ, ಅರ್ಥೈಸಿ, ವಿವರಿಸಿ, ಪರೀಕ್ಷಿಸಿ, ಬೆನ್ನುತಟ್ಟಿ, ಔಷಧಿಗಳನ್ನು ನೀಡಿ, ಸಾಂತ್ವನ ಹೇಳುವ ಭಾವವು ಚಿಕಿತ್ಸೆ ಪರಿಣಾಮಕಾರಿಯಾಗಿ ನೆರವಾಗುತ್ತದೆ.

ವೈದ್ಯರಾಗಿರುವವರ ಜೀವನದಲ್ಲಿಯೂ ಮಾನಸಿಕ ತುಮುಲಗಳು, ಆತಂಕ, ಭಯ, ಅಸಹಾಯಕತೆ, ನಕಾರಾತ್ಮಕ ಆಲೋಚನೆಗಳು ಇರುವುದರಿಂದ ತೀವ್ರ ಒತ್ತಡ ಅನುಭವಿಸುವುದು ಸಹಜವಾದರೂ ಗುಣಮುಖನಾದ ರೋಗಿಯ ತೃಪ್ತ ಮಂದಹಾಸದಲ್ಲಿದೆ ವೈದ್ಯರ ಸಾರ್ಥಕತೆ.

(ಲೇಖಕರು: ಓರಲ್ ಮೆಡಿಸನ್ ಹಾಗೂ ರೆಡಿಯಾಲಜಿ ತಜ್ಞರು)

## ರಾಷ್ಟ್ರೀಯ ವೈದ್ಯರ ದಿನಾಚರಣೆ

ಪಶ್ಚಿಮ ಬಂಗಾಳದ ಶ್ರೇಷ್ಠ ವೈದ್ಯ, ಭಾರತ ರತ್ನ ಪುರಸ್ಕೃತ ಡಾ.ಬಿ.ಸಿ.ರಾಯ್ (ಬಿಧಾನ್ ಚಂದ್ರ ರಾಯ್) ಅವರು ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯ ಸ್ಮರಣಾರ್ಥ, ಪ್ರತಿ ವರ್ಷ ಜುಲೈ 1 ರಂದು 'ರಾಷ್ಟ್ರೀಯ ವೈದ್ಯ ದಿನ'ವಾಗಿ ಆಚರಿಸಲಾಗುತ್ತಿದೆ.

ಜುಲೈ 1, ಬಿ.ಸಿ.ರಾಯ್ ಜನ್ಮದಿನ ಹಾಗೂ ಪುಣ್ಯ ಸ್ಮರಣೆಯ ದಿನವೂ ಹೌದು. ಅದೇ ಕಾರಣಕ್ಕೆ ಈ ದಿನವನ್ನು ರಾಷ್ಟ್ರೀಯ ವೈದ್ಯಕೀಯ ದಿನವನ್ನಾಗಿ ಆಚರಿಸಲು ತೀರ್ಮಾನಿಸಲಾಯಿತು. 1991ರಂದು ದೇಶದಲ್ಲಿ ಮೊದಲ ಬಾರಿಗೆ ವೈದ್ಯರ ದಿನ ಆಚರಿಸಲಾಯಿತು.

## ವೈದ್ಯರಿಗೆ ಗೌರವ ಸಲ್ಲಿಸುವ ದಿನ

ಮನುಷ್ಯನಿಗೆ ಆರೋಗ್ಯವೇ ಭಾಗ್ಯ. ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳಬೇಕು. ಆರೋಗ್ಯ ಕೆಟ್ಟಾಗ, ಅದಕ್ಕೆ ಮದ್ದು ನೀಡಿ ಗುಣಪಡಿಸುವವರು ವೈದ್ಯರು. ಅದಕ್ಕೆ ಅವರನ್ನು 'ವೈದ್ಯೋ ನಾರಾಯಣ ಹರಿಃ' ಎಂದು ಗೌರವದಿಂದ ಕರೆಯಲಾಗುತ್ತದೆ.

ಅನಾರೋಗ್ಯಪೀಡಿತರಿಗೆ ಚಿಕಿತ್ಸೆ ನೀಡಿ ಗುಣಪಡಿಸುವ, ಸಾವಿನ ದವಡೆಯಲ್ಲಿದ್ದವರನ್ನು ಪಾರು ಮಾಡುವ, ಒಂದು ರೀತಿ ಪುನರ್ಜನ್ಮ ನೀಡುವ ವೈದ್ಯರಿಗೆ ವಿಶೇಷ ಗೌರವ ಸಲ್ಲಿಸುವ ಸಲುವಾಗಿ ದೇಶದಾದ್ಯಂತ ಜುಲೈ 1ರಂದು ಭಾರತೀಯ ವೈದ್ಯಕೀಯ ಸಂಘವು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸುತ್ತದೆ.

ಈ ದಿನದಂದು, ವೈದ್ಯರ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತದೆ. ಅಲ್ಲದೇ ನಮ್ಮ ಜೀವನಕ್ಕೆ ವೈದ್ಯರು ನೀಡಿದ ಕೊಡುಗೆಯನ್ನು ಸ್ಮರಿಸಿ ಪ್ರಶಂಸಿಸಲಾಗುತ್ತದೆ. ಈ ವಿಶೇಷ ದಿನವನ್ನು ಜನರ ಸೇವೆಗಾಗಿ ಪ್ರಾಣವನ್ನೇ ಪಣಕ್ಕಿಟ್ಟಿರುವ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರಿಗೆ ಸಮರ್ಪಿಸಲಾಗುತ್ತದೆ.

**ಯಾರು ಬಿ.ಸಿ.ರಾಯ್ ?:** ಡಾ. ಬಿಧಾನ್ ಚಂದ್ರ ರಾಯ್ (ಬಿ.ಸಿ.ರಾಯ್) , ಪಶ್ಚಿಮ ಬಂಗಾಳದ ಶ್ರೇಷ್ಠ ವೈದ್ಯರು. ಶಿಕ್ಷಣ ತಜ್ಞರು. ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಪಶ್ಚಿಮ ಬಂಗಾಳದ ಮಾಜಿ ಮುಖ್ಯ ಮಂತ್ರಿ. ಜುಲೈ 1, 1882 ರಂದು ಬ್ರಿಟಿಷ್ ಆಡಳಿತದ ಪಾಟ್ನಾ ಬೆಂಗಾಲ್ ಪ್ರೆಸಿಡೆನ್ಸಿಯಲ್ಲಿ ಜನಿಸಿದ ಅವರು, ಜುಲೈ 1,1962 ರಲ್ಲಿ ಮರಣ ಹೊಂದಿದರು. ವೈದ್ಯಕೀಯ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ರಾಯ್ ಅವರಿಗೆ, 1961 ರಲ್ಲಿ ಭಾರತ ರತ್ನ ಪ್ರಶಸ್ತಿ ನೀಡಲಾಯಿತು.

ಬಿ.ಸಿ.ರಾಯ್ ಅವರು, ಭಾರತೀಯ ವೈದ್ಯಕೀಯ ಮಂಡಳಿ ಹಾಗೂ ಭಾರತೀಯ ವೈದ್ಯಕೀಯ ಸಂಘದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ವೈದ್ಯಕೀಯ ಕ್ಷೇತ್ರವಲ್ಲದೇ, ಶಿಕ್ಷಣ ಕ್ಷೇತ್ರ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ಸೇವೆ ಸಲ್ಲಿಸಿದ್ದರು.

**ವಿಶ್ವದಾದ್ಯಂತ ಆಚರಣೆ:** ವೈದ್ಯರ ದಿನ ಭಾರತದಲ್ಲಷ್ಟೇ ಅಲ್ಲದೇ, ಬೇರೆ ಬೇರೆ ರಾಷ್ಟ್ರಗಳಲ್ಲಿ, ಬೇರೆ ಬೇರೆ ತಿಂಗಳು, ದಿನಾಂಕದಂದು ಆಚರಿಸುತ್ತಾರೆ, ಅಮೆರಿಕದಲ್ಲಿ ಮಾ. 30, ಕ್ಯೂಬಾದಲ್ಲಿ ಡಿಸೆಂಬರ್ 3, ಇರಾನ್‌ನಲ್ಲಿ ಆಗಸ್ಟ್ 23ರಂದು ವೈದ್ಯರ ದಿನ ಆಚರಿಸುತ್ತಾರೆ. ಅಮೆರಿಕದಲ್ಲಿ 1933 ಮಾರ್ಚ್ ತಿಂಗಳಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಯಿತು.

## ಕಿವಿ ಆರೋಗ್ಯ; ಕಾಳಜಿ ಇರಲಿ

'ಕಿವಿ ಸೂಕ್ಷ್ಮ ಅಂಗವೆನಿಸಿದ್ದು, ಇಯರ್ ಫೋನ್ ಬಳಕೆಯನ್ನು ಆದಷ್ಟು ಕಡಿಮೆ ಮಾಡುವುದು ಒಳಿತು. ತೀರಾ ಅಗತ್ಯವೆನಿಸಿದ್ದಲ್ಲಿ ಬಳಸಿದರೂ ವಾಲ್ಯೂಮ್ ಕಡಿಮೆಯಿಟ್ಟು ಬಳಸಿ' ಎಂದು ಹುಬ್ಬಳ್ಳಿಯ ಕಿಮ್ಸ್‌ನ ಇಎನ್‌ಟಿ ವಿಭಾಗದ ಮುಖ್ಯಸ್ಥ ಡಾ.ರವೀಂದ್ರ ಪರಪ್ಪ ಗದಗ ಅವರ ಕಿವಿಮಾತು

ಇತ್ತೀಚೆಗೆ 'ಪ್ರಜಾವಾಣಿ' ನಡೆಸಿದ ಫೇಸ್‌ಬುಕ್ ಸಂವಾದ ಕಾರ್ಯಕ್ರಮದಲ್ಲಿ ಅವರು ನೀಡಿದ ಉಪಯುಕ್ತ ಸಲಹೆಗಳು ಹೀಗಿವೆ..

ಶ್ರವಣದೋಷಗಳು ಹುಟ್ಟಿನಿಂದಲೇ ಬರಬಹುದು ಇಲ್ಲವೆ ಯೌವನದಲ್ಲಿ ಕಾಣಿಸಿಕೊಳ್ಳಬಹುದು. ವಂಶಪಾರಂಪರ್ಯವಾಗಿಯೂ ಬರಬಹುದು. ವಯಸ್ಸಾದ ನಂತರ ಕಾಣಿಸಿಕೊಳ್ಳುವ ಶ್ರವಣದೋಷವೂ ಆಗಬಹುದು. ನಿರ್ಲಕ್ಷಿಸದೆ ತಜ್ಞವೈದ್ಯರನ್ನು ಕಂಡು, ಚಿಕಿತ್ಸೆ ಪಡೆದುಕೊಳ್ಳಬಹುದು.

ಶ್ರವಣ ದೋಷಕ್ಕೆ ಪರಿಹಾರವಾಗಿ ಶ್ರವಣ ಯಂತ್ರಗಳನ್ನು ಆನ್‌ಲೈನ್‌ನಲ್ಲಿ ತರಿಸಿಕೊಂಡು ಬಳಸಬೇಡಿ. ಕಣ್ಣಿನ ಸಮಸ್ಯೆಗೆ ಹೇಗೆ ತಪಾಸಣೆ ಗೊಳಪಟ್ಟು ಕನ್ನಡ ಬಳಸುತ್ತೇವೆಯೋ ಹಾಗೆಯೇ ಇಎನ್‌ಟಿ ತಜ್ಞ ವೈದ್ಯರನ್ನು ಕಂಡು ಪರೀಕ್ಷಿಸಿಯೇ ಶ್ರವಣ ಸಾಧನ ಬಳಸುವುದು ಸರಿಯಾದ ಕ್ರಮ ಎಂದು ಅವರು ಸೂಚಿಸಿದರು.

**ಹೀಗೊಂದಿಷ್ಟು ಸಲಹೆಗಳು...**

- ಕಿವಿ ಸ್ವಚ್ಛಗೊಳಿಸಲು ಕಿವಿಯೊಳಗೆ ಪೆನ್ನು, ಕಡ್ಡಿ, ಬಡ್, ಹೇರ್‌ಪಿನ್, ಸೇಫ್ಟಿಫಿನ್ ತೂರಿಸಬೇಡಿ
- ಬಿಸಿ ಎಣ್ಣೆ ಹಾಕಬೇಡಿ
- ಡ್ರಾಪ್ಸ್ ಹಾಕುವುದಾರೂ ವೈದ್ಯರ ಸಲಹೆ ಮೇರೆಗೆ ಹಾಕಿ
- ಕಿವಿಯೊಳಗೆ ಇರುವೆ, ಕೀಟಗಳು ಹೋಗಿದ್ದಲ್ಲಿ, ಉಗುರು ಬೆಚ್ಚಗಿನ ನೀರನ್ನು ಹಾಕಬಹುದು. ಆದರೆ ಇಎನ್‌ಟಿ ತಜ್ಞರನ್ನು ಸಂಪರ್ಕಿಸಿ ಸಲಹೆ, ಚಿಕಿತ್ಸೆ ಪಡೆಯಿರಿ
- ಹೆಚ್ಚು ಡೆಸಿಬಲ್ ಶಬ್ದವಿಟ್ಟು ಇಯರ್‌ಫೋನ್‌ಗಳನ್ನು ಬಳಸಬೇಡಿ
- ಕಿವಿ ಸೋರುವಿಕೆಯನ್ನು ನಿರ್ಲಕ್ಷಿಸಬೇಡಿ

# ಕಣ್ಣಿಗಿರಲಿ ಪ್ರೀತಿಯ ಕಾಳಜಿ



ದೇಹದಲ್ಲಿ ಅತೀ ಸೂಕ್ಷ್ಮ ಹಾಗೂ ಅಗತ್ಯವಾದ ಅಂಗಗಳಲ್ಲಿ ಕಣ್ಣು ಕೂಡ ಒಂದು. ಇತ್ತೀಚಿನ ದಿನಗಳಲ್ಲಿ ಆಹಾರ, ಜೀವನಶೈಲಿಯ ಬದಲಾವಣೆಗಳಿಂದ ವಯಸ್ಸಿನ ಅಂತರವಿಲ್ಲದೆ ಕಣ್ಣಿನ ಸಮಸ್ಯೆಗಳು ಸಾಮಾನ್ಯ ಎನ್ನುವಂತಾಗಿದೆ. ಕಾಲಕ್ಕೆ ತಕ್ಕ ಹಾಗೆ ಕಣ್ಣಿನ ಆರೋಗ್ಯವನ್ನು ಯಾವ ರೀತಿ ಕಾಯ್ದುಕೊಳ್ಳಬೇಕು, ಕಣ್ಣಿನ ಸ್ವಾಸ್ಥ್ಯವನ್ನು ಉತ್ತಮವಾಗಿಸಲು ಪಾಲಿಸಬೇಕಾದ ಸಲಹೆಗಳೇನು ಎನ್ನುವ ಬಗ್ಗೆ **ನಾರಾಯಣ ನೇತ್ರಾಲಯದ ನೇತ್ರತಜ್ಞ ಡಾ. ನರೇನ್ ಶೆಟ್ಟಿ** ಒಂದಷ್ಟು ಮಾಹಿತಿ ನೀಡಿದ್ದಾರೆ ...

## ಆಹಾರ ಕ್ರಮ

ಕಣ್ಣಿನ ಆರೋಗ್ಯಕ್ಕೆ ಬಹುಮುಖ್ಯವಾಗಿ ಬೇಕಾಗಿರುವುದು ಆಹಾರದ ಸಮತೋಲನ. ಕಡಿಮೆ ಕಾರ್ಬೋಹೈಡ್ರೇಡ್ ಆಹಾರಗಳ ಸೇವನೆ, ಆರೋಗ್ಯಕರ ಕೊಬ್ಬಿನ ಅಂಶ, ಉತ್ತಮ ಪ್ರಮಾಣ ಪ್ರೋಟೀನ್‌ಯುಕ್ತ ಆಹಾರಗಳು ಅಗತ್ಯ. ಹಾಲು ಮತ್ತು ಹಾಲಿನ ಉತ್ಪನ್ನಗಳು ಕಣ್ಣು ಮಾತ್ರವಲ್ಲದೆ ದೇಹದ ಆರೋಗ್ಯವನ್ನು ಕಾಪಾಡುತ್ತವೆ. ಮಾಂಸಾಹಾರಿಗಳಾಗಿದ್ದರೆ ಸಂಸ್ಕರಿತ ಮಾಂಸಾಹಾರವನ್ನು ಸೇವಿಸದಿರುವುದು ಒಳ್ಳೆಯದು.



ಡಾ. ನರೇನ್ ಶೆಟ್ಟಿ

## ನಿಯಮಿತ ತಪಾಸಣೆ

ಕಣ್ಣಿನ ಆರೋಗ್ಯ ಉತ್ತಮವಾಗಿರಬೇಕೆಂದರೆ ನಿಯಮಿತ ಪರೀಕ್ಷೆ ಮಾಡಿಸಿಕೊಳ್ಳುವುದು ಅಗತ್ಯ. ಅದು ಚಿಕ್ಕಂದಿನಿಂದಲೇ ಆರಂಭವಾದರೆ ಭವಿಷ್ಯದಲ್ಲಾಗುವ ದೃಷ್ಟಿ ದೋಷವನ್ನು ತಡೆಯಬಹುದಾಗಿದೆ. ಅದಕ್ಕಾಗಿ ವರ್ಷಕ್ಕೆ ಒಂದು ಬಾರಿಯಾದರೂ ಪರೀಕ್ಷೆ ಮಾಡಿಸಬೇಕು. ಮಕ್ಕಳ ವಿಚಾರಕ್ಕೆ ಬಂದರೆ, ಮಗು ಅವಧಿ ಪೂರ್ವದಲ್ಲಿ ಜನಿಸಿದ್ದರೆ ಆಗ ಹೆಚ್ಚು ಕಾಳಜಿವಹಿಸುವುದು ಅಗತ್ಯ. ಅಂತಹ ಸಂದರ್ಭದಲ್ಲಿ 'ಆರ್‌ಒಪಿ ಸ್ಕ್ರೀನಿಂಗ್' ಎನ್ನುವ ಪರೀಕ್ಷೆ ಮಾಡಲಾಗುತ್ತದೆ. ಇದರಿಂದ ಬೆಳವಣಿಗೆಯ ಹಂತದಲ್ಲಾಗುವ ಸಮಸ್ಯೆಯನ್ನು ಪತ್ತೆ ಮಾಡಿ ಸೂಕ್ತ ಚಿಕಿತ್ಸೆ ನೀಡಬಹುದು.

ಹೆಚ್ಚು ಹೊತ್ತು ಮೊಬೈಲ್, ಕಂಪ್ಯೂಟರ್ ನೋಡುವುದರಿಂದ ಕಣ್ಣಿಗೆ ದಣಿವಾಗುತ್ತದೆ. ಹೀಗಾಗಿ 20:20 ನಿಯಮ ಪಾಲಿಸುವುದು ಒಳ್ಳೆಯದು. ಅಂದರೆ ಪ್ರತಿ 20 ನಿಮಿಷಕ್ಕೊಮ್ಮೆ ಕನಿಷ್ಠ 5 ನಿಮಿಷವಾದರೂ ವಿಶ್ರಾಂತಿ ನೀಡಿ. ಆಗಾಗ ಕಣ್ಣು ಮಿಟುಕಿಸುತ್ತಿರಿ. ಇನ್ನು ಬಹಳ ಮುಖ್ಯವಾಗಿ ಕಣ್ಣಿಗೆ ಸಂಬಂಧಿಸಿದ ಸಣ್ಣ ಪುಟ್ಟ ವ್ಯಾಯಾಮಗಳನ್ನು ಮಾಡುತ್ತಿದ್ದರೆ ನರಗಳನ್ನು ಉತ್ತಮವಾಗಿರಿಸಿಕೊಳ್ಳಲು ನೆರವಾಗುತ್ತದೆ. ಇದರಿಂದ ದೃಷ್ಟಿ ಸಮಸ್ಯೆ ಬರದಂತೆ ತಡೆಯಬಹುದಾಗಿದೆ.

## ಮಧುಮೇಹಿಗಳ ಕಣ್ಣಿನ ಆರೋಗ್ಯ

ಮಧುಮೇಹಿಗಳಲ್ಲಿ ಕಣ್ಣಿನ ಸಮಸ್ಯೆ ಬಹಳ ಬೇಗನೆ ಕಾಣಿಸಿಕೊಳ್ಳುತ್ತದೆ. ಹೀಗಾಗಿ ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಿಸಲು ಔಷಧ- ಮಾತ್ರೆಗಳ ಜೊತೆಗೆ ನಾವು ಸೇವಿಸುವ ಆಹಾರವೂ ಅಷ್ಟೇ ಪ್ರಮುಖ ಪಾತ್ರವಹಿಸುತ್ತದೆ. ವೈದ್ಯರ ಸಲಹೆ ಪಡೆದು ಅದಕ್ಕೆ ತಕ್ಕ ಹಾಗೆ ಆಹಾರಶೈಲಿ ರೂಢಿಸಿಕೊಳ್ಳುವುದು ಒಳಿತು. ಅಲ್ಲದೆ ವರ್ಷಕ್ಕೆ ಒಮ್ಮೆಯಾದರೂ ತಪ್ಪದೆ ತಜ್ಞರ ಬಳಿ ಕಣ್ಣಿನ ಪೂರ್ಣ ತಪಾಸಣೆ ಮಾಡಿಸಲೇಬೇಕು.


## ಚಾಳೀಸ್ ಸಮಸ್ಯೆ

ಸಾಮಾನ್ಯವಾಗಿ ಆರೋಗ್ಯಯುತ ಕಣ್ಣುಗಳಲ್ಲಿ ದೂರದ ವಸ್ತುಗಳು ನೋಡುವಾಗ ಕಣ್ಣಿನ ಸ್ನಾಯುಗಳು ಸಡಿಲಗೊಳ್ಳುತ್ತವೆ, ಹತ್ತಿರದ ವಸ್ತು ನೋಡುವಾಗ ಸಂಕುಚಿತಗೊಳ್ಳುತ್ತದೆ. ಆದರೆ ಚಾಳೀಸ್ ಬಂದಾಗ ಕೇಂದ್ರೀಕರಿಸುವ ಶಕ್ತಿಯನ್ನು ಕಣ್ಣಿನ ನರಗಳು ಕಳೆದುಕೊಳ್ಳುತ್ತವೆ. ಹೀಗಾಗಿ ದೃಷ್ಟಿ ಮಂದವಾಗುತ್ತದೆ. ಇತ್ತೀಚಿನ ದಿನಗಳಲ್ಲಿ 40ನೇ ವಯಸ್ಸಿನಲ್ಲಿಯೇ ಚಾಳೀಸ್ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಕೆಲವು ಅಧ್ಯಯನಗಳ ಪ್ರಕಾರ ಕಣ್ಣಿನ ವ್ಯಾಯಾಮಗಳು ಚಾಳೀಸ್ ಸಮಸ್ಯೆಯನ್ನು ಮುಂದೂಡಲು ಸಹಾಯ ಮಾಡುತ್ತವೆ.

(ನಿರೂಪಣೆ: ಪವಿತ್ರಾ ಭಟ್)

## ಹರ್ನಿಯಾ ಶಸ್ತ್ರ ಚಿಕಿತ್ಸೆ: ಕನ್ನಿಂಗ್‌ಹ್ಯಾಮ್ ರಸ್ತೆಯ ಫೋರ್ಟಿಸ್ ಆಸ್ಪತ್ರೆಗೆ ಪ್ರಶಸ್ತಿ ಗರಿ



ಬೆಂಗಳೂರು ನಗರದ ಕನ್ನಿಂಗ್‌ಹ್ಯಾಮ್ ರಸ್ತೆಯ ಪ್ರಸಿದ್ಧ ಫೋರ್ಟಿಸ್ ಆಸ್ಪತ್ರೆ, ಹರ್ನಿಯಾ ಸೊಸೈಟಿ ಆಫ್ ಇಂಡಿಯಾ ನೀಡುವ 'ಹರ್ನಿಯಾ ಶಸ್ತ್ರಚಿಕಿತ್ಸೆ ಶ್ರೇಷ್ಠತಾ ಕೇಂದ್ರ ಪ್ರಶಸ್ತಿ'ಯನ್ನು ಪಡೆದಿದೆ. ಹರ್ನಿಯಾ (ಅಂಡವಾಯು) ಶಸ್ತ್ರಚಿಕಿತ್ಸೆಯಲ್ಲಿ ಮನ್ನಣೆ ಪಡೆದ ದಕ್ಷಿಣ ಭಾರತದ ಪ್ರಥಮ ಕಾರ್ಪೋರೇಟ್ ಆಸ್ಪತ್ರೆ ಎಂದು ಕನ್ನಿಂಗ್‌ಹ್ಯಾಮ್ ರಸ್ತೆಯ ಫೋರ್ಟಿಸ್ ಆಸ್ಪತ್ರೆಯು ಗುರುತಿಸಲ್ಪಟ್ಟಿದೆ.

ಹರ್ನಿಯಾ ಶಸ್ತ್ರಚಿಕಿತ್ಸೆಯಲ್ಲಿ ವೈದ್ಯ ಗಣೇಶ್ ಶೆಣೈ ಅವರು ಮಾಡಿದ ಕೆಲಸವನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಡಾ. ಶೆಣೈ ಅವರು ಎಲ್ಲ ರೀತಿಯ ಹರ್ನಿಯಾ ಸಮಸ್ಯೆಗಳಿಗೆ ಮೂಲಭೂತ, ಸುಧಾರಿತ, ನೂತನ ಹಾಗೂ ನವೀನ ತಂತ್ರಗಳೊಂದಿಗೆ ವಿವಿಧ ರೀತಿಯ ಲ್ಯಾಪರೊಸ್ಕೋಪಿಕ್ ಕಾರ್ಯವಿಧಾನಗಳನ್ನು ಅನುಸರಿಸಿದ್ದಾರೆ. ಈ ಎಲ್ಲ ಕಾರ್ಯಾಚರಣೆಗಳ ಜೊತೆಯಲ್ಲಿ ಡಾ. ಶೆಣೈ ಅವರು ದೇಶ ಮತ್ತು ವಿದೇಶಗಳ ಹಲವಾರು ಶಸ್ತ್ರಚಿಕಿತ್ಸಕರಿಗೆ ಹರ್ನಿಯಾ ಶಸ್ತ್ರಚಿಕಿತ್ಸೆಯಲ್ಲಿ ತರಬೇತಿ ನೀಡಿದ್ದಾರೆ. ಅಲ್ಲದೇ, ಅವರು ಶಸ್ತ್ರಚಿಕಿತ್ಸಕರಿಗೆ ತರಬೇತಿ ಕೋರ್ಸ್‌ಗಳನ್ನು ನಡೆಸುತ್ತಾರೆ.

**ಡಾ. ಗಣೇಶ್ ಶೆಣೈ,** ಹೆಚ್ಚುವರಿ ನಿರ್ದೇಶಕರು,ಎಂಎಎಸ್,
ಜಿಐ ಮತ್ತು ಬ್ಯಾರಿಯಾಟ್ರಿಕ್ ಶಸ್ತ್ರಚಿಕಿತ್ಸೆ ವಿಭಾಗ

# ಆಶಾಕಿರಣ: ಮಿಲಾನ್ ಫರ್ಟಿಲಿಟಿ ಕೇಂದ್ರ





ಡಾ. ಶಿಲ್ಪಾ ಯೆಲ್ಲೂರು

**ಗರ್ಭಧಾರಣೆ** ಎನ್ನುವುದು ಸಹಜ ಹಾಗೂ ನೈಸರ್ಗಿಕ ಪ್ರಕ್ರಿಯೆ. ಆದರೆ ಎಲ್ಲ ದಂಪತಿ ಈ ಪ್ರಕ್ರಿಯೆಯನ್ನು ಸಹಜವಾಗಿ ಹಾದು ಹೋಗಲು ಸಾಧ್ಯವಾಗದೇ ಇರಬಹುದು. ಇದಕ್ಕೆ ಹಲವಾರು ಕಾರಣಗಳಿಗೆ. ಸಂತಾನೋತ್ಪತ್ತಿ ನ್ಯೂನತೆಗಳನ್ನು ಕಂಡುಹಿಡಿಯುವ ವಿಶೇಷ ತಂತ್ರಜ್ಞಾನವೊಂದು ಇದ್ದು 'ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ (ಎಆರ್‌ಟಿ) ಯ ಮೂಲಕ ಸಮಸ್ಯೆಯನ್ನು ನಿಖರವಾಗಿ ಪತ್ತೆ ಹಚ್ಚಬಹುದು ಎಂದು ರಿಪ್ರೊಡಕ್ಟಿವ್ ಮೆಡಿಸಿನ್ ಸ್ಪೆಷಾಲಿಸ್ಟ್ ಡಾ.ರಾಜಂ ಮುರಳಿ ಅಭಿಪ್ರಾಯಪಡುತ್ತಾರೆ.

ಹಲವು ಬಗೆಯ ಸಮಸ್ಯೆಗಳಿಂದ ನರಳುತ್ತಿರುವವರು ಸಶಕ್ತವಾಗಿ ಗರ್ಭಧರಿಸಿದ ಉದಾಹರಣೆಗಳನ್ನು ಮಿಲಾನ್ ಫರ್ಟಿಲಿಟಿ ಕೇಂದ್ರದಲ್ಲಿ ನೋಡಬಹುದು.

ಈಚೆಗಷ್ಟೆ 32ರ ವಯಸ್ಸಿನ ಸಂಗೀತಾ (ಹೆಸರು ಬದಲಿಸಲಾಗಿದೆ) ಅವರು ಕೇಂದ್ರಕ್ಕೆ ಭೇಟಿ ನೀಡಿದ್ದರು. ಅವರ ಕಥೆ ಸ್ವಲ್ಪ ಕ್ಲಿಷ್ಟ ಹಾಗೂ ವಿಭಿನ್ನ. ಹಲವು ಪ್ರಯತ್ನಗಳ ನಂತರವೂ ಸಂಗೀತಾ ಗರ್ಭ ಧರಿಸಲು ಸಾಧ್ಯವಾಗಲಿಲ್ಲ. ಸಂಗೀತಾ ಅವರಿಗಿದ್ದ ಸಂತಾನೋತ್ಪತ್ತಿ ಸಮಸ್ಯೆಗೆ ಕ್ರಯೋಪ್ರಿಸರ್ವೇಷನ್ ಬಹಳ ಸಹಾಯವಾಯಿತು. ಮಿಲಾನ್ ಫರ್ಟಿಲಿಟಿ ಕೇಂದ್ರದಲ್ಲಿ ಸಂಗೀತಾ ದಂಪತಿಗೆ ಹಲವು ಸುತ್ತಿನ ಪರೀಕ್ಷೆ ನಡೆಸಲಾಯಿತು. ಅದರಲ್ಲಿ ಕಂಡುಬಂದ ಅಂಶವೆಂದರೆ ಸಂಗೀತಾ ಅವರಲ್ಲಿ ಆರೋಗ್ಯಕರ ಅಂಡಾಣುಗಳ ಸಂಖ್ಯೆ ಕಡಿಮೆ ಇತ್ತು. ಜತೆಗೆ ಅವರ ಪತಿ ಮೂತ್ರನಾಳಕ್ಕೆ ಸಂಬಂಧಿತ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಅವರಿಗೆ ಕಿಮೋಥೆರಪಿ ಚಿಕಿತ್ಸೆ ನೀಡುವ ಅನಿವಾರ್ಯವಿತ್ತು.

ವೀರ್ಯಾಣುಗಳನ್ನು ಸಂರಕ್ಷಿಸಿಡುವ ಬಗ್ಗೆ ಸಂಗೀತಾ ಅವರ ಪತಿಗೆ ಕೌನ್ಸೆಲ್ಲಿಂಗ್ ನೀಡಲಾಯಿತು. ಕಿಮೋಥೆರಪಿಯಿಂದ ಗ್ಯಾಮೀಟ್‌ಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರಿಂದ ಈ ಸಲಹೆ ನೀಡಲಾಯಿತು ಎನ್ನುತ್ತಾರೆ ಕ್ಯಾನ್ಸರ್‌ರೋಗ ತಜ್ಞ ಡಾ. ಶೇಖರ್ ಪಾಟೀಲ್.

ವಿವಿಧ ಪರೀಕ್ಷೆಗಳ ನಂತರ ಕಂಡುಬಂದ ಅಂಶವೆಂದರೆ ಸಂಗೀತಾ ಅವರಲ್ಲಿ ಗುಣಮಟ್ಟದ ಅಂಡಾಣುಗಳ ಕೊರತೆಯಿತ್ತು. ಹಾಗಾಗಿ ದಾನಿಗಳ ಸಹಾಯದಿಂದ ಅಂಡಾಣುಗಳನ್ನು ಸಂರಕ್ಷಿಸಲಾಯಿತು. ಈ ಚಿಕಿತ್ಸೆ ನಡೆಯುತ್ತಿರುವಾಗಲೇ ಸಂಗೀತಾ ಪತಿ ಕ್ಯಾನ್ಸರ್‌ಗೆ ತುತ್ತಾದರು. ಆದರೆ, ಸಾಯುವ ಮುನ್ನ ಅವರು ಎಂಬ್ರಿಯೋ ವರ್ಗಾವಣೆಗೆ ಸಹಿ ಹಾಕಿದ್ದರಿಂದ ಸಂಗೀತಾ ಅವರು ಬಹಳ ಕ್ಲಿಷ್ಟ ಸಂದರ್ಭದಲ್ಲಿಯೂ ತಾಯಿಯಾಗಲು ಶಕ್ತರಾದರು. ಇದು ಮಿಲಾನ್ ಫರ್ಟಿಲಿಟಿ ಕೇಂದ್ರದಲ್ಲಿರುವ ಹಲವು ತಜ್ಞವೈದ್ಯರ ನಿರಂತರ ಪ್ರಯತ್ನದಿಂದಾಗಿ ಇಂಥ ಅಸಾಧ್ಯವಾದುದನ್ನು ಸಾಧಿಸಲಾಯಿತು. ❖

# ಶ್ರೇಯಾ ಹಿಯರಿಂಗ್ ಕ್ಲಿನಿಕ್‌ಗೆ ಬೆಳ್ಳಿ ಹಬ್ಬ !

ಶ್ರವಣ ದೋಷವಿರುವವರಿಗೆ ಪರಿಣಾಮಕಾರಿ ಸಾಧನ ನೀಡಬೇಕು, ಶ್ರವಣ ದೋಷದ ಬಗ್ಗೆ ಜಾಗೃತಿ ಮೂಡಿಸಬೇಕು, ಚಿಕಿತ್ಸೆ ಮೂಲಕ ಶ್ರವಣ ದೋಷಕ್ಕೆ ಪರಿಹಾರ ಕಂಡುಕೊಳ್ಳುವಂತೆ ಸಾರ್ವಜನಿಕರನ್ನು ಉತ್ತೇಜಿಸಬೇಕು .. ಇಂಥ ಹಲವು ಉತ್ತಮ ಆಶಯಗಳೊಂದಿಗೆ ಆರಂಭವಾದ ಬೆಂಗಳೂರಿನ ಶ್ರೇಯಾ ಹಿಯರಿಂಗ್ ಕ್ಲಿನಿಕ್, ಈಗ 25 ವಸಂತಗಳನ್ನು ಪೂರೈಸಿದೆ !

ಕ್ಲಿನಿಕ್‌ನ ನಿರ್ದೇಶಕಿ ಡಾ. ಸತ್ಯಾ ರನ್ನ ಅವರು ಶ್ರವಣ ದೋಷವಿರುವವರಿಗೆ ನೆರವಾಗುವುದಕ್ಕಾಗಿಯೇ 25 ವರ್ಷಗಳ ಹಿಂದೆ ಬೆಂಗಳೂರಿನ ಇಂದಿರಾನಗರದಲ್ಲಿ ಶ್ರೇಯಾ ಹಿಯರಿಂಗ್ ಕ್ಲಿನಿಕ್‌ನ ಮೊದಲ ಕೇಂದ್ರವನ್ನು ಆರಂಭಿಸಿದರು. ಎಂಟು ಸಾವಿರ ಚದರ ಅಡಿ ವಿಸ್ತೀರ್ಣದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೇಂದ್ರದಲ್ಲಿ ಅತ್ಯಾಧುನಿಕ ಕಂಪ್ಯೂಟರೀಕೃತ ಸೌಲಭ್ಯಗಳಿವೆ.

ವ್ಯಕ್ತಿಯ ಶ್ರವಣ ದೋಷಕ್ಕೆ ಅಗತ್ಯುವುಳ್ಳಂತಹ ಶ್ರವಣ ಸಾಧನ ತಯಾರಿಸುವುದು ಈ ಸಂಸ್ಥೆಯ ವೈಶಿಷ್ಟ್ಯ. ಈ ಕ್ಲಿನಿಕ್, ಕೇವಲ ಶ್ರವಣ ಸಾಧನ ತಯಾರಿಕೆಗಷ್ಟೇ ಸೀಮಿತವಾಗಿಲ್ಲ. ಇಲ್ಲಿ ಅಗತ್ಯವಿರುವ ವ್ಯಕ್ತಿಗಳಿಗೆ ಕೌನ್ಸೆಲಿಂಗ್ ನೀಡಲಾಗುತ್ತದೆ. ಮಾನಸಿಕ ಹಾಗೂ ಸಾಮಾಜಿಕ ಸಮಸ್ಯೆಗಳಿಂದ ಬಳಲುವವರಿಗೆ ಆತ್ಮಸ್ಥೈರ್ಯ ತುಂಬುವ ಪ್ರಯತ್ನ ಮಾಡಲಾಗುತ್ತಿದೆ.

ತುಂಬಾ ಸ್ಮಾರ್ಟ್ ಮತ್ತು ಪರಿಣಾಮಕಾರಿಯಾದ ನ್ಯಾನೊ ತಂತ್ರಜ್ಞಾನ ಆಧಾರಿತ ಶ್ರವಣ ಸಾಧನವನ್ನು ಶ್ರೇಯಾ ಕ್ಲಿನಿಕ್‌ನಲ್ಲಿ ತಯಾರಿಸಲಾಗುತ್ತದೆ. ಇದು ಸಂಸ್ಥೆಯ ಹೆಗ್ಗಳಿಕೆ. ಈ ಶ್ರವಣ ಸಾಧನವನ್ನು ಅಳವಡಿಸಿ ಕೊಂಡರೆ, ವ್ಯಕ್ತಿಯ ಹತ್ತಿರ ಬರುವವರೆಗೂ ಅವರು ಈ ಸಾಧನ ಧರಿಸಿರುವುದು ಕಾಣುವುದಿಲ್ಲ. ಅಷ್ಟು ಸೂಕ್ಷ್ಮವಾಗಿರುತ್ತದೆ. ಮೊಬೈಲ್‌ನಲ್ಲಿ ಮಾತು ಕೇಳಿಸಿ ಕೊಳ್ಳಲು, ಟಿವಿ ಕಾರ್ಯಕ್ರಮಗಳನ್ನು ಆಲಿಸಲು, ಸೂಕ್ಷ್ಮ ಧ್ವನಿ ತರಂಗಗಳನ್ನು ಹಿಡಿದಿಡಲು ಈ ಸಾಧನ ನೆರವಾಗುತ್ತದೆ. ಶ್ರವಣಕ್ಕೆ ಯಾವುದೇ ಸಮಸ್ಯೆಯಾಗದಂತೆ ಬ್ಲ್ಯೂಟೂತ್ ತಂತ್ರಜ್ಞಾನವನ್ನು ಈ ಸಾಧನದಲ್ಲಿ ಅಳವಡಿಸಲಾಗಿದೆ. ಶ್ರೇಯಾ ಕ್ಲಿನಿಕ್‌ನ ವಿವಿಧ ಶಾಖೆಗಳಲ್ಲಿ ಈ ಸಾಧನವನ್ನು ಪ್ರಯೋಗ ಮಾಡಿ ಎಲ್ಲ ಗುಣ ವಿಶೇಷಣಗಳನ್ನು ಖಚಿತಪಡಿಸಿಕೊಳ್ಳಬಹುದು ಎನ್ನುವುದು ಸಂಸ್ಥೆಯ ಅಭಿಪ್ರಾಯವಾಗಿದೆ.



ಡಾ. ಸತ್ಯಾ ರನ್ನ

**ಡಾ. ಸತ್ಯಾ ರನ್ನ ಪರಿಚಯ:** ಇಂಥ ಅತ್ಯಾಧುನಿಕ ಶ್ರವಣ ಸಾಧನಗಳ ತಯಾರಿಕೆಗೆ ಕಾರಣವಾ ಗಿರುವ ಡಾ. ಸತ್ಯಾ ರನ್ನ ಅವರು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಿಂದ ಡಾಕ್ಟರೇಟ್ ಪಡೆದಿದ್ದಾರೆ. ಇವರ ವಾಕ್ ಶ್ರವಣ ಕ್ಷೇತ್ರದಲ್ಲಿನ ಸೇವೆಯನ್ನು ಗುರುತಿಸಿ ಸೀಮೆನ್ ವಾರ್ಷಿಕ ಶ್ರೇಷ್ಠ ಪ್ರಶಸ್ತಿ, ಭಾರತೀಯ ವಾಕ್ ಮತ್ತು ಶ್ರವಣ ಸಂಘದಿಂದ 'ಶ್ರವಣಶಾಸ್ತ್ರದ ಅತ್ಯುತ್ತಮ ಉದ್ಯಮಿ ಪ್ರಶಸ್ತಿ' ಸೇರಿದಂತೆ ಹಲವು ಪ್ರಶಸ್ತಿಗಳು ಇವರ ಮುಡಿಗೇರಿವೆ.

'ಶ್ರವಣ ದೋಷವಿರುವವರನ್ನು ಗೌರವಿಸಿ. ಮೌಢ್ಯಗಳಿಗೆ ಮೊರೆ ಹೋಗದೇ, ಅವರಿಗೆ ಚಿಕಿತ್ಸೆಕೊಡಿಸಬೇಕು. ಇದರಿಂದ ಹಲವು ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ..'– ಎಂಬುದು ಶ್ರೇಯಾ ಹಿಯರಿಂಗ್ ಕ್ಲಿನಿಕ್‌ನ ನಿರ್ದೇಶಕಿ ಡಾ. ಸತ್ಯಾ ರನ್ನ ಅವರ ಮಾತು.

ಡಾ. ಸತ್ಯಾ ರನ್ನಾ ಅವರು, ಶ್ರವಣ ಸಾಧನಗಳ ತಯಾರಿಕೆ ಜೊತೆಗೆ, ಶ್ರವಣ ದೋಷದ ಕುರಿತು ಜಾಗೃತಿ ಮೂಡಿಸುವ ಬರಹಗಳನ್ನು ಪತ್ರಿಕೆಗಳಿಗೆ ಬರೆದಿದ್ದಾರೆ. ಟಿ.ವಿ. ಕಾರ್ಯಕ್ರಮಗಳ ಮೂಲಕವೂ ಶ್ರವಣ ದೋಷದ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ವಿವಿಧ ರಾಷ್ಟಮಟ್ಟದ ವೈದ್ಯಕೀಯ ಸಮ್ಮೇಳನಗಳಲ್ಲಿ ಪಾಲ್ಗೊಂಡು ಸಂಶೋಧನೆ ಮತ್ತು ಅಧ್ಯಯನ ಪ್ರಬಂಧಗಳನ್ನು ಮಂಡಿಸಿದ್ದಾರೆ.

**ಶ್ರವಣ ದೋಷ ಸಾಧನಗಳು ಮತ್ತಿತರ ಮಾಹಿತಿಗಾಗಿ ಶ್ರೇಯಾ ಹಿಯರಿಂಗ್ ಕ್ಲಿನಿಕ್ ಸಂಖ್ಯೆ:** 1800 425 3435ಕ್ಕೆ ಸಂಪರ್ಕಸಬಹುದು. ದೂರವಾಣಿ: 080– 25012100, ಇಮೇಲ್: info@shreyahearingclinic.com ❖

ಪ್ರಜಾವಾಣಿ ಶನಿವಾರ • ಜುಲೈ 1, 2023

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

# PROPERTY CORNER
ಕ್ಲಾಸಿಫೈಡ್ಸ್

**INDUSTRIAL /COMMERCIAL PLOT REQUIREMENT**
We are looking for an Industrial/Commercial plot in Bangalore having area in between 1800 to 3500 sq. ft. on an outright immediate purchase.
The plot should have good connectivity preferably within 1 km radius of any Metro Station.
Please contact :
Mr. Prashanth at +91 8095000300
or Email prashanth@addgroup.co.in



CNR Infocity
READY TO BUILD PLOTS FOR EVERY DREAM HOME
**BMRDA**
APPROVED SITES
AVAILABLE @
**NELAMANGALA**
CONTACT FOR MORE INFORMATION
**87222 27780, 87222 27711**

**OFFICE SPACE FOR RENT- 21,662 Sq.ft.**
*Fully furnished office space available for rent at :*
**Mfar Silverline Tech Park**
2nd Floor, Plot No.180, EPIP II Phase, Whitefield, Bangalore-560066.
"Metro Station: 300 to 400 meters" distance from both sides of Kundanahalli and Vydehi Hospital.
Workstations 150nos, Cabin 13nos, Meeting Rooms 2nos, Discussion Room 4nos, with Centralized AC, Covered Car parking is 20nos, and Surface Car Parking is 17nos, Power Backup.
*For Further Details Please contact :*
Mr. Prashanth at +91 8095000300
or Email: prashanth@addgroup.co.in

**ಕನಕಪುರ ರಸ್ತೆಯಲ್ಲಿ ಮನೆ ನಿರ್ಮಾಣಕ್ಕೆ ಅತ್ಯುತ್ತಮ ನಿವೇಶನಗಳು**
**BBMP 'A' KHATA SITES**
@Thalaghattapura
**Kanakapura Road**
AMENITIES :
•Fully Compounded 6 feet Height •Underground Sanitary Lines to each Site
•Underground Power Lines to each Site •Underground Water Supply lines to each Site
•LED Street Lights with 6 Mtr. Poles •Security Gate •Black Top Roads •Well Landscaped Street Way
SITE SIZES 1200 to 1500 sqft
Highlights :
•Five Minutes walk to Thalaghattapura Metro Station
•Easy Connectivity to NICE Road
•Hubs like Jayanagar, Banashankari and J.P.Nagar
•Close proximity to International Schools and Premier Colleges,
•Falcon Forum Mall, METRO, Hotels and other Recreation Centers.
•Easy Access to Health Care Centers and Religious Places
•Upcoming Tech Park near Doddakallasandra
•Ready for Registration
•Ready for Construction
•Loan from Major Banks
SITE VISIT CALL
**7406 219 219**

## REAL ESTATE SELLING

### Sites

#### Vishweshwariah Layout

**40X60 BHARATHNAGAR** BEL Society Site Sale 60 Feet Road and 40x60 BDA 1st Block: 9964971895

**"40X60 NF** Residential BDA 5th Block Vishveshwaraiah Layout, 40X60 WF Railway Layout Sites Sale- 9845143579"

**30X40 WF** BBMP A-KATHA 40FT ROAD 8500/- MODERN LAYOUT NEAR VISHWESHWARAIAH LAYOUT 6TH BLOCK: 9916826976

#### Arkavathi Layout

**ARKAVATHI LAYOUT** 30x30, Corner North West, 2nd block 20x30 30x40, Genuine Buyer's. :USR- 7019770736/ 8951614989.

#### Banashankari

**"BANASHANKARI 2ND,** 3rd, 6th Stage Residential/ Commercial 50x80, 40x60, 45x50, 30x50, Genuine Buyers Call: 9845286505"

**AVAILABLE BDA** Sites,Banshankari6th,Stage, Anjanapura Visweswaraiah LayoutJPNagar8th,9th,Phase 20x30,30x40 40x60, 50x80,Contact Genuine Buyers: 9945778333

**40X60, 50X80** AVAILABLE FOR SALE, NORTH. EAST FACE in BANASHANKARI 6th STAGE. CALL: MANOJ 9731410616

#### HBR Layout

**PREMIUM BDA** Commercial sites for sale HBR Layout 80 Feet Road (Near BDA Complex) Contact 9844039482

#### HRBR Layout

**HRBR 2ND** Block North Facing 40x80 Site 50 Feet Road, Beautiful Location for Sale Rs 21,000 Negotiable Mobile: 73493-22223

#### Kanakapura Road

**KANAKAPURA ROAD** Kaggalipura BMRDA Approved 'E'Khata 30x40 E/F, 30X50 W/F, 3000/- Negotioble : 9740150364/9986146147

#### K R Puram

**30X40 PLOT** for Sale. Near K.R.Puram Metro, Kagadaspura Main Road, Nagappa Reddy Layout, Genuine buyer Contact: 7358274782.

#### Kempegowda Layout

**"RASHTRAKUTA LAYOUT** BDA Approved 40x60 East facing 40 feet Road near Kempegowda Layout, Sale- 5000/- P.sft. 9035277788"

**KEMPEGOWDA LAYOUT** BDA Sites for Sale Commercial 40x60, 100ft Road Near BDA Complex Mysore Road Metro: 7899570235

**"KEMPEGOWDA LAYOUT** 6th Block H Sector 50ft Road 50x80 West facing Site Sale. 7019314962/ 9845500019"

#### Nandini Layout

**SALE BDA** 37x40, South East Corner site for sale at Railway Layout, Nandini Layout Call 9844039482

#### Nelamangala

**NELAMANGALA SITE** For sale at E.K. Enclave just opp. to RTO Nelamangala. Contact Raju:- 9448082402.

#### Rajarajeshwari Nagar

**'A' KHATA** Property for Sale in RajarajeshwariNagar 30x40 and 40x60, East facing. Call: 9448288522

**R.R.NAGARA BEML** Layout 30X40 House Sale 1.60Cr. Javaregowdana Doddi 30x40 Site Sale 66L. 9148914809, 9740075563.

#### Yelahanka

30x40 Converted Plot @
**1,65,000/-**
133/- per sq.ft, 90 minutes
Journey from Yelahanka
Ready for Registration
9343510635, 9010559539

#### Rajajinagar

***RAJAJINAGAR* INDUSTRIAL** Town BDA property 60x120 and 120x120 North-West corner site for sale. Contact: 9945079777

#### Uttarahalli

**UTTARA HALLI** Site for Sale Poorna Prajna Layout 40x60 Corner Site, Brokers Excuse Mob: 9972549472

**FOR SALE** 30×40 rent yielding property in Gowdanapalya and Hrishikesh Nagar, Bangalore South. Call 9611937546

### Commercial Land

#### Mysore Road

**LAND FOR SALE**
Residential / Commercial / Educational Institutions / Industrial / Warehouse
Convertible Land
Attached to Bengaluru - Mysore Expressway (NH 274)
Near Ramnagar 3.08 Acres
Mobile: 98456 73081
98455 20505, 96634 52883
98862 57581

### Agricultural Land Converted

#### Multiple Locations

**SALE INDUSTRIAL/** Commercial/ Residential vacant land Bannerghatta Road 17000 to 70000sft, Hulimavu 3600 to 19700sft, Bidadi 17000to 87000sft. Visit vernadevelopers.com MG Road, Bangalore. 9353128035/ 9620253180

### Commerical

#### Kengeri

**SHOP FOR** Sale Ground floor 10*30, 10*30 Kengeri, Kodipalya, Post office Road. N. Shiva: 9844195881

### General

#### Multiple Locations

**BUY, SELL,** Rent Residential, industrial and farm land, office space available for rent. Contact. 9380586105.

### House

#### Banashankari

**ITTAMADU HOUSE** SALE. Ground 2 BHK, 1st, 2nd Duplex. Car Parking, Site- South, Door- East. 9945724472.

#### Hanumanthnagar

**"KATRIGUPPE A KATHA** 30x43, old demolition House 2 Crore, 15x45 old demolition House 1.15 Crore. 9845286505"

### Flat

#### J P Nagar


**SALE/ RENT** JPNagar: 5th & 6th Phase, 1 BHK and 2 BHK Apartments. Owner: 9482839075.

**J.P.NAGAR 9TH** Phase 2 BHK Flats for Sale 65,00,000/- approved by Bank of Baroda -9036706304.

#### Malleshwaram

**SALE 3BHK** apartment 1755sqft Renaissance Park-3, Malleshwaram West. price1.85 crores negotiable with 2 carparking. Contact: 9342139450

**Premium Plots for Sale**










- Gated Community
- with World Class Amenities
- RERA Approved
- All Leading Banks funding
- Ready to Registration
- Beautiful Nandi View
- 5 Star Club House
- Bang on State Highway, near Nandi Hills

Contact: 9060185719 | 9606617571 | 9060609166
Web: shrivasamontanavista.com

PROPERTY
To Place your Classified Ads Contact
9845114560

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
# ಕ್ಲಾಸಿಫೈಡ್ಸ್





## REAL ESTATE SELLING

### Flat

#### Bommanahalli

**SALE MINI** 15 Flats Apartment near Bommanahalli, Expecting 3,25,00,000/- for total Building, suitable PG -9036706304.

#### Uttarahalli

**IMAGE GREENS** Apartment 1st Floor. 1300 Sqft. 2 BHK SALE. Poornaprajna Layout, 13 Years old. Call:9945724472

### Villas/Bunglows

#### Multiple Locations

**INDEPENDANT VILLA** for Sale Spacious 6600 sq.ft. villa, built on 3600 sq.ft. East facing corner Site. 6 bedroom, 6 bathroom,Servant House, surrounded by garden on two Sides. Carpark. gated community with all amenities. No.5, Rashi Residency Located on 4 lane Magadi Road, Kadabagere Cross, Bangalore. Call: 9972300999

#### Thanisandra

**SOBHA CITY** Tanisandra Main Road, 5 BHK Row House villa for sale. Contact; Chandan: 9900665081

#### Rajarajeshwari Nagar

**RR.NAGAR 50X80** VIJAYNAGAR 60x90 Basaveswarnagar Sadashivnagar Malleswaram Kumara Park RMV 2nd Stage 2years Old Architect BUNGLOW 5Carparks Generator Modern Office Terrace Garden 5BHK A/C, Basement Remote Car Garage Door Modern Pooja Room: 9845057822/ 9980830798

## REAL ESTATE BUYING

### Agricultural Land Converted

#### Sarjapur Road

**SALE 21** Guntas residentially converted land for sale at Sarjapura Road, Sixty feet inside from Main Road. Contact: 8310818291.

### General

#### General

**WANTED 1** to 10 Acres Land for Investment, with Road, water facility, level land without Encumbrance from Silk Board to Hosur side, 50 Kms stretch. Interested Land Owners Call: 9620728917

**DC CONVERSION/** Change of land use, Phodi Durasti, NOC,Approvals, Khata, RERA Work,Para Legal Services.Barton Centre MG Road. 9916310226/ 9353128035. vernadevelopers.com

### Sites

#### Anjanapura

**WANTED SITES** ANY MEASUREMENT Anjanapura, Banashankari 6th Stage, JP Nagar 8th/ 9th Phase, Narayana Nagar Kanakapura Road, CONTACT: 9845298419

#### Banashankari

**WANTED BDASITES** Banashankari 6th Stg, Vishweswaraiah _Layout, AnjanapuraJPNagar 8th_9thPhase,20x30,30x40, 40x60,50x80,Call Genuine Sellers: 9845812635

#### Multiple Locations

**ANJANAPURA-ARKAVATHI,** Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

#### Vishweshwariah Layout

***WANTED BDA** SITES* Vishveswarayya layout, Kempegowda layout, Nagarabavi.50x80, 40x60, 30x40, 20x30. Contact: 9902556939

**BUYING/ SELLING** 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

**BDA-SITES WANTED** Kempegowda Layout Vishweshwaraiah Layout Other BDA Approved Layouts 30x40, 40x60, 50x80 Immediate Settlement Call:8660220048 7676900174

## BUILDERS ESSENTIAL

### Building Contractors

**WE WILL** undertake building constructions & renovations M/s Samruddhi infrastructures Engineers & contractors 9980632771/ 9900434127

### Water Proofing

**'WE FIX'** LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## EDUCATIONAL

### Diploma Courses

**DIPLOMA IN** Student Counselling, 6-months, ONLINE, Starts:11-July WhatsApp: 9886044221 www.darwinpsychologycentre.com

## JOB OPPORTUNITIES

### General

**REQUIRED FEMALE** TELE CALLER at ourMedahalli Office (Knowing Telugu, Kannada and Hindi). Contact 9849233939

### Teachers/ Professors

***REQUIRED EXPERIENCED*** Primary Hindi Teacher and Lady helpers (4). Contact: ROYAL PUBLIC SCHOOL,Ullal. 9035033560/ 8867569333

## BUSINESS

### Business Offers

#### General

**SUKHAM** Senior Living Home for joyful retirement living. Contact: Shrinidhi Hemmige 9945112586 www.sukhamseniorliving.com



### Finance

**NRI'S** Investment And Finance Available On Low Interest Against Properties,Land & Building,Sites,Flats,Converted & Agriculture Lands Call:7204995189

## TOURS & TRAVEL

### Travel

**CONTACT ORCHID** Travel and Tours, Basavanagudi to Book 20 Days Australia and Newzealand Group Tour, Package cost Includes Air Tickets, visa Accommodation in 4 Star Hotel, Indian Meal, Tour Manager from Bangalore, Call: 9900080796 9880100099

## PUBLIC NOTICE

### PUBLIC NOTICE

This is to inform the general public that, my client **Nagaraju. H.M** S/o Muniswamy Reddy, aged about 53 years, R/at: Handenahalli Village, Sarjapura Hobli, Anekal Taluk, Bengaluru-562125, has lost the original **SALE DEED** dated: 22-08-1990 bearing **No.954/1990-91, Book-I, Volume-1569, pages 192 to 196 registered on 05-10-1990,** registered in the office of the Sub-register Anekal, in respect of property bearing Sy.No.441/3 [old Sy.No.441) measuring 1 acre 35 guntas, situated at Bidaraguppe Village, Sarjapura Hobli, Anekal Taluk, bounded on East by: Property of M.Srinivas & M.Muniyappa, West by: Property of Venkataramanappa, Srinivas, Muniyappa, Ravi & others, North by: Property of B.Rajanna,South by: Property of Chowdappa & M.Muniyappa.

He has lodged a police complaint before Sarjapura Police Station bearing complaint **GSC No: P01334230600299, petition No:392/1334/2023** dated:29-06-2023. If any persons found the document, it is requested to hand over the same to the following address mentioned below.

In the event any person/s have not send the documents, and we have not received any claims or found of original document of the said property and we consider the original document have been lost and title of the said property is clear.

**K. R. RAMESHA REDDY,** Advocate
K.R.R. ASSOCIATES
No.272-HIG, 'B' Cross Suryanagara Phase-I, Chandapura, Bangalore-560099
Mail.id: r.ramesh7504@gmail.com
Phone No: 97434 74851, 70197 34943
Bengaluru
Date: 30-06-2023

### CAUTION NOTICE

My client, **Mr. S M Rajendra Prasad,** alias **Rajendra M Prasad**, son of Late S. A. Muni Reddy, currently residing at 460 Crisfield Drive, Abingdon, MD 21009-2061, U S A is the absolute owner of the property more fully mentioned in the Schedule below. My client had executed the General Power of Attorney dated 13-08-1976 in favour of **Mr. Shekar T Singham** (Aka., Sekhar Tulasingh), registered vide Document No. 166/76-77, Book IV, volume 103, page 23 in the office of the Sub-Registrar, Indiranagar, Bengaluru, authorising and empowering him to do certain, acts, deeds and things, mentioned with respect to the Schedule Property. My client has revoked General Power of Attorney effective 10th May 2023.

The Public is hereby advised and cautioned not to deal with Mr. **Shekar T Singham** (Aka., Shekar Tulasingh), with respect to the Schedule Property, as he is Not my Agent / Attorney Holder. Any person/s or entity dealing or transacting with **Mr.Shekar T Singham** (Aka., Sekhar Tulasingh), with respect to the said Schedule Property, will be doing so at their own cost, risk and responsibility and my client cannot be held accountable, liable or responsible for all such transactions.

**SCHEDULE**

All that piece and parcel of the Property bearing House Nos. 44/1 and 44/2, situated at D'Costa Square, Lingarajapuram, Civil Station, Bengaluru-560 005, measuring East to West 49 feet and North to South 30 feet, and bounded on the:

East by : Public Road.
West By : Private Property, Plot No. 45.
North by : Private Property, Plot No. 57.
South by : Private Property, Plot No. 44/3.

**Sushanth J Pattanshetti**
Advocate,
Jayanth Pattanshetti Associates LLP
102, Ground Floor, "Rams Infantry Manor", No. 70, Infantry Road, Bengaluru-560 001
Ph.: 080 25593195/25581469
Bengaluru
Date: 01-07-2023

### ಸಾರ್ವಜನಿಕ ಪ್ರಕಟಣೆ

ಕೊರಳೂರು ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲೂಕಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಸಂಬಂಧಿಸಿದ, ಈ ಕೆಳಗಿನ ಷೆಡ್ಯೂಲ್ ಸ್ವತ್ತಿಗೆ ತಿಳಿಸಿರುವಂತೆ ಸರ್ವೆ ನಂಬರ್‌ಗಳ ಆಯಾ ಮಾಲೀಕರ ಹಕ್ಕು, ಶೀರ್ಷಿಕೆ, ಆಸಕ್ತಿ, ಪ್ರಯೋಜನಗಳು, ಅರ್ಹತೆಗಳ ಬಗ್ಗೆ ನಾವು ತನಿಖೆ ನಡೆಸುತ್ತಿದ್ದೇವೆ ಎಂದು ಈ ಮೂಲಕ ಸಾರ್ವಜನಿಕರಿಗೆ ಪ್ರಕಟಣೆ ನೀಡಲಾಗಿದೆ.

ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಲಾದ ಅನುಕ್ರಮವಾದ ಮಾಲೀಕರಿಂದ ಆಸ್ತಿಯನ್ನು ಖರೀದಿಸಲು ಉದ್ದೇಶಿದ್ದಾರೆ. ಸದರೀ ಮಾಲೀಕರುಗಳು ತಾವು ಷೆಡ್ಯೂಲ್ ಸತಿನ ಸಂಪೂರ್ಣ ಮಾಲೀಕರು ಎಂದು ಪ್ರತಿನಿಧಿಸಿದ್ದಾರೆ ಹಾಗೂ ಇವರುಗಳ ಹೊರತಾಗಿ ಯಾವುದೇ ಇತರೇ ವ್ಯಕ್ತಿ/ ಗಳು ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಥವಾ ಭಾಧ್ಯತೆ ಹೊಂದಿರುವುದಿಲ್ಲ ಎಂದು ಪ್ರತಿನಿಧಿಸಿ, ನಮೂದಿಸಿದ ಮಾರಾಟದ ಒಪ್ಪಂದವನ್ನು ಸ್ವೀಕರಿಸುತ್ತಾರೆ.

ಒಂದು ವೇಳೆ ಸದರೀ ಸ್ವತ್ತಿನ ಬಗ್ಗೆ ಯಾವುದೇ ಆಕ್ಷೇಪಣೆ/ಗಳು ಅಥವಾ ಹಕ್ಕುಗಳನ್ನು ಹೊಂದಿರುವ ಯಾವುದೇ ವ್ಯಕ್ತಿ/ಗಳು ತಮ್ಮ ಆಕ್ಷೇಪಣೆಗಳನ್ನು ಅಥವಾ ಹಕ್ಕುಗಳನ್ನು ತಮ್ಮ ದಾಖಲಾತಿಗಳೊಂದಿಗೆ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ ಕೆಳ ಸಹಿದಾರರಿಗೆ ಸಲ್ಲಿಸಬೇಕು. ಒಂದುವೇಳೆ ಯಾವುದೇ ವ್ಯಕ್ತಿ/ಗಳು ತಿಳಿಸಿರುವ ಕಾಲಾವಧಿಯೊಳಗೆ ಪುರಾವೆಗಳನ್ನು ಸಲ್ಲಿಸಲು ವಿಫಲವಾದಲ್ಲಿ ಸದರೀ ಸ್ವತ್ತಿನ ಮೇಲೆ ಯಾವುದೇ ರೀತಿಯ ಆಕ್ಷೇಪಣೆ/ಗಳಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರನು ಮೇಲೆ ತಿಳಿಸಿದ ವ್ಯವಹಾರದೊಂದಿಗೆ ಮುಂದುವರಿಯುತ್ತಾರೆ ಎಂದು ಈ ಮೂಲಕ ಪ್ರಕಟಣೆ ನೀಡಲಾಗಿದೆ.

**ಆಸ್ತಿಯನ್ನು ನಿಗದಿಪಡಿಸಿ**

**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಜಿಲ್ಲೆ, ಕೊರಲೂರು ಗ್ರಾಮ ಕಸಬಾ ಹೋಬಳಿಯಲ್ಲಿ ನೆಲೆಗೊಂಡಿರುವ ಈ** ಕೆಳಗೆ ವಿವರಿಸಿದ ಭೂ ಭಾಗಗಳ ತುಂಡು ಮತ್ತು ಭಾಗ

| | ಸರ್ವೆ ನಂ | ಭೂಮಿಯ ವಿಸ್ತಾ | | ಮಾಲೀಕರು/ಗಳ ಹೆಸರು | ಚಕ್ಕುಬಂದಿ |
|---|---|---|---|---|---|
| | | ಎಕರೆ | ಗುಂಟಗಳು | | |
| 1 | ಸರ್ವೆ ನಂ.95/2ಬಿ (ಹಳೆಯ ಸರ್ವೆ | 1 | 23 ಮತ್ತು 0.04 ಗುಂಟಾ ಖರಾಬ್ನ | ವೈ.ವಿ.ಪ್ರಸಾದ್. ವೈ.ಆರ್.ಸುನೀಲ್ ಮತ್ತು ವೈ.ಆರ್.ಅನಿಲ್ | ಪೂರ್ವಕ್ಕೆ: ಸರ್ವೇ ನಂ, 94/5 ರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಫೈಕಸ್ ಪ್ಯಾಕ್ಸ್ ಪ್ರೈವೇಟ್ ಲಿಮಿಟೆಡ್ ರವರ ಜಮೀನು ದಕ್ಷಿಣಕ್ಕೆ : ಸರ್ವೇ ನಂ, 95/3 ರ ಜಮೀನು, |
| 2 | ಸರ್ವೆ ನಂ.95/2ಎ, ಹಳೆಯ ಸರ್ವೆ ನಂ.95/2 | 0 | 33 | ಎಂ.ಎ.ಎ.ರೆಹಮಾನ್ ಸೇಟ್ ಅಲಿಯಾಸ್ ಅಮೀನ್ ರಹಮಾನ್ ಮತ್ತು ಕ್ಯಾಪ್ಟನ್ ಭರ್ತೂರ್ ರಾಮಸ್ವಾಮಿ ವಿಜಯೇಂದ್ರ | ಪೂರ್ವಕ್ಕೆ : ವೈ.ವಿ.ಪ್ರಸಾದ್ ಮತ್ತು ಇತರರ ಜಮೀನು, (ಸರ್ವೆ ನಂ.94/5) ಪಶ್ಚಿಕ್ಕೆ : ರಸ್ತೆ, ಉತ್ತರಕ್ಕೆ : ಸರ್ವೇ ನಂ.95/1A ರ ಜಮೀನು ದಕ್ಷಿಣಕ್ಕೆ : ಫೈಕಸ್ ಪ್ಯಾಕ್ಸ್ ಪ್ರೈವೇಟ್ ಲಿಮಿಟೆಡ್ ರವರ ಜಮೀನು,(ಸರ್ವೆ ನಂ.95/2A ರ ಉಳಿಕೆ ಜಮೀನು). |
| 3 | ಸರ್ವೆ ನಂ.95/2ಎ, ಹಳೆಯ ಸರ್ವೆ ನಂ.95/2, | 0 | 34 ½ | ಫೈಕಸ್ ಪ್ಯಾಕ್ಸ್ ಪ್ರೈವೇಟ್ ಲಿಮಿಟೆಡ್, ಕೊರಳೂರು. | ಪೂರ್ವಕ್ಕೆ : ವೈ.ವಿ.ಪ್ರಸಾದ್ ಮತ್ತು ಇತರರ ಜಮೀನು, (ಸರ್ವೆ ನಂ.94/5) ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸರ್ವೇ ನಂ.95/2A ಉಳಿಕೆ ಜಮೀನು (ಅಮೀನ್ ರೆಹಮಾನ್ ಮತ್ತು ವಿಜೇಂದ್ರರವರ ಜಮೀನು) ದಕ್ಷಿಣಕ್ಕೆ : ವೈ.ವಿ.ಪ್ರಸಾದ್ ರವರ ಜಮೀನು (ಸರ್ವೆ ನಂಬರ್ 95/2B) |
| 4 | ಸರ್ವೆ ನಂ.94/5, | 0 | 03 | ವೈ.ವಿ.ಪ್ರಸಾದ್. ವೈ.ಆರ್.ಸುನೀಲ್ ಮತ್ತು ವೈ.ಆರ್.ಅನಿಲ್ | ಪೂರ್ವಕ್ಕೆ: ಸರ್ವೇ ನಂ, 94/2 ಮತ್ತು 94/3 ರ ಜಮೀನು, (ಸೇಫೆಕ್ಸ್ ಕಂಪೆನಿಗೆ ಸೇರಿದ ಜಮೀನು), ಪಶ್ಚಿಮಕ್ಕೆ : ಸರ್ವೇ ನಂ, 95/2A ಮತ್ತು 95/2B ರ ಜಮೀನು, ಉತ್ತರಕ್ಕೆ: ಸರ್ವೇ ನಂ, 94/4 ಜಮೀನು, ದಕ್ಷಿಣಕ್ಕೆ : ಸರ್ವೇ ನಂ, 94/6 ರ ಜಮೀನು, (ಸೇಫೆಕ್ಸ್ ಕಂಪೆನಿಗೆ ಸೇರಿದ ಜಮೀನು), |

ಬೆಂಗಳೂರು\
ದಿನಾಂಕ: 01/07/2023

**ಟ್ರಸ್ಟ್ ಲಾ, ಕಾನೂನು ಸಲಹೆಗಾರರು ಮತ್ತು ವಕೀಲರು,**
ನಂ.29/11, 1ನೇ ಮುಖ್ಯ ರಸ್ತೆ, ಮೌಂಟ್ ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು-560 019, ಕರ್ನಾಟಕ -9448981486 । ಇಮೇಲ್ – realestate@trustlaw.in

## PERSONAL

### Change of Name

**CHANGE OF NAME**

I, Anitha Menon W/o Sukumar Menon, aged 61 yrs, residing at flat no G6, DSR Fairmont apartment, Margosa lane, Green Glen layout, Bellandur, Bangalore-560103, declare that Anitha Menon and Anitha sukumar Menon pertains to me and both single and same person and henceforth I will be known as Anitha sukumar Menon and this is the correct name vide affidavit dated 15th April 2023 (IN-KA41487298031502V) sworn before Yankoba, advocate and notary, varathur, Bangalore - 560087.

**I, JAGDISH** BAHADURI S/o.Mahadeo Ramappa Bahaduri, R/a#402, Silver_Cloud Apartments, Royal Enclave_Layout, Srirampura, Bengaluru - 560064 Have Changed My_Name_to JAGDISH MAHADEO BAHADURI vide`Affidavit Dated:30.6.2023 Sworn`Before Notary L.B. Anasuyamma, Bengaluru-13.

**CHANGE OF NAME**

I, **YAMANURI** son of Hullappa residing at No. 94/D 4th cros, Kottage palya, Bengaluru-560091 have changed my name to **RAVISHANKAR** vide affidavit dated 27.6.2023 before notary B.R. Shashikala Bengaluru

**I, MRS.** Kalyani Nuthakki W/o Sreenivas Nuthakki have changed my daughter name from Sri Sanjana to Sri Sanjana Nuthakki Affidavit dated: 28/06/2023 Yankoba

**CHANGE OF NAME**

I, **CIRAL RAMAKRISHNA,** R/at.# 603, 15th A Main Road, 1st Phase, Gokula, Mathikere, Bangalore- 560054 have changed my minor son's name from **ATHARVA** to **ATHARVA CIRAL** vide affidavit dt.30/06/2023 before Notary Chandrakala, Bengaluru

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331